بِسْمِ اللهِ الرَّحْمٰنِ الرَّحِيْمِ   نَحْمَدُهٗ وَنُصَلِّی عَلٰی رَسُوْلِهِ الْكَرِيْمِ   وَعَلٰی عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 04

ಕನ್ನಡ **ಬದರ್** ವಾರ ಪತ್ರಿಕೆ
WEEKLY BADAR QADIAN KANNADA

ಸಂಚಿಕೆ: 26

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

29 ಜೂನ್ 2023, 29 ಎಹ್ಸಾನ್ 1402 ಹಿಜರಿ ಶಮ್‌ಸಿ,
10 ಝಿಲ್‌ಹಜ್ಜ 1444 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

يٰۤاَيُّهَا الَّذِيْنَ اٰمَنُوْۤا اِنْ تَتَّقُوا اللّٰهَ يَجْعَلْ
لَّكُمْ فُرْقَانًا وَّيُكَفِّرْ عَنْكُمْ سَيِّاٰتِكُمْ
وَيَغْفِرْ لَكُمْ ؕ وَاللّٰهُ ذُو الْفَضْلِ الْعَظِيْمِ

(ಅಲ್-ಅನ್‌ಫಾಲ್: 30)

ಅಂದರೆ: ಎಲೈ ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನಲ್ಲಿ ಭಯಭಕ್ತಿ ಇರಿಸಿಕೊಂಡರೆ, ಅವನು ನಿಮಗೆ ವೈಶಿಷ್ಟ್ಯ ಪೂರ್ಣ ವಿವೇಚನೆಯನ್ನು ನೀಡಿ ನಿಮ್ಮ ದೌರ್ಬಲ್ಯಗಳನ್ನು ಹೋಗಲಾಡಿಸಿ ನಿಮಗೆ ಕ್ಷಮೆ ನೀಡುವನು. ಅಲ್ಲಾಹನು ಮಹತ್ವಪೂರ್ಣ ಅನುಗ್ರಹಗಳ ಒಡೆಯನಾಗಿದ್ದಾನೆ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

**(2388)** ಹಝ್‌ರತ್ ಅಬೂದ್ದರ್(ರ) ವರದಿ ಮಾಡುತ್ತಾರೆ. ನಾನು ನಬಿ(ಸ) ರವರ ಜೊತೆಯಲ್ಲಿದ್ದೆ. ಆಗ ಅವರು (ಸ) ಉಹದ್ ಪರ್ವತವನ್ನು ನೋಡಿ ಹೇಳಿದರು. ಈ ಪರ್ವತ ನನಗಾಗಿ ಚಿನ್ನದಲ್ಲಿ ಮಾರ್ಪಡಿಸಿ ಕೊಟ್ಟರೆ ಅದು ನನಗೆ ಇಷ್ಟವಿಲ್ಲ, ಅದರಲ್ಲಿನ ಒಂದು ದೀನಾರು ಸಹ ನನ್ನ ಬಳಿ ಮೂರು ದಿನಗಳಿಗಿಂತ ಹೆಚ್ಚು ಇರಿಸಿಕೊಳ್ಳಲು ಬಯಸುವುದಿಲ್ಲ. ಸಾಲ ತೀರಿಸುವ ಕಾರಣವಿದ್ದರೆ ಹೊರತುಪಡಿಸಿ, ಮತ್ತು ಅವರು(ಸ) ಹೇಳಿದರು. ಒಬ್ಬನು ಎಷ್ಟು ಶ್ರೀಮಂತನಾಗುವನು, ಅವನು ಅಷ್ಟೇ ಹೆಚ್ಚು ಅಗತ್ಯವುಳ್ಳವನಾಗಿರುತ್ತಾನೆ. ತನ್ನ ಸಂಪತ್ತನ್ನು ಖರ್ಚು ಮಾಡುವವನ ವ್ಯಕ್ತಿಯ ಹೊರತುಪಡಿಸಿ ಇನ್ನಲ್ ಅಕ್ಸರೀನ ಹುಮುಲ್ ಅಬಲ್ಲೂನ್: ಹಝ್‌ರತ್ ಸಯ್ಯದ್ ಝೈನು ಆಬಿದೀನ್ ವಲಿಯುಲ್ಲಾಹ್ ಶಾಹ್ ಸಾಹಿಬ್ ಹೇಳುತ್ತಾರೆ. ಈ ವಾಕ್ಯ ಜವಾಮೆಉಲ್ ಕಲಮ್‌ನಿಂದ ಆರಿಸಿಕೊಂಡದ್ದಾಗಿದೆ ಅದರ ಭಾವ ಹೀಗಿದೆ. ಹಣ ಕೂಡಿಸುವುದು ಶ್ರೀಮಂತಿಕೆ ಅಲ್ಲ ಬದಲು ಶ್ರೀಮಂತರ ಪೈಕಿ ಹೆಚ್ಚಿನವರು ನೈತಿಕತೆ ಯಿಂದ ವಂಚಿತರಾಗಿರುವ ಕಾರಣ ಬಡವರಾಗಿಯೇ ಉಳಿದುಕೊಳ್ಳುತ್ತಾರೆ. ಶ್ರೀಮಂತಿಕೆ ಸಂಪತ್ತು ಕೂಡಿರುವುದರಲ್ಲಿ ಇಲ್ಲ. ಬದಲು ಎಡ ಬಲ ಖರ್ಚು ಮಾಡುವುದರಲ್ಲಿದೆ. ಎಂದರೆ ಧಾರ್ಮಿಕ ಹಾಗೂ ಲೌಕಿಕ ಕಾರಣಗಳಿಗೆ ಖರ್ಚು ಮಾಡುವುದರಿಂದ ಸಂಪತ್ತಿನ ಉದ್ದೇಶ ಪೂರ್ತಿಯಾಗುತ್ತದೆ. ವ್ಯಕ್ತಿಯೊಬ್ಬನು ಹಣ ಸಂಗ್ರಹಿಸಿ ಇಟ್ಟು, ಹಕ್ಕುಗಳನ್ನು ಪಾಲಿಸದಿದ್ದರೆ, ಅವನೇ ಎಲ್ಲರಿಗಿಂತ ಹೆಚ್ಚು ಬಡವನಾಗಿರುವನು. ಆದರೆ ಯಾವ ವ್ಯಕ್ತಿ ತನ್ನ ಸಂಪತ್ತಿನಿಂದ ಹಕ್ಕುಗಳನ್ನು ಪಾಲಿಸುತ್ತಾನೆ ಅವನೇ ಹೆಚ್ಚು ಶ್ರೀಮಂತ, ಅವನು ಸಂಪತ್ತಿನ ಉದ್ದೇಶ ಪೂರ್ಣಗೊಳಿಸಿರುವನು. ಹಝ್‌ರತ್ ಪೈಗಂಬರ್(ಸ) ರವರ ಸಂಪತ್ತಿನ ಕುರಿತ ಅಭಿಪ್ರಾಯ ಎಷ್ಟೊಂದು ಸಮಂಜಸ ಮತ್ತು ಜ್ಞಾನಪುರ್ಣವಾಗಿತ್ತೆಂದರೆ ಅದು ಅವರ ಪರಿಶುದ್ಧ ಗುಣ, ಅವರ ಈ ನುಡಿಯಿಂದ ಸ್ಪಷ್ಟವಾಗುತ್ತದೆ. ಉಹದ್ ಪರ್ವತದಷ್ಟು ಚಿನ್ನವು ನನ್ನ ಬಳಿಯಿದ್ದರೆ ಹಕ್ಕುಗಳ ಪೂರ್ತಿಯಲ್ಲಿ ಅದೆಲ್ಲ ಖರ್ಚು ಆಗುವವರೆಗೂ ನನಗೆ ಸಂತೋಷವಿರುವುದಿಲ್ಲ. **(ಸಹೀಹ್ ಬುಖಾರಿ, ಸಂಪುಟ-4, ಮುದ್ರಣ 2008 ಖಾದಿಯಾನ್)**

**ನಿಜವಾದ ಸಹಾಯ ಬೇಡುವ ಹಕ್ಕು ಅಲ್ಲಾಹನೊಂದಿಗೆ ಮಾತ್ರವಾಗಿದೆ. ಬೇರೆ ಯಾವ ಸೃಷ್ಟಿಗೂ ಅದು ಆಕಾಶಕ್ಕೆ ಸಂಬಂದಿಸಿದ್ದಾಗಲಿ ಅಥವಾ ಭೂಮಿಗೆ ಸಂಬಂದಿಸಿದಾಗಲಿ ಈ ಹಕ್ಕು ಇಲ್ಲ. ಮನುಷ್ಯನ ಪ್ರಿಯನು, ಆರಾಧ್ಯನು ಮತ್ತು ಉದ್ದೇಶ ಅಲ್ಲಾಹನೇ ಆಗಿರಬೇಕಾಗಿದೆ.**

## ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ಸಹಾಯ ಅಲ್ಲಾಹನಿಂದ ಮಾತ್ರ ಬೇಡಬೇಕಾಗಿದೆ:

ಸಹಾಯ ಬೇಡುವವಾಗ ಈ ಮಾತನ್ನು ನೆನಪಿಡಬೇಕು. ನಿಜವಾದ ಸಹಾಯ ಬೇಡುವ ಹಕ್ಕು ಅಲ್ಲಾಹನಿಂದ ಮಾತ್ರವಾಗಿದೆ. ಬೇಡಿಕೆಗಳನ್ನು ಈಡೇರಿಸುವ ಹಕ್ಕು ಅಲ್ಲಾಹನಿಗೆ ಮಾತ್ರವಿದೆ. ಇದರ ಬಗ್ಗೆ ಪವಿತ್ರ ಖುರ್‌ಆನ್ ಒತ್ತಿ ಹೇಳಿದೆ. ಆದ್ದರಿಂದ ಅಲ್ಲಾಹನು ಹೇಳಿದನು. **ಇಯ್ಯಾಕ ನಅಬುದು, ವ ಇಯ್ಯಾಕ ನಸ್‌ತಈನ್** (ಅಲ್ ಫಾತಿಹ-5) ಮೊದಲು ತನ್ನ ದೈವಿಕ ಗುಣಗಳಾದ, ರಬ್ (ಪರಿಪಾಲಕ) **ರಹಮಾನ್**(ಪರಮ ದಯವಂತ) **ರಹೀಮ್** (ಕರುಣಾನಿಧಿ) **ಮಾಲಿಕಿ ಯೌಮಿದ್ದೀನ್** (ಅಂತ್ಯ ತೀರ್ಮಾನ ದಿನದ ಒಡೆಯ ಎಂದು ಸ್ಪಷ್ಟಪಡಿಸಿದನು. ಮತ್ತು ಕಲಿಸಿಕೊಟ್ಟನು. **ಇಯ್ಯಾಕ ನಅಬುದು, ವ ಇಯ್ಯಾಕ ನಸ್‌ತ ಈನ್,** ಎಂದರೆ ನಾವು ನಿನ್ನನ್ನೇ ಆರಾಧಿಸುತ್ತೇವೆ ಮತ್ತು ನಿನ್ನಿಂದಲೇ ಸಹಾಯ ಕೂಡ ಬೇಡುತ್ತೇವೆ. ಇದರಿಂದ ತಿಳಿದುಬರುವುದೇನೆಂದರೆ, ಸಹಾಯ ಮಾಡುವ ನಿಜವಾದ ಹಕ್ಕು ಅಲ್ಲಾಹನಿಗೆ ಮಾತ್ರವಿದೆ ಯಾವುದೆ ಮನುಷ್ಯ, ಪ್ರಾಣಿ, ಪಕ್ಷಿ, ಜಾನುವಾರು, ಒಟ್ಟಿನಲ್ಲಿ ಯಾವ ಸೃಷ್ಟಿಗೂ ಅದು ಆಕಾಶಕ್ಕೆ ಸಂಬಂಧಿಸಿದ್ದಾಗಲಿ, ಅಥವಾ ಭೂಮಿಗೆ ಸಂಬಂಧಿಸಿದ್ದಾಗಲಿ ಈ ಹಕ್ಕು ಇಲ್ಲ, ಆದರೆ ಹೌದು ಇನ್ನೊಂದು ರೀತಿಯಲ್ಲಿ ಪರೋಕ್ಷವಾಗಿ, ಸಾದೃಶ್ಯ ರೂಪದಲ್ಲಿ ಈ ಹಕ್ಕು ಅಹಲುಲ್ಲಾಹ್ (ದೇವ ಪುರುಷರಿಗೆ) ಮತ್ತು ದೇವಜ್ಞಾನ ಉಳ್ಳವರಿಗೆ ನೀಡಲಾಗಿದೆ. ಯಾವುದೇ ಮಾತಾಗಲಿ ಅದು ನಮ್ಮ ಕಡೆಯಿಂದ ಸೃಷ್ಟಿಸಿಕೊಳ್ಳುವ ಅಗತ್ಯವಿಲ್ಲ. ಬದಲು ಅಲ್ಲಾಹನ ಆದೇಶ ಹಾಗೂ ಪೈಗಂಬರ್ (ಸ) ರವರ ಹೇಳಿಕೆಗಳಿಗೆ ಒಳಪಟ್ಟಿರಬೇಕು. ಅದರ ಹೆಸರೇ ಸರಿಯಾದ ಮಾರ್ಗ (ಸಿರಾತೆ ಮುಸ್ತಖೀಮ್) ಎಂದಾಗಿದೆ. ಮತ್ತದು **"ಲಾ ಇಲಹ ಇಲ್ಲಾಲ್ಲಾಹ ಮುಹಮ್ಮದುರ್ ರಸೂಲುಲ್ಲಾಹ್"** ದಿಂದಲೂ ಚೆನ್ನಾಗಿ ಅರಿತುಕೊಳ್ಳಬಹುದಾಗಿದೆ. ಅದರ ಮೊದಲ ಭಾಗದಿಂದ ತಿಳಿದುಬರುತ್ತದೆ. ಮನುಷ್ಯನ ಪ್ರಿಯನು, ಆರಾಧ್ಯ ಹಾಗೂ ಉದ್ದೇಶ ಅಲ್ಲಾಹನೇ ಆಗಿರಬೇಕು.

**(ಮಲ್ಫೂಝಾತ್ ಸಂಪುಟ 1, ಪುಟ 462, ಮುದ್ರಣ 2018 ಖಾದಿಯಾನ್)**

**ಪವಿತ್ರ ಖುರ್‌ಆನ್‌ನ ಎಲ್ಲದಕ್ಕಿಂದ ಮುಖ್ಯ ಆಜ್ಞೆಯು ಏಕದೇವೋಪಾಸನೆಯನ್ನು ಸ್ಥಾಪಿಸುವುದು ಮತ್ತು ಬಹುದೇವತಾವಾದವನ್ನು ತಿರಸ್ಕರಿಸುವುದಾಗಿದೆ.**

**ತೌಹೀದ್ (ಏಕದೇವೋಪಾಸ) ಗೆ ಆದ್ಯತೆ ನೀಡಿರುವ ಕಾರಣವೇನೆಂದರೆ ಯಾವುದೇ ಪಾಪವೂ ಶಿರ್ಕ್ (ಬಹುದೇವತಾವಾದವನ್ನು) ಇಲ್ಲದೆ ಹುಟ್ಟುವುದಿಲ್ಲ**

**ತಪ್ಪಿತಸ್ಥ ವ್ಯಕ್ತಿಯು ಪಾಪ ಮಾಡುವುದು ಏಕೆಂದರೆ ಅವನು ಸರ್ವಶಕ್ತನಾದ ಅಲ್ಲಾಹನ ಸ್ವಭಾವ ಮತ್ತು ಗುಣಲಕ್ಷಣಗಳಲ್ಲಿ ಸಂಪೂರ್ಣ ನಂಬಿಕೆ ಮತ್ತು ವಿಶ್ವಾಸವನ್ನು ಹೊಂದಿರುವುದಿಲ್ಲ.**

ಸಯ್ಯಿದ್‌ನಾ ಹಝ್‌ರತ್ ಮುಸ್ಲಿಹ್ ಮೌಊದ್(ರ) ಸೂರಃ ಬನೀ ಇಸ್ರಾಈಲ್‌ನ ಆಯತ್ 24 **ವಖಝಾ ರಬ್ಬುಕ ಅಲ್ಲಾ ತಅ್‌ಬುದು ಇಲ್ಲಾ ಇಯ್ಯಾಹು ವಬಿಲ್ ವಾಲಿದೈನಿ ಇಹ್ಸಾನ; ಇಮ್ಮಾ ಯಬ್ಲುಗನ್ನ ಇಂದಕಲ್ ಕಿಬರ ಅಹದುಹುಮಾ ಔ ಕಿಲಾಹುಮಾ ಫಲಾ ತಖುಲ್ಲಹುಮಾ ಉಫ್‌ಯ್ಯುಂ ವಲಾ ತನ್‌ಹರ್‌ಹುಮಾ ವ ಖುಲ್ಲಹುಮಾ ಖೌಲನ್ ಕರೀಮ** (ಅನುವಾದ: ನಿನ್ನ ಪ್ರಭು ಆಜ್ಞಾಪಿಸುತ್ತಾನೆ: "ಅವನ (ಅಲ್ಲಾಹನ) ಹೊರತು ಬೇರೆ ಯಾರನ್ನೂ ಆರಾಧಿಸಬೇಡ. ಮಾತಪಿತರೊಡನೆ ಉತ್ತಮವಾಗಿ ವರ್ತಿಸು. ಅವರಲ್ಲಿ ಒಬ್ಬರು ಅಥವಾ ಇಬ್ಬರು ಸಹ ನಿನ್ನ ಬಳಿ ವೃದ್ಧಾಪ್ಯ ಪಡೆದರೆ, ನೀನು ಅವರೊಡನೆ ನಿಂದನೆಯ ಮಾತನ್ನು ಆಡಬಾರದು. ನೀನು ಅವರೊಡನೆ ಗದರಿಸಿ ಮಾತನಾಡಲೂ ಬಾರದು. ಅವರಿಬ್ಬರೊಡನೆಯೂ ನೀನು ಸೌಮ್ಯವಾಗಿಯೂ ಆದರದಿಂದಲೂ ಮಾತನಾಡು.) ನ ವ್ಯಾಖ್ಯಾನದಲ್ಲಿ ಹೇಳುತ್ತಾರೆ:

ಈಗ ಸರ್ವಶಕ್ತನಾದ ಅಲ್ಲಾಹನು ಮನುಷ್ಯನು ತನ್ನ ವ್ಯವಸ್ಥೆಯನ್ನು ಸುರಕ್ಷಿತವಾಗಿರಿಸಿಕೊಳ್ಳುವ ಉತ್ತಮವಾದ ವಿಧಾನವನ್ನು ಹೇಳುತ್ತಾನೆ. ಪವಿತ್ರ ಖುರ್‌ಆನ್‌ನ

*(ಪುಟ ಸಂಖ್ಯೆ-09 ರಲ್ಲಿ ಮುಂದುವರಿಸಲಾಗಿದೆ)*

# ಮನೆಗಳ ಹೆಸರು ಇಡುವ ಬಗ್ಗೆ

**(ಹಝ್ರತ್ ಮೀರ್ ಮುಹಮ್ಮದ್ ಇಸ್‌ಹಾಖ್ ಸಾಹಿಬ್(ರ))**

ಹಿಂದಿನ ಸಂಚಿಕೆಯಲ್ಲಿ ಹಝ್ರತ್ ಮೀರ್ ಮುಹಮ್ಮದ್ ಇಸ್ಮಾಈಲ್ ಸಾಹಿಬ್(ರ) ಅವರ ಒಂದು ಪ್ರಬಂಧ "ಮನೆ ನಿರ್ಮಿಸುವ ಬಂಧುಗಳು ತಮ್ಮ ಮನೆಗಳ ಹೆಸರನ್ನು ಅವಶ್ಯಕವಾಗಿ ಇಡಬೇಕು" ಶೀರ್ಷಿಕೆ ಅಲ್-ಫಝ್ಲ್ ಆಗಸ್ಟ್ 1936 ರಿಂದ ಪ್ರಕಟಿಸಲಾಗಿತ್ತು. ಈ ಪ್ರಬಂಧವನ್ನು ಓದಿದ ನಂತರ ಅಲ್‌ಫಝ್ಲ್‌ನ ಮುಂದಿನ ಸಂಚಿಕೆಯಲ್ಲಿ ಹಝ್ರತ್ ಮೀರ್ ಮುಹಮ್ಮದ್ ಇಸ್‌ಹಾಖ್ ಸಾಹಿಬ್(ರ) ಅವರೊಂದು ಲೇಖನವು ಪ್ರಕಟವಾಗಿದೆ ಅಂದರೆ ಮನೆ ಹುಡುಕಲು ಕೇವಲ ಮನೆಗಳ ಹೆಸರು ಮಾತ್ರ ಸಾಕಾಗುವುದಿಲ್ಲ. ಬದಲಿಗೆ ಮನೆ ಯಜಮಾನನ ಹೆಸರು ಸಹ ಬರೆಯುವುದು ಅವಶ್ಯಕ ಹಾಗೂ ಉಚಿತ ಎನಿಸುವುದು. ಅಲ್ಲದೇ ಹೆಸರಿನ ಹೊರತಾಗಿ ಮನೆಯ ಹಣೆಪಟ್ಟಿಯಲ್ಲಿ ಏನೆಲ್ಲ ಬರೆಯಬಹುದು ಎಂಬ ಹೆಚ್ಚಿನ ಮಾಹಿತಿಗಾಗಿ ಈ ರೋಚಕ ಲೇಖನ ಓದುವುದು ಅನಿವಾರ್ಯವಾಗಿದೆ.

ಅಲ್-ಫಝ್ಲ್ ಪತ್ರಿಕೆಯಲ್ಲಿ "ದಿಕ್ರ್ ವ ಫಿಕ್ರ್" ಶೀರ್ಷಿಕೆ ಅಡಿಯಲ್ಲಿ ಒಂದು ಪ್ರಬಂಧ ಪ್ರಕಟವಾಗಿತ್ತು. ಅಹ್ಮದಿ ಬಾಂಧವರು ತಮ್ಮ ಮನೆಗಳ ಹೆಸರನ್ನಿಟ್ಟು ಮನೆಯ ಮೇಲೆ ಎಲ್ಲರಿಗೂ ಕಾಣುವಂತೆ ಬರೆಯಬೇಕು. ಅದರಿಂದ ಮನೆ ಹುಡುಕಿ ಬರುವವರಿಗೆ ಸವಲತ್ತು ಆಗುವುದು. ಒಳ್ಳೆಯ ಹೆಸರಿನಿಂದ ದುಆ ಮತ್ತು ಕ್ರಿಯೆಯ ಪ್ರಯೋಜನ ದೊರಕುವಂತಾಗುವುದು. ಆದರೆ ನನ್ನ ದೃಷ್ಟಿಯಲ್ಲಿ ಮನೆ ಹುಡುಕಲು ಸವಲತ್ತಿಗಾಗಿ ಕೇವಲ ಮನೆಯ ಹೆಸರಿಡುವುದು ಸಾಕಾಗುವುದಿಲ್ಲ. ಬದಲು ಮನೆಯ ಮಾಲೀಕನ ಹೆಸರು ಬರೆಯುವುದು ಇನ್ನೂ ಉತ್ತಮವಾಗಬಹುದು. ಏಕೆಂದರೆ ಸಾವಿರಾರು ಅಹ್ಮದಿ ಅಲ್-ಫಝ್ಲ್ ಮತ್ತು ಸಂಘಟನೆಯ ಪತ್ರಿಕೆಗಳು ಓದಿದ್ದರೂ ಅದಾರುಲ್ ಹಮ್ದು" ಬಳಿಯಿಂದ ಹೋದರೆ, ಅವರಿಗೆ ಮೊದಲೇ ಈ ಮನೆ ಯಾರದದು ಎಂದು ತಿಳಿಯದಿದ್ದರೆ ಕೇವಲ "ದಾರುಲ್ ಹಮ್ದು" ಹೆಸರು ಓದಿಕೊಂಡರೂ ಈ ಮನೆ ಯಾರದ್ದು ಎಂದು ತಿಳಿದು ಬರಲಿಕ್ಕಿಲ್ಲ. ಆದ್ದರಿಂದ 'ದಾರುಲ್ ಹಮ್ದು" ಹೆಸರು ಓದಿಕೊಂಡರೂ ಈ ಮನೆ ಯಾರದ್ದು ಎಂದು ತಿಳಿದು ಬರಲಿಕ್ಕಿಲ್ಲ. ಆದ್ದರಿಂದ "ದಾರುಲ್ ಹಮ್ದು' ಬರೆಯುವ ಜಾಗದಲ್ಲಿ ಮನೆ ಮಾಲೀನ ಹೆಸರು ಎಂದರೆ ಹಝುರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಸಾನಿ(ರ) ಹೆಸರು ಬರೆಯಲಾಗಿದ್ದರೆ ಒಬ್ಬ ಅಹ್ಮದಿಯು ಸಹ ಹುಝೂರರ ಹೆಸರು ಓದಿ ಗುರುತಿಸದೇ ಇರಲಾರನು. ಆದ್ದರಿಂದ ಮನೆಯನ್ನು ಹುಡುಕಲು ಕೇವಲ ಮನೆಯ ಹೆಸರಿಡುವುದು ಸಾಕಾಗುವುದಿಲ್ಲ. ಮನೆಯ ಮೇಲೆ ಬರೆದರೂ ಸಾಕಾಗುವುದಿಲ್ಲ. ಬದಲು ಈ ಉದ್ದೇಶಕ್ಕಾಗಿ ಕೇವಲ ಮನೆಯ ಮಾಲೀಕನ ಹೆಸರು ಬರೆದರೆ ಸಾಕು. ಹೌದು ದುಆ ಮತ್ತು ಸದ್ಭಾವನೆ ಹಾಗೂ ಕೃತಜ್ಞತೆ ವ್ಯಕ್ತಪಡಿಸಲು ತನ್ನ ಮನೆಯ ಒಳ್ಳೆಯ ಹೆಸರನ್ನಿಡುವುದು ಉತ್ತಮ ಅಲ್ಲದೆ ಒಳ್ಳೆಯ ಹವ್ಯಾಸ ಮತ್ತು ಉತ್ತಮ ಸಂಸ್ಕೃತಿಯಾಗುವುದು. ವಿಶೇಷವಾಗಿ ಮನೆಯ ಹೆಸರು ಹೇಗಿರಬೇಕೆಂದರೆ ಅದರ ಜೊತೆ ಮನೆ ನಿರ್ಮಾಣವಾದ ತಾರೀಖ್ ಸಹ ಮೂಡಿ ಬರಬೇಕು.

ಒಟ್ಟಿನಲ್ಲಿ ನಾನು ಈ ವಿಧಾನವನ್ನು ಪೂರ್ಣವಾಗಿ ಸಮ್ಮತಿಸುತ್ತಾ ಬಂಧುಗಳ ಗಮನ ಇನ್ನೊಂದೆಡೆ ಸೆಳೆಯಬಯಸುತ್ತೇನೆ. ಅದೇನೆಂದರೆ ನಮ್ಮ ಮಿತ್ರರು ಈ ಪದಗಳನ್ನು ಅವಶ್ಯಕವಾಗಿ ಬರೆಸಬೇಕು. **"ಮಾಶಾಅಲ್ಲಾಹ್" "ಲಾ ಖುವ್ವತ್ ಇಲ್ಲಾ ಬಿಲ್ಲಾ"**. ಏಕೆಂದರೆ ಮನೆ ಒಳಗೆ ಪ್ರವೇಶ ಮಾಡುವಾಗ ಈ ಪದಗಳು ಅವರ ಮುಂದೆ ಬರಬೇಕು ಮತ್ತು ನಾಲಿಗೆ ಹಾಗೂ ಹೃದಯದಲ್ಲಿ ಕನಿಷ್ಠ ಮಟ್ಟ ಈ ಪದಗಳು ಹಾಯಿಸಿ ಹೋದಂತಾಗಬೇಕು. ತನ್ನ ಈ ಸಲಹೆ ಪವಿತ್ರ ಖುರ್‌ಆನ್‌ನ ಒಂದು ಘಟನೆಯಿಂದ ಪ್ರೇರಿತವಿದೆ. ಹೂವು, ಹಣ್ಣುಗಳಿಂದ ತುಂಬಿದ ತೋಟ ಮತ್ತು ತನ್ನ ಹಚ್ಚ ಹಸಿರಿನ ತೋಟಗಳನ್ನು ಹಾಗೂ ಸರೋವರಗಳನ್ನು ಮತ್ತು ಮಹೋನ್ನತವಾದ ಅರಮನೆಯನ್ನು ಕಂಡು ಅಹಂಕಾರಪಟ್ಟನು ಮತ್ತು ತಮ್ಮ ನೆರೆಯ ಬಡವನನ್ನು ಕೀಳು ಭಾವನೆಯಿಂದ ನೋಡತೊಡಗಿದನು. ಆ ಬಡವನು ಅವನಿಗೆ ಹೇಳಿದನು. **ಲೌಲಾ ಇಝ್ ದಖಲ್‌ತ ಜನ್ನತಕ ಖುಲ್‌ತ ಮಾಶಾಅಲ್ಲಾಹ್; ಲಾ ಖುವ್ವತ ಇಲ್ಲಾ ಬಿಲ್ಲಾಹ್** ಎಂದರೆ ಓ ನನ್ನ ಶ್ರೀಮಂತ ಸಹೋದರನೆ ನೀನು ತೋಟದಲ್ಲಿ ಪ್ರವೇಶ ಮಾಡುವಾಗ ಹೀಗೇಕೆ ಹೇಳುವುದಿಲ್ಲ. ಈ ತೋಟ, ಈ ಅರಮನೆ ಮತ್ತು ಸರೋವರ ಇತ್ಯಾದಿಗಳು ನನ್ನ ಬಾಹುಬಲದ ಪರಿಣಾಮವಾಗಿ ಅಲ್ಲ. ಬದಲು ಇದು ಕೇವಲ ಅಲ್ಲಾಹನ ಇಚ್ಛೆಯಿಂದ ಮತ್ತು ಅವನ ಅನುಗ್ರಹದಿಂದ ನನಗೆ ದೊರೆತಿದೆ. ಆದ್ದರಿಂದ ಈ ಕಾರಣದಿಂದಾಗಿ ಇದರಲ್ಲಿ ನನ್ನ ಗುಣವೇನೂ ಸಾಬೀತಾಗುವುದಿಲ್ಲ, ಆದ್ದರಿಂದ ತನ್ನನ್ನು ತಾನು ದೊಡ್ಡವನು ಮತ್ತು ಬಡವನನ್ನು ಕೀಳೆಂದು ಭಾವಿಸುವುದರಲ್ಲಿ ಯಾವುದೇ ಅರ್ಥವಿಲ್ಲ. ಇವೆಲ್ಲವನ್ನು ಶಾಶ್ವತವಾಗಿರಿಸಲು ನನಗೆ ಅಧಿಕಾರವಿಲ್ಲ. ಅದು ದೇವನ (ಅಲ್ಲಾಹನ) ಇಚ್ಛೆ ಮತ್ತು ಅವನ ಅಧಿಕಾರದ ಮಾತಾಗಿದೆ. ಬಡವನ ಈ ಉಪದೇಶದಿಂದ ಅವನು ಯಾವ ಪಾಠ ಕಲಿಯದೇ ಇನ್ನಷ್ಟು ಅಹಂಕಾರಪಟ್ಟು ಹೇಳತೊಡಗಿದ. ನನ್ನ ಸಂಪತ್ತು ನನ್ನ ಗೌರವ ಮತ್ತು ಅಧಿಕಾರ ಎಂದೂ ಕಡಿಮೆಯಾಗುವುದಿಲ್ಲ. ಬದಲು ವೃದ್ಧಿಯೇ ಆಗುವುದು. ಅಲ್ಲಾಹನು ಈ ಅಹಂಕಾರ ಮೆಚ್ಚಲಿಲ್ಲ. ಸಿಡಿಲು ಅವನ ತೋಟವನ್ನು ಕ್ಷಣ ಮಾತ್ರದಲ್ಲಿ ನಾಶಮಾಡಿಬಿಟ್ಟನು. ಆದ್ದರಿಂದ ಪ್ರತಿ ಮನೆ ಮಾಲೀಕನಿಗೆ ಹೆದರಬೇಕಾಗಿದೆ. ಮತ್ತು ಒಪ್ಪಿಕೊಳ್ಳಬೇಕಾಗಿದೆ. ಗುಡಿಸಲೇ ಆಗಲಿ ಅಥವಾ ಸಣ್ಣ ಮನೆಯಾಗಲಿ ಅಥವಾ ಹವೇಲಿ ಅಥವಾ ಅರಮನೆ, ಅದಾವುದೋ ನನ್ನ ವ್ಯಕ್ತಿಗತ ಗುಣದಿಂದಲ್ಲ. ಬದಲು **"ಮಾಶಾಅಲ್ಲಾಹ್",** ಎಂದರೆ ಕೇವಲ ಅಲ್ಲಾಹನ ಅನುಗ್ರಹದಿಂದ ಹಾಗೂ ಅವನ ಕೃಪೆಯಿಂದಾಗಿದೆ. ಅಂತೆಯೇ ಅದು ಭವಿಷ್ಯದಲ್ಲಿ ವಿನಾಶದಿಂದ ಉಳಿಯಲು ಮತ್ತು ಅದರಲ್ಲಿ ವಾಸಿಸುವವರು ಸಂತಸದಿಂದಿರಲು, ಯಶಸ್ವಿಯಾಗಿರಲು ನಮ್ ಅಧಿಕಾರದಲ್ಲಿಲ್ಲ. ಬದಲು **"ಲಾ ಖುವ್ವತ ಇಲ್ಲಾ ಬಿಲ್ಲಾಹಿ"** ಎಂದರೆ ಸಂಪೂರ್ಣ ಅಲ್ಲಾಹನ ಅಧಿಕಾರದಲ್ಲಿದೆ. ಆದ್ದರಿಂದ **"ಲೌಲಾ ಇಝ್ ದಖಲ್‌ತ ಜನ್ನತಕ ಖುಲ್‌ತ ಮಾಶಾಅಲ್ಲಾಹ್; ಲಾ ಖುವ್ವತ ಇಲ್ಲಾ ಬಿಲ್ಲಾಹ್"** ಎಂದು ಮನೆಯ ಬಾಗಿಲ ಮೇಲೆ ದಪ್ಪಕ್ಷರದಲಿ ಬರೆಯುವುದು ಅತ್ಯಂತ ಅವಶ್ಯಕವಾಗಿದೆ. ಇದರಿಂದ ಮನೆಯಲ್ಲಿ ಪ್ರವೇಶ ಮಾಡುವನು ಮುಂದೆ ತಾವಾಗಿ ಈ ಪದಗಳು ಬರುವುವು ಮತ್ತು ಅವನು ಅದನ್ನು ಓದುತ್ತಾ ಅದರ ತಿರುಳು ಮನದಲ್ಲಿ ಭಾವಿಸುತ್ತಾ ಮನೆಗೆ ಪ್ರವೇಶ ಮಾಡುವನು. ಇಲ್ಲದಿದ್ದರೆ ನೋಡಿ ಅಷ್ಟೊಂದು ಮಹೋನ್ನತವಾದ ಅರಮನೆ ನೀಡಿರುವವನು ಈಗ ಅಧಿಕಾರ ಕಲೆದುಕೊಂಡಿರುವನು. ಅವನು ನಿಮ್ಮ ಈ ಅರಮನೆ ಹಿಂಪಡೆಯಲು ಅಸಾಧ್ಯವೇ? ಸಾವಿರಾರು ಮನೆಗಳನ್ನು ಭಸ್ಮ ಮಾಡಲಿಲ್ಲವೇ? ರುಹ್‌ತಕ್ ಪ್ರವಾಹವು ಅಮೂಲ್ಯವಾದ ಅರಮನೆಗಳನ್ನು ಕೆಡವಿ ಹಾಕಲಿಲ್ಲವೇ? ಅಥವಾ ಕೊಯ್ಟು ಮತ್ತು ಬಿಹಾರದ ಭೂಕಂಪಗಳು ಲಕ್ಷೋಪ ಮುಗಿಲುಮುಟ್ಟಿದ ಅರಮನೆಗಳನ್ನು ಭೂಮಿಗೆ ಸರಿಸಮಾನನನ್ನಾಗಿ ಮಾಡಲಿಲ್ಲವೇ? ಆದ್ದರಿಂದ ಅಲ್ಲಾಹನ ಪ್ರಕೋಪ ಕ್ಷಣಮಾತ್‌ರದಲ್ಲಿ **ಜಅಲ್‌ನ ಆಲಿಯಹಾ ಸಾಫಿಲಹಾ** ದನ್ವಯ ಏಳು ಅಂತಸ್ತನ್ನು ಪಾತಾಳಕ್ಕೆ ಕೊಂಡೊಯ್ಯಬಹುದಾದರೆ, ನಾವು ಅವನ ದಯೆಯನ್ನೂ ಯಾಚಿಸುತ್ತಾ, ಮನೆಯನ್ನು ಪ್ರವೇಶ ಮಾಡುವಾಗ-**ಮಾಶಾಅಲ್ಲಾಹ್** ಎಂದರೆ ದೇವನೇ ಇದೆಲ್ಲ ನಿನ್ನ ಕೃಪೆಯಾಗಿದೆ ಎನ್ನುವುದು ಬುದ್ಧಿವಂತಿಕೆ ಹಾಗೂ ಹಿತಯಾಚನೆಯಲ್ಲದೆ. **ಲಾ ಖುವ್ವತ ಇಲ್ಲಾ ಬಿಲ್ಲಾಹ್** ಎಂದರೆ ದೇವನೇ ನಿನ್ನ ಅನುಗ್ರಹದಿಂದಲೇ ಈ ಮನೆ ನಮಗೆ ದೊರೆತಿದೆ, ನಿನ್ನ ಕೃಪೆಯಿಂದಲೇ ನಾವು ಹಾಯಾಗಿ ಇರಬಹುದಾಗಿದೆ. ಆದ್ದರಿಂದ ಓ ನನ್ನ ಒಡೆಯನೇ ಮುಂದೆಯೂ ತನ್ನ ಮನೆ ಹೀಗೆ ತುಂಬಿರಲಿ, ನನ್ನ ಕುಟುಂಬ ಸಂತಸವಾಗಿರಲಿ. ಓ ನನ್ನ ಒಡೆಯನೇ, ನಿನ್ನ ದಾಸರ ಮೇಲೆ ದಯೆತೋರು. ಏಕೆಂದರೆ ನಿನ್ನ ಕರುಣೆಯೇ ನಮಗೆ ಸರ್ವಸ್ವ. ನಿನ್ನ ಕೃಪೆ ಇಲ್ಲದಿದ್ದರೆ ನಮ್ಮದೇನು ಉಳಿಯಲಾರದು ಆದ್ದರಿಂದ ಓ ದೇವನೇ ನಮ್ಮ ಮೇಲೆ ಕೃಪೆದೋರು. ಏಕೆಂದರೆ ನಿನ್ನ ಕೃಪೆಯೇನಮ್ಮ ಇಹ ಪರಲೋಕ ಹಿತವಾಗುವುದು.

ಆದ್ದರಿಂದ ನಾವು ನಮ್ಮ ಮನೆಗಳಲ್ಲಿ ಪ್ರವೇಶ ಮಾಡುವಾಗ ಅಥವಾ ತಮ್ಮ ತೋಟ ಹೊಲಗಳಲ್ಲಿ ಹೋಗುವಾಗ- **"ಲಾ ಖುವ್ವತ ಇಲ್ಲಿ ಬಿಲ್ಲಾಹಿ"** ಪದಗಳು ಮತ್ತು ಅವರ ತಿರುಳು ನಮ್ಮ ಮುಂದೆ ಇರಬೇಕಾಗಿದೆ. ಆದರೆ ಮನುಷ್ಯನು ಬಹು ಬೇಗ ಅನುಗ್ರಹಗಳನ್ನು ಮರೆಯುವವನಾಗಿದ್ದಾನೆ. ಆದ್ದರಿಂದ ಉತ್ತಮವಾದುದೇನೆಂದರೆ ಈ ಪದಗಳು ನಾವು ನಮ್ಮ ಮನೆಗಳ ಮೇಲೆ ಬರೆಯಬೇಕು. ಅದರಿಂದ ನಮ್ಮ ದಋುಷ್ಟಿ ಅದರ ಮೇಲೆ ಬೀಳುವುದು ಮತ್ತು ಪವಿತ್ರ ಖುರ್‌ಆನ್‌ನ ಈ ನುಡಿ ಸ್ಮರಿಸಿದಂತಾಗುವುದು.

ಇಲ್ಲಿ ಒಂದು ವರದಿ ಬರೆಯುವುದು ಅವಶ್ಯಕವಾಗಿದೆ. ಏಕೆಂದರೆ ಇದರ ಸಂಬಂಧ ಮೂಲ ವಿಷಯಕ್ಕೆ ಸಂಬಂಧಪಡದಿದ್ದರೂ ವುಝುವನ್ನು ದೂರ ಮಾಡಲು ಒಂದು ಮತ್ತಮ ಉದಾಹರಣೆಯಾಗಿದೆ. ಆ ವರದಿ ಹೀಗಿದೆ. ಹಝ್ರತ್ ಖಲೀಫತುಲ್ ಮಸೀಹ್ ಪ್ರಥಮರು (ರ) ರವರ ಕಾಲದಲ್ಲಿ ನಾವು ಒಂದು ಬಿನ್ನಹದಲ್ಲಿ ಪಾಲ್ಗೊಂಡಿದ್ದೆವು. ಮನೆ ಮಲಾಲೀಕನು ಊಟದ ಸಿದ್ಧತೆ ಮಾಡಿ ಬಿಸ್ಮಿಲ್ಲಾ ಮಾಡಿರಿ ಎಂದರು. ಆಗ ಹಝುರತ್ ಖಲೀಫತುಲ್ ಮಸೀಹ್ ಪ್ರಥಮರು (ರ) ಹೇಳಿದರು. ಊಟ ಪ್ರಾರಂಭಿಸಿ ಹೇಳುವ ಬದಲು ಬಿಸ್ಮಿಲ್ಲಾಹ ಮಾಡಿರಿ ಎನ್ನವುದು ಅತ್ಯಂತ ಪ್ರಯೋಜನಕಾರಿ ಹಾಗೂ ಸರಿಯಾದ ವಿಧನವಾಗಿದೆ. ಇದರಿಂದ ಊಟ ಮಾಡುವವರ ಗಮನಕ್ಕೆ ಬಿಸ್ಮಿಲ್ಲಾಹ್ ಹೇಳಿ ಊಟ ಪ್ರಾರಂಭಿಸಬೇಕು

*(ಪುಟ 09ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ಅಲ್ಲಾಹನ ದಿವ್ಯ ಶಕ್ತಿಯ ಎರಡನೆಯ ಪ್ರಕಟನೆಯನ್ನು ನೀವು ನೋಡುವುದು ಅವಶ್ಯಕವಾಗಿದೆ. ಅದು ಆಗಮಿಸುವುದು ನಿಮಗೆ ಉತ್ತಮವಾಗಿದೆ. ಅದು ಶಾಶ್ವತವಾಗಿದೆ. ಅದರ ಸರಪಳಿ ಪುನರುತ್ಥಾನದ ದಿನದ ತನಕ ಕಡಿದು ಹೋಗಲಾರದು. (ಹಝ್‌ರತ್ ಮಸೀಹ್ ಮೌಊದ್(ಅ))

ನಾನು ಅಲ್ಲಾಹನ ಒಂದು ದಿವ್ಯ ಶಕ್ತಿಯ ರೂಪದಲ್ಲಿ ಪ್ರಕಟವಾದೆನು. ನಾನು ಅಲ್ಲಾಹನ ದಿವ್ಯಶಕ್ತಿಯ ಮೂರ್ತ ರೂಪವಾಗಿರುವೆನು. ನನ್ನ ಅನಂತರ ಕೆಲವರು ಅಲ್ಲಾಹನ ದ್ವಿತೀಯ ದಿವ್ಯಶಕ್ತಿಯನ್ನು ಪ್ರಕಟಿಸುವವರಾಗುವರು. ಆದುದರಿಂದ ನೀವು ಅಲ್ಲಾಹನ ದ್ವಿತೀಯ ದಿವ್ಯಶಕ್ತಿಯನ್ನು ಪ್ರತೀಕ್ಷಿಸುತ್ತಾ ಒಗ್ಗೂಡಿ ಪ್ರಾರ್ಥನೆ ಮಾಡುತ್ತಾ ಇರಿ. ಪ್ರತಿಯೊಂದು ದೇಶದಲ್ಲಿರುವ ಸಾತ್ವಿಕಾರದ ಜನರ ಪ್ರತಿಯೊಂದು ಜಮಾಅತ್ ಒಟ್ಟಿಗೆ ಸೇರಿ ಪ್ರಾರ್ಥನೆ ಮಾಡುತ್ತಾ ಇರಬೇಕು. (ಹಝ್‌ರತ್ ಮಸೀಹ್ ಮೌಊದ್(ಅ))

ಶುದ್ಧ ಹೃದಯವನ್ನು ಹೊಂದಿದ ಮಹಾನುಭಾವರು ನನ್ನ ಮರಣದ ನಂತರ ನನ್ನ ಹೆಸರಿನಲ್ಲಿ ಜನರಿಂದ ಬೈಅತ್ (ನಿಷ್ಠೆಯ ಪ್ರತಿಜ್ಞೆ) ಪಡೆಯಲಿ.

---

ಲೋಕದ ವಿವಿಧ ಭಾಗದಲ್ಲಿ ವಾಸಿಸುವ ಜನರಲ್ಲಿ ಒಳ್ಳೆಯ ಪ್ರಕೃತಿಯನ್ನು ಹೊಂದಿರುವವರನ್ನು– ಅವರು ಯುರೋಪಿನಲ್ಲಿರಲಿ ಅಥವಾ ಏಶಿಯಾದಲ್ಲಿರಲಿ– ಏಕದೇವ ವಿಶ್ವಾಸದ(ಎಂದರೆ ತೌಹೀದ್)ಕಡೆಗೆ ಎಳೆದು ತನ್ನ ದಾಸರನ್ನು ಏಕಧರ್ಮದಲ್ಲಿ ಜಮಾಯಿಸಲು ಅಲ್ಲಾಹನು ಇಚ್ಛಿಸುತ್ತಾನೆ. ಅಲ್ಲಾಹನು ಇದೇ ಉದ್ದೇಶ ಲಕ್ಷ್ಯವನ್ನು ಈಡೇರಿಸಲು ನಾನು ಕಳುಹಿಸಲ್ಪಟ್ಟಿದ್ದೇನೆ. ನೀವು ಈ ಉದ್ದೇಶ ಲಕ್ಷ್ಯವನ್ನು ಮೃದುತ್ವ, ಸುಸ್ವಭಾವ ಮತ್ತು ಪ್ರಾರ್ಥನೆಗಳ ಮೂಲಕ ಈಡೇರುವಂತೆ ಮಾಡಿರಿ. ಅಲ್ಲಾಹನಿಂದ ಪರಿಶುದ್ಧ ಆತ್ಮವನ್ನು ಪಡೆದುಕೊಂಡು ಒಬ್ಬ ವ್ಯಕ್ತಿ ಎದ್ದು ನಿಲ್ಲುವ ತನಕ ನೀವೆಲ್ಲರೂ ನನ್ನ ಅನಂತರ ಒಟ್ಟಿಗೆ ಸೇರಿಕೊಂಡು ಕೆಲಸ ಮಾಡಿರಿ. (ಹಝ್‌ರತ್ ಮಸೀಹ್ ಮೌಊದ್(ಅ))

**ಇಸ್ಲಾಮಿನ ನೈಜ ಖಿಲಾಫತ್‌ನ ಬೆಂಬಲವನ್ನು ಪ್ರತಿಬಿಂಬಿಸುವ ಕೆಲವು ವಿಶ್ವಾಸವರ್ಧಕ ಘಟನೆಗಳ ಪ್ರಸ್ತಾವನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್,** ಅವರು ಟಿಲ್‌ಫೋರ್ಡ್, ಯು.ಕೆ, ಇಸ್ಲಾಮಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **26-05-2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُولُهٗ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ.

اِيَّاكَ نَعْبُدُ وَاِيَّاكَ نَسْتَعِيْنُ. اِهْدِنَا الصِّرَاطَ الْمُسْتَقِيْمَ.

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

ಈ ಲೋಕವನ್ನು ಬಿಟ್ಟು ಹೋಗಬೇಕಾದ ಸಮಯ ಸಮೀಪವಾಗಿದೆ ಎಂದು ಅಲ್ಲಾಹನು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ತಿಳಿಸಿದಾಗ ಅವರು ಜಮಾಅತನ್ನು ಸಂಬೋಧಿಸುತ್ತಾ ಹೀಗೆ ಹೇಳಿದರು: ಅಲ್ಲಾಹನು ಎರಡು ವಿಧಗಳ ಶಕ್ತಿ ಪ್ರದರ್ಶನ ಮಾಡುತ್ತಾನೆ. 1. ಪ್ರವಾದಿಗಳ ಮೂಲಕ ಅಲ್ಲಾಹನು ತನ್ನ ಶಕ್ತಿಯ ಹಸ್ತವನ್ನುತೋರಿಸುತ್ತಾನೆ. 2. ಪ್ರವಾದಿಗಳು ಮೃತರಾದ ನಂತರ ಅವರ ಅನುಯಾಯಿಗಳ ಸಮುದಾಯದ ವಿವಿಧ ಕಷ್ಟಗಳನ್ನು ಎದುರಿಸಬೇಕಾಗಿ ಬರುತ್ತದೆ ಮತ್ತು ಶತ್ರುಗಳು ತೀವ್ರವಾಗಿ ವಿರೋಧಿಸುತ್ತಾ ಕೆಲಸ ಬಿಗಡಾಯಿಸಿತೆಂದು ಭಾವಿಸುತ್ತಾ ಈ ಜಮಾಅತ್ ನಾಶವಾಗುವುದೆಂದು ದೃಢನಂಬಿಕೆ ಹೊಂದುತ್ತಾರೆ.ಜಮಾತಿನ ಒಳಗಿರುವವರು ಸಹ ಸಂಶಯಗಳಿಗೆ ತುತ್ತಾಗಿ ಬಲಗುಂದಿದವರಾಗುತ್ತಾರೆ. ಕೆಲವರು ದುರದೃಷ್ಟವಂತರು ಜಮಾಅತನ್ನು ಬಿಟ್ಟು ಹೋಗುತ್ತಾರೆ. ಆಗ ಅಲ್ಲಾಹನು ತನ್ನ ಶಕ್ತಿಯನ್ನು ಎರಡನೆಯ ಸಾರಿ ಬಲಯುತವಾಗಿ ಪ್ರದರ್ಶಿಸುತ್ತಾನೆ. ಕುಸಿದು ಹೋಗುವ ಜಮಾಅತನ್ನು ಅವನು ಹಿಡಿದು ನಿಲ್ಲಿಸುತ್ತಾನೆ.

ಯಾರು ಕೊನೆಯ ವರೆಗೆ ಸಹನೆ ತೋರುತ್ತಾನೋ ಅವನು ಅಲ್ಲಾಹನ ಈ ಅದ್ಭುತ ದೃಷ್ಟಾಂತವನ್ನು ನೋಡುತ್ತಾನೆ. ಹಝ್‌ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹುರವರ ಕಾಲದಲ್ಲಿ ಹೀಗೆ ಸಂಭವಿಸಿತು. ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರು ಮೃತರಾದುದು ಅಕಾಲದಲ್ಲಿಯೆಂದು ಗ್ರಹಿಸಲಾಗಿತ್ತು. ಗ್ರಾಮವಾಸಿಗಳಾದ ಅನೇಕ ತಿಳಿಗೇಡಿಗಳು ಧರ್ಮತ್ಯಾಗ ಮಾಡಿದರು. ಸಹಾಬ(ಪೈಗಂಬರ ಶಿಷ್ಯರು) ದುಃಖದಿಂದ ಮತಭ್ರಷ್ಟರ ಹಾಗೆ ಆಗಿದ್ದರು. ಆಗ ಹಝ್‌ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹುರವರನ್ನು ಅಲ್ಲಾಹನು ನಿಲ್ಲಿಸಿ ತನ್ನ ದಿವ್ಯ ಶಕ್ತಿಯನ್ನು ಎರಡನೆಯ ಸಾರಿ ಪ್ರಕಟಿಸುತ್ತಾ ನಾಶೋನ್ಮುಖವಾಗಿದ್ದ ಇಸ್ಲಾಮನ್ನು ರಕ್ಷಿಸಿದನು ಮತ್ತು ತನ್ನ ವಾಗ್ದಾನವನ್ನು ಈಡೇರಿಸಿದನು. **ವಲಯುಮಕ್ಕಿನನ್ನಲಹುಮ್ ದೀನಹುಮುಲ್ಲಝಿರ್‌ತಝಾ ಲಹುಮ್ ವಲಯುಬದ್ದಿಲನ್ನಲಹುಮ್ ಮಿಮ್ ಬಅ್‌ದಿ ಖೌಫಿಹಿಮ್ ಅಮ್‌ನಾ** (ಅನ್ನೂರ್:56) ಎಂದರೆ ಭಯದ ನಂತರ ಅವರ ಪಾದಗಳನ್ನು ನಾವು ಸ್ಥಿರಗೊಳಿಸುವೆವು. ಎಂದು ಅಲ್ಲಾಹನು ಈ ವಚನದಲ್ಲಿ ವಾಗ್ದಾನ ಮಾಡಿರುವನು. ಹಝ್‌ರತ್ ಮೂಸಾ ಅಲೈಹಿಸ್ಸಲಾಮ್‌ರವರ ಕಾಲದಲ್ಲಿ ಸಹ ಹೀಗೆ ಸಂಭವಿಸಿತು. ಬನೀ ಇಸ್ರಾಈಲ್ ಜನರನ್ನು ಅವರಿಗೆ ವಾಗ್ದಾನ ನೀಡಲ್ಪಟ್ಟ ಭೂಪ್ರದೇಶಕ್ಕೆ ಕೊಂಡೊಯ್ದು ತಲುಪಿಸುವ ಮೊದಲೇ ಹಝ್‌ರತ್ ಮೂಸಾ ಅಲೈಹಿಸ್ಸಲಾಮ್‌ರವರು ಈಜಿಪ್ಟ್ ಮತ್ತು ಕನ್‌ಆನದ ಮಧ್ಯದ ಮಾರ್ಗದಲ್ಲಿ ಮೃತರಾದರು. ಅವರು ಮೃತರಾದಾಗ ಬನೀ ಇಸ್ರಾಈಲ್ ಜನರಲ್ಲಿ ಈ ಅಕಾಲಿಕ ಮರಣದಿಂದಾಗಿ ಅಗಾಧವಾದ ಶೋಕ ಉಂಟಾಯಿತು. ಅವರು ನಲ್ವತ್ತು ದಿವಸಗಳು ರೋಧಿಸುತ್ತಾ ಇದ್ದರೆಂದು ತೌರಾತ್ ಗ್ರಂಥದಲ್ಲಿ ಬರೆಯಲಾಗಿದೆ. ಹಝ್‌ರತ್ ಈಸಾ ಅಲೈಹಿಸ್ಸಲಾಮ್‌ರವರು ಶಿಲುಬೆಗೆ ಏರಿಸಲ್ಪಟ್ಟಾಗ ಹೀಗೆಯೇ ಸಂಭವಿಸಿತು. ಎಲ್ಲಾ ಶಿಷ್ಯರು ಚದುರಿ ಓಡಿಹೋದರು. ಅವರೊಬ್ಬರ ಧರ್ಮಭ್ರಷ್ಟನೂ ಆದನು.

ಆದುದರಿಂದ ಪ್ರಿಯರೇ, ಪುರಾತನ ಕಾಲದಿಂದಲೂ ಅಲ್ಲಾಹನ ನಡವಳಿಕೆ ಹೀಗೆ ಇದೆ: ಅವನು ಎರಡು ದಿವ್ಯ ಶಕ್ತಿಗಳನ್ನು ಪ್ರಕಟಿಸುತ್ತಾನೆ ಮತ್ತು ಶತ್ರುಗಳ ಎರಡು ಮಿಥ್ಯ ಸಂತೋಷಗಳನ್ನು ನಿರರ್ಥಕ ಎಂದು ತೋರಿಸಿ ಕೊಡುತ್ತಾನೆ. ಅಲ್ಲಾಹನು ತನ್ನ ಪುರತನವಾದ ನಡವಳಿಕೆಯನ್ನು ಬಿಟ್ಟುಬಿಡುವುದು ಸಂಭಾವ್ಯವಲ್ಲ. ಆದುದರಿಂದ ನಾನು ನಿಮ್ಮೊಂದಿಗೆ ಹೇಳಿದ ಮಾತಿನಿಂದ ನೀವು ದುಃಖಿತರಾಗಬೇಡಿರಿ. ನಿಮ್ಮ ಹೃದಯಗಳು ಗಾಬರಿಗೊಳ್ಳದಿರಲಿ. ಏಕೆಂದರೆ ಅಲ್ಲಾಹನ ದಿವ್ಯ ಶಕ್ತಿಯ ಎರಡನೆಯ ಪ್ರಕಟನೆಯನ್ನು ನೀವು ನೋಡುವುದು ಅವಶ್ಯಕವಾಗಿದೆ. ಅದು ಆಗಮಿಸುವುದು ನಿಮಗೆ ಉತ್ತಮವಾಗಿದೆ. ಅದು ಶಾಶ್ವತವಾಗಿದೆ. ಅದರ ಸರಪಳಿ ಪುನರುತ್ಥಾನದ ದಿನದ ತನಕ ಕಡಿದು ಹೋಗಲಾರದು. ನಾನು ನಿಮ್ಮ ಬಳಿಯಿಂದ ನಿರ್ಗಮಿಸದೆ ಆ ದ್ವಿತೀಯ ದಿವ್ಯ ಶಕ್ತಿ ಆಗಮಿಸಲಾರದು. ಆದರೆ ನಾನು ನಿಮ್ಮನ್ನು ಬಿಟ್ಟು ಹೋಗುವಾಗ ಅಲ್ಲಾಹನು ತನ್ನ ದ್ವಿತೀಯ ಶಕ್ತಿಯನ್ನು ನಿಮಗಾಗಿ ಕಳುಹಿಸಿ ಕೊಡುವನು. **"ಬರಾಹೀನೆ ಅಹ್ಮದಿಯಾ"** ಎಂಬ ಗ್ರಂಥದಲ್ಲಿ ಅಲ್ಲಾಹನ ವಾಗ್ದಾನವನ್ನು ಉಲ್ಲೇಖಿಸಲಾಗಿದೆ. ಆ ವಾಗ್ದಾನ ಪ್ರಕಾರ ದ್ವಿತೀಯ ದಿವ್ಯ ಶಕ್ತಿ ಸದಾಕಾಲ ನಿಮ್ಮ ಜೊತೆಗಿರುವುದು. ಆ

ವಾಗ್ದನ ನನ್ನ ಬಗ್ಗೆ ಯಲ್ಲ. ಅದು ನಿಮ್ಮ ಎಂದರೆ ಜಮಾಅತ್ ಬಗ್ಗೆಯಾಗಿದೆ. ಅಲ್ಲಾಹನು ಹೀಗೆ ಹೇಳಿದ್ದಾನೆ."ನಿನ್ನ ಅನುಯಾಯಿಗಳ ಈ ಜಮಾತಿಗೆ ಪುನರತ್ಥಾನದ ದಿನದ ತನಕ ಅನ್ಯರ ಮೇಲೆ ಜಯುವನ್ನು ದಯಪಾಲಿಸುವೆನು."

ಆದುದರಿಂದ ನಿಮ್ಮಿಂದ ನಾನು ಅಗಲಿ ಹೋಗುವ ದಿನವು ಆಗಮಿಸುವುದು ಅವಶ್ಯಕವಾಗಿದೆ. ಅನಂತರ ಶಾಶ್ವತ ವಾಗ್ದಾನದ ದಿನವು ಆಗಮಿಸುವುದು. ನಮ್ಮ ದೇವನು ವಾಗ್ದಾನಗಳನ್ನು ಈಡೇರಿಸುವವನೂ ಸತ್ಯವಂತನೂ ಆಗಿರುವನು.ಅವನು ಮಾಡಿದುದನೆಲ್ಲವನ್ನೂ ನಿಮಗೆ ತೋರಿಸುವೇನು. ಈ ಕಾಲಘಟ್ಟವು ಲೋಕದ ಅಂತಿಮ ಕಾಲಘಟ್ಟವಾಗಿದ್ದು ಅನೇಕ ವಿಪತ್ತುಗಳು ಬಂದೆರಗಲಿರುವ ಕಾಲಘಟ್ಟವಾಗಿದ್ದರೂ ಅಲ್ಲಾಹನು ಮುಂಚಿತವಾಗಿ ತಿಳಿಸಿದ ಎಲ್ಲಾ ಸಂಗತಿಗಳು ಈಡೇರುವ ತನಕ ಈ ಲೋಕವು ನಾಶವಾಗದೆ ಉಳಿಯುವುದು.

ನಾನು ಅಲ್ಲಾಹನ ಒಂದು ದಿವ್ಯ ಶಕ್ತಿಯ ರೂಪದಲ್ಲಿ ಪ್ರಕಟವಾದೆನು. ನಾನು ಅಲ್ಲಾಹನ ದಿವ್ಯಶಕ್ತಿಯ ಮೂರ್ತ ರೂಪವಾಗಿರುವೆನು. ನನ್ನ ಅನಂತರ ಕೆಲವರು ಅಲ್ಲಾಹನ ದ್ವಿತೀಯ ದಿವ್ಯಶಕ್ತಿಯನ್ನು ಪ್ರಕಟಿಸುವವರಾಗುವರು. ಆದುದರಿಂದ ನೀವು ಅಲ್ಲಾಹನ ದ್ವಿತೀಯ ದಿವ್ಯಶಕ್ತಿಯನ್ನು ಪ್ರತೀಕ್ಷಿಸುತ್ತಾ ಒಗ್ಗೂಡಿ ಪ್ರಾರ್ಥನೆ ಮಾಡುತ್ತಾ ಇರಿ. ಪ್ರತಿಯೊಂದು ದೇಶದಲ್ಲಿರುವ ಸಾತ್ವಿಕಾರದ ಜನರ ಪ್ರತಿಯೊಂದು ಜಮಾಅತ್ ಒಟ್ಟಿಗೆ ಸೇರಿ ಪ್ರಾರ್ಥನೆ ಮಾಡುತ್ತಾ ಇರಬೇಕು. ಅದರ ಫಲ ಸ್ವರೂಪವಾಗಿ ದ್ವಿತೀಯ ದಿವ್ಯಶಕ್ತಿ ಆಕಾಶದಿಂದ ಅವತೀರ್ಣವಾಗಿ ನಿಮ್ಮ ದೇವನು ಇಷ್ಟು ಶಕ್ತಿಶಾಲಿಯಾದ ದೇವನೆಂದು ತೋರಿಸಿ ಕೊಡುವಂತಾಗಲಿ. ನಿಮ್ಮ ಮರಣವು ಸಮೀಪವಾಗಿದೆ ಎಂದು ನೀವು ಗ್ರಹಿಸಿರಿ. ಆ ಘಳಿಗೆ ಯಾವಾಗ ಎಂದು ನಿಮಗೆ ತಿಳಿಯದು.

ಶುದ್ಧ ಹೃದಯವನ್ನು ಹೊಂದಿದ ಮಹಾನುಭಾವರು ನನ್ನ ಮರಣದ ನಂತರ ನನ್ನ ಹೆಸರಿನಲ್ಲಿ ಜನರಿಂದ ಬೈಅತ್ (ನಿಷ್ಠೆಯ ಪ್ರತಿಜ್ಞೆ) ಪಡೆಯಲಿ.

ಲೋಕದ ವಿವಿಧ ಭಾಗದಲ್ಲಿ ವಾಸಿಸುವ ಜನರಲ್ಲಿ ಒಳ್ಳೆಯ ಪ್ರಕೃತಿಯನ್ನು ಹೊಂದಿರುವವರನ್ನು– ಅವರು ಯುರೋಪಿನಲ್ಲಿರಲಿ ಅಥವಾ ಏಶಿಯಾದಲ್ಲಿರಲಿ– ಏಕದೇವ ವಿಶ್ವಾಸದ(ಎಂದರೆ ತೌಹೀದ್)ಕಡೆಗೆ ಎಳೆದು ತನ್ನ ದಾಸರನ್ನು ಏಕಧರ್ಮದಲ್ಲಿ ಜಮಾಯಿಸಲು ಅಲ್ಲಾಹನು ಇಚ್ಛಿಸುತ್ತಾನೆ. ಅಲ್ಲಾಹನು ಇದೇ ಉದ್ದೇಶ ಲಕ್ಷ್ಯವನ್ನು ಈಡೇರಿಸಲು ನಾನು ಕಳುಹಿಸಲ್ಪಟ್ಟಿದ್ದೇನೆ. ನೀವು ಈ ಉದ್ದೇಶ ಲಕ್ಷ್ಯವನ್ನು ಮೃದುತ್ವ, ಸುಸ್ವಭಾವ ಮತ್ತು ಪ್ರಾರ್ಥನೆಗಳ ಮೂಲಕ ಈಡೇರುವಂತೆ ಮಾಡಿರಿ. ಅಲ್ಲಾಹನಿಂದ ಪರಿಶುದ್ಧ ಆತ್ಮವನ್ನು ಪಡೆದುಕೊಂಡು ಒಬ್ಬ ವ್ಯಕ್ತಿ ಎದ್ದು ನಿಲ್ಲುವ ತನಕ ನೀವೆಲ್ಲರೂ ನನ್ನ ಅನಂತರ ಒಟ್ಟಿಗೆ ಸೇರಿಕೊಂಡು ಕೆಲಸ ಮಾಡಿರಿ.
(ಅಲ್‌ವಸಿಯ್ಯತ್, ರೂಹಾನಿ ಖಝಾಇನ್, ಸಂಪುಟ–20, ಪುಟ–304–307)

ಒಟ್ಟಿನಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಅವರು ನಿಧನಗೊಂಡಾಗ ಅಲ್ಲಾಹನು ತನ್ನ ವಾಗ್ದಾನಗಳ ಪ್ರಕಾರ ಹಝ್ರತ್ ಮೌಲಾನಾ ನೂರುದ್ದೀನ್ ಸಾಹಿಬ್(ರ)ರ ಕೈಯಲ್ಲಿ ಜಮಾಅತನ್ನು ಒಟ್ಟು ಸೇರಿಸಿದನು. ಅಂಜುಮನಿನ ಅಧೀನದಲ್ಲಿ ವ್ಯವಸ್ಥೆ ನಡೆಯಬೇಕು ಎಂದು ಕೆಲವು ಜನರು ಬಯಸುತ್ತಿದ್ದರು. ಆದರೆ ಅವರು ಉಕ್ಕಿನ ಮುಷ್ಟಿಯಿಂದ ಆ ಪಿತೂರಿಯನ್ನು ಕೊನೆಗೊಳಿಸಿದರು.

ತದನಂತರ, ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ (ರ) ಅವರ ಮರಣದ ನಂತರ, ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ ಖಲೀಫತುಲ್ ಮಸೀಹ್ ಸಾನಿ(ರ) ಖಲೀಫರನ್ನಾಗಿ ಖಲೀಫರಾದರು. ನೀವು ಖಲೀಫರಾಗಿ ಆಯ್ಕೆಯಾದ ಸಮಯದಲ್ಲೂ ತಮ್ಮನ್ನು ತಾವು ಬೌದ್ಧಿಕವಾಗಿ ಶ್ರೇಷ್ಠರೆಂದು ಪರಿಗಣಿಸಿದ ಕಪಟವಿಶ್ವಾಸಿಗಳು ಆ ಸಂದರ್ಭದಲ್ಲಿ ಜಮಾಅತಿನಲ್ಲಿ ಬಿರುಕು ಉಂಟುಮಾಡಲು ಪ್ರಯತ್ನಿಸಿದರು. ಆದರೆ ಅಲ್ಲಾಹನು ಸತ್ಯವಿಶ್ವಾಸಿಗಳ ಜಮಾಅತನ್ನು ಒಂದು ಕೈಯಲ್ಲಿ ಒಟ್ಟು ಸೇರಿಸಿದನು ಮತ್ತು ಎದುರಾಳಿಗಳು ಪರಾಜಿತರಾದರು. ಮತ್ತು ಅಲ್ಲಾಹನ ಅನುಗ್ರಹದಿಂದ ಸುಮಾರು ಐವತ್ತೆರಡು ವರ್ಷಗಳ ಅವಧಿ ಖಲೀಫರನ್ನಾಗಿ ಸೇವೆಸಲ್ಲಿಸಿದರು ಮತ್ತು ಪ್ರಪಂಚದಾದ್ಯಂತ ಕಾರ್ಯಾಚರಣೆಗಳನ್ನು ತೆರೆಯಲಾಯಿತು. ಜಮಾಅತ್ತಿನ ಆಡಳಿತ ರಚನೆಯನ್ನು ಬಲಪಡಿಸಲಾಯಿತು. ಇದೆಲ್ಲಾ ನಡೆದದ್ದು ನಿಮ್ಮ ಕಾಲದಲ್ಲಿ.

ಅನಂತರ ಅವರ ನಿಧನದ ನಂತರ, ಮೂರನೇ ಖಲೀಫತ್ ಅವಧಿಯು ಪ್ರಾರಂಭವಾಯಿತು ಮತ್ತು ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ಖಲೀಫತುಲ್ ಮಸೀಹ್ ಅಲ್–ಸಾಲಿಸ್(ರ) ಅವರು ಸರ್ವಶಕ್ತನಾದ ಅಲ್ಲಾಹನ ಬೆಂಬಲದೊಂದಿಗೆ ಖಿಲಾಫತ್ ಸ್ಥಾನವನ್ನು ಅಲಂಕರಿಸಿದರು.

ನಂತರ, ದೈವಿಕ ವಿಧಿಯ ಪ್ರಕಾರ ನೀವು(ರ) ನಿಧನ ಹೊಂದಿದ ನಂತರ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಅವರನ್ನು ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ) ಅವರ ನಾಲ್ಕನೇ ಖಲೀಫರನ್ನಾಗಿ ನೇಮಿಸಿದನು. ತದನಂತರ ಅವರ ನಿಧನದ ನಂತರ ಸರ್ವಶಕ್ತನಾದ ಅಲ್ಲಾಹನು ನನ್ನನ್ನು ಈ ಸ್ಥಾನದಲ್ಲಿ ಇರಿಸಿಕೊಂಡು ಹಝ್ರತ್ ಮಸೀಹ್ ಮೌಊದ್(ಅ)ರೊಡನೆ ಮಾಡಿದ ವಾಗ್ದಾನಗಳ ಪ್ರಕಾರ ಜಮಾಅತನ್ನು ಪ್ರಗತಿಯ ಮಾರ್ಗದಲ್ಲಿ ಇರಿಸಿದನು. ಶತ್ರುಗಳು ಭಿನ್ನತೆ ಉಂಟುಮಾಡಲು ಅನೇಕ ಪ್ರಯತ್ನಗಳನ್ನು ಮಾಡಿದರು, ಅಹ್ಮದಿಯರನ್ನು ಶಹೀದ್ ಮಾಡಲಾಯಿತು, ಲೌಕಿಕವಾದ ಲಾಲಸೆಗಳನ್ನು ತೋರಿಸಲಾಯಿತು. ಆದರೆ ಅಲ್ಲಾಹನು ಪೂರ್ತಿ ಲೋಕದ ಅಹ್ಮದಿಯರ ನಂಬಿಕೆ ಮತ್ತು ದೃಢವಿಶ್ವಾಸವನ್ನು ವರ್ಧಿಸುತ್ತಾ ಹೋದನು. ಅಹ್ಮದಿಯರಿಗೆ ಖಿಲಾಫತಿನೊಂದಿಗೆ ಇರುವ ಸಂಬಂಧವನ್ನು ಅಲ್ಲಾಹನಿಗೆ ಮಾತ್ರ ಉಂಟುಮಾಡಲು ಸಾಧ್ಯ. ಜಮಾಅತಿನ ಸದಸ್ಯರಿಗೆ ಖಿಲಾಫತಿನೊಂದಿಗೆ ಮತ್ತು ಖಲೀಫರಿಗೆ ಜಮಾಅತಿನ ಸದಸ್ಯರೊಂದಿಗೆ ಇರುವಂತಹ ಪ್ರೀತಿ ಮತ್ತು ನಿಷ್ಠೆಯ ಸಂಬಂಧವನ್ನು ಉಂಟುಮಾಡಲು ಯಾವನೇ ಮನುಷ್ಯನಿಗೆ ಸಾಧ್ಯವಲ್ಲ. ನಾನು ಯಾವ ದೇಶಕ್ಕೆ ಹೋದರೂ ಅಲ್ಲಿ ಈ ದೃಶ್ಯಗಳು ಕಾಣಬಹುದಾಗಿದೆ. ಇದು ಕೇವಲ ಬಾಯಿಮಾತಲ್ಲ. ಬದಲಾಗಿ ಇಂದಂತೂ ಕ್ಯಾಮೆರಾದ ಕಣ್ಣು ಅವುಗಳನ್ನು ಸೆರೆ ಹಿಡಿಯುತ್ತದೆ. ಎಂ.ಟಿ.ಎ. ಈ ದೃಶ್ಯಗಳನ್ನು ತೋರಿಸುತ್ತಿರುತ್ತದೆ. ಅಲ್ಲಾಹನ ಕ್ರಿಯಾರೂಪದ ಸಾಕ್ಷ್ಯ ನಿಮ್ಮ ಜೊತೆಗೆ ಇದೆ ಎಂದು ಅವುಗಳನ್ನು ನೋಡಿಕೊಂಡು ಶತ್ರುಗಳಿಗೂ ಹೇಳಬೇಕಾಗುತ್ತಿದೆ.

ಖಿಲಾಫತಿನೊಂದಿಗೆ ನಿಷ್ಠೆ ಮತ್ತು ಪ್ರಾಮಾಣಿಕತೆಯನ್ನು ವ್ಯಕ್ತಪಡಿಸಿಕೊಂಡು ನನಗೆ ಸಾವಿರಾರು ಪತ್ರಗಳು ಬರುತ್ತವೆ. ಅಲ್ಲಾಹನು ಹೇಗೆ ಸ್ವತಃ ಜನರನ್ನು ಖಿಲಾಫತಿನೊಂದಿಗೆ ಜೋಡಿಸುತ್ತಾನೆ ಮತ್ತು ಹೇಗೆ ಅವರ ಹೃದಯಗಳಲ್ಲಿ ಖಿಲಾಫತಿನೊಂದಿಗೆ ಪ್ರೀತಿಯನ್ನು ಉಂಟುಮಾಡುತ್ತಾನೆ ಎಂಬುದನ್ನು ಸ್ಪಷ್ಟಪಡಿಸುವ ಕೆಲವು ಪತ್ರಗಳ ಉದಾಹರಣೆಗಳನ್ನು ನನಗೆ ಲಭಿಸುತ್ತದೆ.

ಈ ಸಂದರ್ಭದಲ್ಲಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸತ್ಯತೆಯ ಕಡೆಗೆ ಜನರನ್ನು ಹೇಗೆ ಮಾರ್ಗದರ್ಶಿಸುತ್ತಾನೆ ಎಂಬುದನ್ನು ತೋರಿಸುವ ಕೆಲವು ಪತ್ರಗಳ ಉದಾಹರಣೆಗಳನ್ನು ನಾನು ನಿಮ್ಮ ಮುಂದೆ ಇಡಲು ಬಯಸುತ್ತೇನೆ.

ತಾಂಜಾನಿಯಾದಲ್ಲಿ ಮೊರಂಘ ಪ್ರದೇಶವಿದೆ. ಮುಅಲ್ಲಿಮ್ ಸಾಹೇಬರು ಅಲ್ಲಿಂದ ಹೀಗೆ ಒಂದು ವರದಿಯನ್ನು ನೀಡಿದರು. ಒಂದು ದಿನ ಫಜ್ರ್ ಪ್ರಾರ್ಥನೆಯ ನಂತರ ನಾವು ಮುಬಲ್ಲಿಗ್ (ಧರ್ಮಬೋಧಕ) ಅವರೊಂದಿಗೆ ಜಮಾಅತ್‌ನ ಸ್ನೇಹಿತರನ್ನು ಭೇಟಿಯಾಗಲು ಹೋದೆವು. ಝುಹರ್ ನಮಾಝ್‌ಗೂ ಮುನ್ನ ಮಸೀದಿಗೆ ಹಿಂತಿರುಗಿದಾಗ ಮಸೀದಿಯ ಮೆಟ್ಟಿಲುಗಳ ಮೇಲೆ ಒಬ್ಬ ಮಹಿಳೆಯನ್ನು ನೋಡಿದೆವು. ಯೋಗಕ್ಷೇಮವನ್ನು ಖಚಿತಪಡಿಸಿಕೊಂಡ ನಂತರ, ಅವಳು ದುಆ ಮಾಡಿಸಲು ಬಂದಿರುವುದಾಗಿ ತಿಳಿಯಿತು. ಪ್ರಾಯಶಃ ಜಮಾಅತ್ ಮುಸಲ್ಮಾನರಲ್ಲದವರಲ್ಲಿ ದಮ್ ದುರುದ್ ಇತ್ಯಾದಿ ಆಚರಣೆಗಳಿರುವಂತೆ ನಾವೂ ಮಾಡುತ್ತೇವೆ ಎಂದು ಅವರು ಭಾವಿಸಿದ್ದರು. ಇದು ಆಫ್ರಿಕನ್ನರಲ್ಲಿ ಒಂದು ದೊಡ್ಡ ಸಂಪ್ರದಾಯವಾಗಿದೆ. ಆದ್ದರಿಂದ ಮುರಬ್ಬಿ ಸಾಹಿಬ್ ಅವರಿಗೆ ಜಮಾಅತ್‌ನ ಬೋಧನೆಗಳ ಬಗ್ಗೆ ತಿಳಿಸಿದರು ಮತ್ತು ಹೇಗಾದರೂ ಅಲ್ಲಿ ಅವರಿಗಾಗಿ ಪ್ರಾರ್ಥಿಸಿದರು. ಆ ಮಹಿಳೆಯು ಹೇಳುತ್ತಾಳೆ: ನನಗೆ ಕನಸ್ಸುಗಳ ಬರುತ್ತವೆ ಅದರಲ್ಲಿ ಉದ್ದನೆಯ ಗಡ್ಡವನ್ನು ಹೊಂದಿರುವ ಗೋಧಿ ಬಣ್ಣದ ಪುರುಷರು ನನಗೆ ಧರ್ಮವನ್ನು ವಿವರಿಸುತ್ತಾರೆ. ತದನಂತರ ಅವರಿಗೆ ಅಹ್ಮದೀಯ ಸಮುದಾಯದ ಪರಿಚಯವಾಯಿತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತು ಖಲೀಫರುಗಳ ಭಾವಚಿತ್ರಗಳನ್ನು ತೋರಿಸಲಾಯಿತು. ತಮ್ಮ ಕನಸಿನಲ್ಲಿ ಬಂದು ಅವರಿಗೆ ವಿವರಿಸುವ ಹಿರಿಯರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅಥವಾ ಖಲೀಫತುಲ್ ಮಸೀಹ್ ಸಾನಿ(ರ) ಅವರನ್ನು ಹೋಲುತ್ತಾರೆ ಎಂದು ಅವರು (ಮಹಿಳೆಯು) ಹೇಳಿದರು. ಅದರ ನಂತರ, ಈ ಮಹಿಳೆ ತನ್ನ ಮೂವರು ಮಕ್ಕಳೊಂದಿಗೆ ಬೈಅತ್ ಮಾಡಿದರು. ಆ ಕಾಲದಲ್ಲಿ, ಹಝ್ರತ್ ಮಸೀಹ್ ಮೌಊದ್(ರ) ಅವರ ಜೊತೆಗೆ ಖಲೀಫತುಲ್–ಮಸೀಹ್ ಅಲ್–ಸಾನಿ(ರ) ರವರ ಚಿತ್ರವನ್ನು ಸಹ ತೋರಿಸಲಾಯಿತು.

ನಂತರ ಇಂಡೋನೇಷ್ಯಾದ ಪ್ರಾಂತ್ಯವು ಪಶ್ಚಿಮ ಕಾಲಿಮಂಟನ್ ಆಗಿದೆ. ಅಲ್ಲೊಂದು ಪ್ರದೇಶದ ನಿವಾಸಿಯ ಹೆಸರು ಅಬ್ದುಲ್ಲಾ ಎಂದಾಗಿದೆ. ಅವರು ತಮ್ಮ ಪತ್ನಿ ಮತ್ತು ಮಕ್ಕಳೊಂದಿಗೆ ಬೈಅತ್ ಮಾಡಿದರು. ಅವರು

2019 ರಿಂದ ಜಮಾಅತ್‌ನೊಂದಿಗೆ ಸಂಪರ್ಕದಲ್ಲಿದ್ದರು ಮತ್ತು ಮುಬಲ್ಲಿಗ್ ಸಾಹಿಬ್ ಅವರ ಮಾತುಗಳಿಂದ ಸಾಕಷ್ಟು ಪ್ರಭಾವಿತರಾಗಿದ್ದರು, ಆದ್ದರಿಂದ ಅವರು ಮಸೀದಿಗೆ ಬಂದು ಹೋಗುತ್ತಿದ್ದರು. ಏಕೆಂದರೆ ಅವರು ಇತರ ಧರ್ಮಗುರುಗಳಿಗಿಂತ ಬಹಳ ಭಿನ್ನರು ಎಂದು ಅವರು ಭಾವಿಸಿದ್ದರು. ಆದಾಗ್ಯೂ, ಅವರು ನಮ್ಮ ಮಿಷನರಿಗೆ ತುಂಬಾ ಹತ್ತಿರವಾಗಿರುವುದರಿಂದ, ಆ ಪ್ರದೇಶದ ಮೌಲವಿಗಳು ಮತ್ತು ಸ್ಥಳೀಯ ಜನರು ಅವರನ್ನು ಆರೋಪಿಸಲು ಪ್ರಾರಂಭಿಸಿದರು, ಅವರನ್ನು ಹೊರಹಾಕಿದರು ಮತ್ತು ಅವರ ಮಸೀದಿಗೆ ಬರಲು ತಡೆದರು. ಅವರು ಒಂದು ಕನಸಿನಲ್ಲಿ ನಾಶಮಾಡುವಂತಹ ಸುಳಿಯಲ್ಲಿ ಸಿಲುಕಿರುವುದಾಗಿ ಕಂಡರು. ಆದರೆ ಹಿರಿಯರೊಬ್ಬರು ನಿಲುವಂಗಿಯನ್ನು ಧರಿಸಿ ಕೋಲು ಹಿಡಿದು ನನ್ನನ್ನು ರಕ್ಷಿಸಲು ಬಂದರು ಎಂದು ಹೇಳಿದರು. ಆಗ ನಮ್ಮ ಮುಬಲ್ಲಿಗ್ ಸಾಹೇಬರು ಅವರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಫೋಟೋವನ್ನು ತೋರಿಸಿದರು, ಅದರಲ್ಲಿ ಹುಝೂರ್(ಅ) ಅವರು ಕೋಲು ಹಿಡಿದಿದ್ದರು. ಅವರು ಅವರ ಪೋಟೋವನ್ನು ಕಂಡು ನಡುಗುತ್ತಾ ನನ್ನ ಕನಸಿನಲ್ಲಿ ತನ್ನ ಕೋಲಿನಿಂದ ನನ್ನನ್ನು ಸುಂಟರಗಾಳಿಯಿಂದ ರಕ್ಷಿಸಿದ ಹಿರಿಯರು ಇವರೇ ಆಗಿದ್ದಾರೆ ಎಂದು ಹೇಳಿದನು. ಅದೇ ರೀತಿ ಅವರ ಮಗನೂ ಒಂದು ಕನಸನ್ನು ಕಂಡನು, ಈಗ ಅದನ್ನು ತಂದೆ ಮಾತ್ರವಲ್ಲ, ಮಗನೂ ಸಹ ಕನಸನ್ನು ಕಂಡಿರುವರು. ಈ ರೀತಿಯ ಬಟ್ಟೆ ಧರಿಸಿದ ಅನೇಕ ಜನರನ್ನು ಅವನು ನೋಡಿರುವನು ಎಂದು ಹೇಳಿದಾಗ ನಮ್ಮ ಮುಬಲ್ಲಿಗ್ ಸಾಹೇಬರು ಆತನಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಜೊತೆಗೆ ಖಲೀಫರ ಫೋಟೋಗಳನ್ನು ತೋರಿಸಿದರು ಅದಕ್ಕೆ ಆ ಹುಡುಗನು ಬಹಳ ಆಶ್ಚರ್ಯದಿಂದ ಹೇಳಿದನು, ಅವನು ನೋಡಿದ ಜನರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರ), ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರ) ಅದೇ ರೀತಿ ನಾನು ಕೂಡ ಅವರಲ್ಲಿ ಇದ್ದೆವು. ಇವರೆಲ್ಲರೂ ನಾನು ನೋಡಿದ ಅದೇ ಜನರಾಗಿದ್ದಾರೆ ಎಂದು ಹೇಳಿದನು. ಅವರೆಲ್ಲರನ್ನೂ ಒಟ್ಟುಗೂಡಿಸುವ ಮೂಲಕ, ಹಝ್ರತ್ ಮಸೀಹ್ ಮೌಊದ್(ಅ) ಅವರ ನಂತರದ ಖಿಲಾಫತ್ ವ್ಯವಸ್ಥೆಯು ನಿರಂತರತೆಯನ್ನು ಸ್ಥಾಪಿಸುವ ವ್ಯವಸ್ಥೆಯಾಗಿದೆ ಎಂದು ಅಲ್ಲಾಹನು ತೋರಿಸಿದನು. ಆದಾಗ್ಯೂ, ಈ ಕನಸುಗಳ ನಂತರ, ಈ ಕುಟುಂಬವು ಬೈಅತ್ ಮಾಡಿತು. ನಿಜವಾದ ಹಂಬಲವಿದ್ದರೆ ಅಲ್ಲಾಹನು ಈ ರೀತಿಯಲ್ಲಿ ಮಾರ್ಗದರ್ಶನ ನೀಡುತ್ತಾನೆ.

ಮತ್ತೆ ಇಂಡೋನೇಷ್ಯಾದ ದಕ್ಷಿಣ ಪ್ರಾಂತ್ಯದಲ್ಲಿ ಬರ್ಉ ಎಂಬ ಸ್ಥಳವಿದೆ. ಅಮೀರ್ ಸಾಹಿಬ್ ಅವರು ಹೀಗೆ ಬರೆದಿದ್ದಾರೆ. ಒಮ್ಮೆ ನಮ್ಮ ಮುಬಲ್ಲಿಗ್ ಸಾಹೇಬರು ಮಸೀದಿಯಲ್ಲಿ ಫಜ್ರ್ ನಮಾಝನ್ನು ನಿರ್ವಹಿಸುತ್ತಿರುವಾಗ ಒಬ್ಬ ವ್ಯಕ್ತಿಯು ಜಮಾಅತ್‌ನಲ್ಲಿ ಸೇರ್ಪಡೆಯಾಗಲು ಆಗಮಿಸಿ ಹೀಗೆ ಹೇಳಿದನು. ಆನು ತನ್ನ ಪತ್ನಿಯ ಸಂಬಂಧಿಕರನ್ನು ಭೇಟಿಯಾಗಲು ಬೇರೆ ಕಡೆಯಿಂದ ಇಲ್ಲಿಗೆ ಬಂದಿರುವುದಾಗಿ ತಿಳಿಸಿದನು. ಸಂಭಾಷಣೆಯ ಸಮಯದಲ್ಲಿ ಅವರು ತಮ್ಮ ಹಿಂದಿನ ಜೀವನದ ಕಷ್ಟಗಳ ಬಗ್ಗೆ ಹೇಳಿದರು. ಒಮ್ಮೆ ಕಠಿಣ ಪರಿಸ್ಥಿತಿಯಲ್ಲಿ ಅವರು ಬಿಳಿ ಪೇಟ ಮತ್ತು ಗಡ್ಡವನ್ನು ಹೊಂದಿರುವ ಹಿರಿಯ ವ್ಯಕ್ತಿಯನ್ನು ಭೇಟಿಯಾದ ಹಾಗೆ ಕನಸು ಕಂಡಿದ್ದರು. ನಲವತ್ತು ದಿನಗಳ ಕಾಲ ಪ್ರತಿ ಫಜ್ರ್ ನಮಾಝ್‌ನ ನಂತರ ದಾನ ಪೆಟ್ಟಿಗೆಯಲ್ಲಿ ದಾನ ಹಾಕುವುದನ್ನು ಮುಂದುವರಿಸಿದರೆ ಕಷ್ಟಗಳು ದೂರವಾಗುತ್ತವೆ ಎಂದು ಕನಸಿನಲ್ಲಿ ಪೇಟಧಾರಿ ಹಿರಿಯರು ಹೇಳಿದರು. ಆತನು ಅದರಂತೆಯೇ ಮಾಡಿದರು. ಅವರು ಹೇಳುತ್ತಾರೆ 20ನೇ ದಿನದಲ್ಲಿ ಅವರ ತೊಂದರೆಗಳು ಮಾಯವಾಗಲು ಪ್ರಾರಂಭಿಸಿದವು. ವಿವಿಧ ಉದ್ಯೋಗಗಳು ಮತ್ತು ಸೌಲಭ್ಯಗಳು ಸಹ ಕಂಡುಬಂದಿವೆ. ಸುಮಾರು ಮೂರು ತಿಂಗಳ ಹಿಂದೆ ಮತ್ತೆ ಕನಸಿನಲ್ಲಿ ಬಿಳಿ ಪೇಟ, ಗಡ್ಡಧಾರಿಯೊಬ್ಬರನ್ನು ಕಾಣಿಸಿಕೊಂಡು ಹಣ್ಣು ಹಂಪಲು ಬೆಟ್ಟಕ್ಕೆ ಕರೆದೊಯ್ದು ತನ್ನಲ್ಲಿ ಧರ್ಮನಿಷ್ಠೆ ತೋರುವವರಿಗೆ ಮಾತ್ರ ಈ ಕನಸನ್ನು ಹೇಳಬೇಕು ಎಂದರು. ಅದರ ನಂತರ, ಮುಬಲ್ಲಿಗ್ ಸಾಹೇಬರು ಅವರಿಗೆ ಖಲೀಫರ ಫೋಟೋಗಳನ್ನು ತೋರಿಸಿದರು, ಆದ್ದರಿಂದ ವ್ಯಕ್ತಿಯು ಆಶ್ಚರ್ಯಚಕಿತನಾದನು, ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರ) ರವರ ಫೋಟೋವನ್ನು ತೋರಿಸಿ, "ನಾನು ಈ ವ್ಯಕ್ತಿಯನ್ನು ನೋಡಿದ್ದೇನೆ" ಎಂದು ಹೇಳಿದರು. ಹೀಗೆ ಈ ವ್ಯಕ್ತಿಯು ಬೈಅತ್ ಮಾಡಿ ಅಹ್ಮದೀಯ ಜಮಾಅತ್ತಿನಲ್ಲಿ ಸೇರ್ಪಡೆಯಾದರು.

ಮತ್ತೆ ಮಾಲಿ ದೇಶದ ಮಹಿಳೆಯ ಹೆಸರು ಸರಾಜಿ ಎಂದಾಗಿದೆ. ಸ್ಥಳೀಯ ಮುಬಲ್ಲಿಗ್ ಸಾಹೇಬರು ಅವರನ್ನು ಅತ್ಯಂತ ಪ್ರಾಮಾಣಿಕ ಮಹಿಳೆಯಾಗಿದ್ದಾರೆ ಎಂದು ಬರೆದಿದ್ದಾರೆ. ಸುತ್ತಮುತ್ತಲಿನ ಹಳ್ಳಿಗಳಲ್ಲಿ ಎಲ್ಲೇ ತಬ್ಲೀಗಿನ ಕಾರ್ಯಕ್ರಮದ ಬಗ್ಗೆ ಕೇಳಿದರೂ ನನ್ನನ್ನು ಅಲ್ಲಿಗೆ ಸೈಕಲ್ ನಲ್ಲಿ ಕರೆದುಕೊಂಡು ಹೋಗುವಂತೆ ತನ್ನ ಮಕ್ಕಳಿಗೆ ಹೇಳುತ್ತಾರೆ. ಅವರು ಅಹ್ಮದಿಯಾಗುವ ಮೊದಲು ತನ್ನ ಕನಸಿನಲ್ಲಿ ಎರಡು ಧ್ವನಿಗಳನ್ನು ಕೇಳುತ್ತಿದ್ದಳು ಎಂದು ಅವಳು ಹೇಳುತ್ತಾಳೆ. ಒಂದು ನನ್ನ ಖುತ್‌ಬ ಜುಮುಅದ ಜೊತೆಗೆ ನಾನು ಪಠಿಸುವ ತಶಹ್ಹುದ್ ಮತ್ತು ಸೂರಾ ಫಾತಿಹಾದ ಪಠಣದ ಧ್ವನಿ, ಮತ್ತು ಇನ್ನೊಂದು ಅಲ್ಲಿನ ಮುಬಲ್ಲಿಗ್ ಮುಆಝ್ ಸಾಹಿಬ್ ಅವರ ತಬ್ಲೀಗಿನ ಧ್ವನಿ. ಅವರು ಹೇಳುತ್ತಾರೆ ನನ್ನ ಕನಸಿನಲ್ಲಿ ಯಾರ ಧ್ವನಿಗಳು ನನಗೆ ಬರುತ್ತವೆ ಎಂದು ನಾನು ಚಿಂತಿಸುತ್ತಿದ್ದೆ. ಈಗ ಜಮಾಅತ್ತಿನ ರೇಡಿಯೋ ಕಾರ್ಯಕ್ರಮ ಪ್ರಾರಂಭವಾದಾಗ ಅವರು ರೇಡಿಯೊದಲ್ಲಿ ನನ್ನ ಖುತ್‌ಬವನ್ನು ಕೇಳಿದಾಗ, ನನ್ನ ತಿಲಾವತ್ ಅನ್ನು ಕೇಳಿದಾಗ, ಇತರ ತಬ್ಲೀಗಿನ ಕಾರ್ಯಕ್ರಮಗಳನ್ನು ವೀಕ್ಷಿಸಿದಾಗ, ಅವರು ನಾನು ನನ್ನ ಕನಸ್ಸಿನಲ್ಲಿ ಕೇಳುತ್ತಿದ್ದ ಅದೇ ಧ್ವನಿಗಳು ಇದಾಗಿವೆ ಎಂದು ಹೇಳಲು ಪ್ರಾರಂಭಿಸಿದರು, ಇದು ಅವರ ಅಹ್ಮದೀಯತ್ ಸ್ವೀಕಾರಕ್ಕೆ ಕಾರಣವಾಯಿತು.

ಕ್ಯಾಮರೂನ್ ಮತ್ತೊಂದು ದೇಶವಿದೆ ಅಲ್ಲಿನ ಒಂದು ವರದಿ ಇದೆ. ಅಲ್ಲಿನ ಯುವಕರೊಬ್ಬರು ಅಬ್ದುಲ್ ರಹಮಾನ್ ಬೇಲಾ ಎಂಬವರು ಅಹ್ಮದಿಯಾ ಜಮಾಅತ್ತನ್ನು ಸ್ವೀಕರಿಸಿದ ಘಟನೆಯನ್ನು ಹೀಗೆ ವಿವರಿಸಿದರು. ಕೆಲವು ವರ್ಷಗಳ ಹಿಂದೆ ನಾನು ಕನಸಿನಲ್ಲಿ ಇಬ್ಬರು ಮಹನೀಯರನ್ನು ನೋಡಿದೆ. ಅವರಲ್ಲಿ ಒಬ್ಬರು ನನ್ನನ್ನು ಕೇಳಿದರು ನೀವು ಏನು ಮಾಡುತ್ತೀರಿ? ಅದಕ್ಕೆ ನಾನು ನಗರದಲ್ಲಿ ಬೈಕ್ ಓಡಿಸುತ್ತೇನೆ ಮತ್ತು ಸವಾರಿಗಳನ್ನು ಪಡೆಯುತ್ತೇನೆ ಹೀಗೆ ನಾನು ನನ್ನ ಜೀವನವನ್ನು ಸಾಗಿಸುತ್ತೇನೆ ಎಂದು ನಾನು ಹೇಳಿದೆ. ಅದಕ್ಕೆ ಮತ್ತೊಬ್ಬರು ಬೈಕ್ ಬಿಟ್ಟು ಇಲ್ಲಿಗೆ ಬಂದು ನಮಾಝ್ ನಿರ್ವಹಿಸುವಂತೆ ಹೇಳಿದರು. ಹಾಗಾಗಿ ನಾನು ನಮಾಝ್ ನಿರ್ವಹಿಸಿದೆ ತದನಂತರ ನನ್ನ ಕಣ್ಣುಗಳು ತೆರೆದವು. ಕೆಲವು ದಿನಗಳ ನಂತರ ನಾನು ಮಾರುಕಟ್ಟೆಯಲ್ಲಿ ಕರಪತ್ರಗಳನ್ನು ಹಂಚುತ್ತಿದ್ದ ಯುವಕನನ್ನು ನೋಡಿದೆ ಮತ್ತು ಆ ಕರಪತ್ರಗಳು ಅಹ್ಮದಿಯಾ ಜಮಾಅತ್‌ಗೆ ಸೇರಿದವು ಎಂದು ಅವರು ಹೇಳುತ್ತಾರೆ. ನಾನು ಮನೆಗೆ ಬಂದು ಈ ಕರಪತ್ರವನ್ನು ಎಚ್ಚರಿಕೆಯಿಂದ ನೋಡಿದೆ ಮತ್ತು ಅದನ್ನು ಓದಿದೆ, ನಂತರ ಈ ಕರಪತ್ರದಲ್ಲಿ ನಾನು ನನ್ನ ಕನಸ್ಸಿನಲ್ಲಿ ಕಂಡ ಆ ಮಹನೀಯರ ಚಿತ್ರವನ್ನು ನೋಡಿದೆ ಮತ್ತು ಆ ಚಿತ್ರವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರದ್ದಾಗಿತ್ತು. ತದನಂತರ ನಾನು ಜಮಾಅತ್ ಅನ್ನು ಸಂಪರ್ಕಿಸಲು ಪ್ರಯತ್ನಿಸಿದೆ. ಮುಅಲ್ಲಿಮ್ ಸಾಹಿಬ್ ಅವರೊಂದಿಗೆ ಅವರ ಸಂಪರ್ಕವು ಹೆಚ್ಚಾಯಿತು. ಅವರು ಹೆಚ್ಚು ಜಮಾಅತ್‌ನ ಸಾಹಿತ್ಯವನ್ನು ಪಡೆದರು ಮತ್ತು ಅವರು ಮೊದಲು ಕನಸಿನಲ್ಲಿ ಕಂಡ ಇನ್ನೊಬ್ಬ ವ್ಯಕ್ತಿಯ ಚಿತ್ರವನ್ನು ನಾನು ಉಳಿದ ಸಾಹಿತ್ಯದಲ್ಲಿ ನೋಡಿದ್ದೇನೆ ಮತ್ತು ಆ ಚಿತ್ರವು ನನ್ನದು ಎಂದು ಹೇಳುತ್ತಾರೆ. ಎರಡನೆಯದು ಪ್ರಸ್ತುತ ಖಲೀಫರಿಗೆ ಸೇರಿದೆ ಎಂದು ಹೇಳಲಾಗುತ್ತದೆ. ಅವರ ಹೆಸರು ಕೇಳಿದ್ದೆ ಆದರೆ ಅವರ ಬಗ್ಗೆ ಹೆಚ್ಚಿಗೆ ಗೊತ್ತಿರಲಿಲ್ಲ ಆದರೆ ಕನಸಿನಲ್ಲಿ ನಮಾಝ್ ನೇತೃತ್ವ ವಹಿಸಲು ಹೇಳಿದವರು ಈಗಿನ ಜಮಾಅತ್‌ನ ಖಲೀಫರಾಗಿದ್ದು, ಕನಸಿನಲ್ಲಿ ಪ್ರಾರ್ಥನೆಗೆ ಕರೆದು ಮುನ್ನಡೆಸಿದ್ದು ಅವರ ಅನುಗ್ರಹವಾಗಿದೆ. ಕಳೆದ ವರ್ಷ ನಾವು ಗ್ರಾಮದ ಮುಖ್ಯಸ್ಥರು ನಿಧನರಾದರು ಮತ್ತು ಅವರಿಗೆ ಮಕ್ಕಳಿಲ್ಲದ್ದರಿಂದ ಅವರ ಇಚ್ಛೆಯ ಪ್ರಕಾರ ನನ್ನನ್ನು ಗ್ರಾಮದ ಮುಖ್ಯಸ್ಥನನ್ನಾಗಿ ಮಾಡಲಾಯಿತು ಮತ್ತು ಈ ಗೌರವವನ್ನು ನೀಡಲಾಯಿತು ಎಂದು ಅವರು ಹೇಳುತ್ತಾರೆ ಮತ್ತು ನಾನು ಭಾವಿಸುವುದೇನೆಂದರೆ ಈ ಗೌರವ ನನಗೆ ಲಭಿಸಿದ್ದು ಜಮಾಅತ್‌ಗೆ ಸೇರಿದ್ದರಿಂದ ಎಂದು ಅವರು ಹೇಳುತ್ತಾರೆ.

ನಂತರ ಗಿನಿ ಬಿಸ್ಸಾವ್ ಎಂಬ ಮತ್ತೊಂದು ದೇಶವಿದೆ. ಅಲ್ಲಿನ ಮುಬಲ್ಲಿಗ್ ಇಂಚಾರ್ಜ್ ಸಾಹಿಬ್ ಹೇಳುತ್ತಾರೆ ಇಲ್ಲಿ ಒಂದು ಪ್ರದೇಶವಿದೆ ಅಲ್ಲಿ ಒಬ್ಬ ಮಹಿಳೆ ಮರಿಯಾ ಸಾಹಿಬಾ ಇದ್ದಾರೆ. ಆಕೆಯ ಹೆಸರು ಆಯಿಷಾ ಮಾರಿಯಾ ಎಂದಾಗಿದೆ. ಅವರ ಇಬ್ಬರು ಗಂಡುಮಕ್ಕಳು ಅಹ್ಮದಿಯತ್ ಅನ್ನು ಸ್ವೀಕರಿಸಿಕೊಂಡಾಗ, ಆಯಿಷಾ ಸಾಹಿಬ ಅವರ ಹಿರಿಯ ಸಹೋದರರು ಜಮಾಅತ್ ಅನ್ನು ತುಂಬಾ ವಿರೋಧಿಸುವ ವ್ಯಕ್ತಿಯಾಗಿದ್ದರು ಮತ್ತು ಅವರೇ ಸ್ವತಃ ಆಯಿಷಾ ಮತ್ತು ಅವರ ಕುಟುಂಬವನ್ನು ಪೋಷಕರಾಗಿದ್ದರು ಅವರೇ ಆಹಾರ ಇತ್ಯಾದಿಗಳನ್ನು ತೆಗೆದುಕೊಳ್ಳುವವರಾಗಿದ್ದರು. ಅವರು ತಮ್ಮ ಸಹೋದರಿಯನ್ನು ಕರೆ ಮಾಡಿ ನಿನ್ನ ಮಕ್ಕಳು ಅಹ್ಮದೀಯತ್ ಅನ್ನು ತ್ಯಜಿಸದಿದ್ದರೆ ನಾನು ನಿಮಗೆ ಸಹಾಯ ಮಾಡುವುದನ್ನು ನಿಲ್ಲಿಸುತ್ತೇನೆ ಮತ್ತು ನಿಮ್ಮೊಂದಿಗೆ ನನಗೆ ಯಾವುದೇ ಸಂಬಂಧವಿಲ್ಲ ಎಂದು ಎಚ್ಚರಿಕೆ ನೀಡಿದರು. ಇದನ್ನು ಕೇಳಿ ಆಯಿಷಾ ತುಂಬಾ ಚಿಂತಿತಳಾದಳು. ಅವರು ಮಕ್ಕಳನ್ನು ಕರೆದು ಅಹ್ಮದಿಯತ್ ಅನ್ನು ತೊರೆಯಲು ಹೇಳಿದರು, ಆದರೆ ಈ ಮಕ್ಕಳು ನಮಗೆ ಅಲ್ಲಾಹನ ಸ್ವಯಂ ಸಾಕು ಮತ್ತು ನಾವು ಎಂದಿಗೂ ಅಹ್ಮದಿಯತ್ ಅನ್ನು ತ್ಯಜಿಸುವುದಿಲ್ಲ ಎಂದು ಉತ್ತರಿಸಿದರು. ಪುತ್ರರ ಈ ಉತ್ತರವನ್ನು

ಕೇಳಿ ಆಯಿಷಾ ಹೆಚ್ಚು ಚಿಂತಾಕ್ರಾಂತಳಾದಳು. ಅವಳಿಗೆ ಏನು ಮಾಡಬೇಕೆಂದು ಅರ್ಥವಾಗಲಿಲ್ಲ. ಅವರು ಹೇಳುತ್ತಾರೆ ಎರಡು ದಿನಗಳ ನಂತರ ಅವರು ತುಂಬಾ ಚಿಂತಿತರಾಗಿ ಜೋರಾಗಿ ಅಳುತ್ತಿರುವುದನ್ನು ಕನಸಿನಲ್ಲಿ ನೋಡಿದೆ. ಅಷ್ಟರಲ್ಲಿ ಬಿಳಿಯ ಬಟ್ಟೆ ತೊಟ್ಟಿದ್ದ ಬಿಳಿ ಗಡ್ಡಧಾರಿಯೊಬ್ಬರು ಆಕೆಯನ್ನು ಕರೆದು ಅಳುತ್ತಿರುವುದೇಕೆ ಎಂದು ಕೇಳಿದಾಗ ಅವರು ನಡೆದ ಘಟನೆಯನ್ನೆಲ್ಲ ವಿವರಿಸಿದರು. ಅದಕ್ಕೆ ಅವರು ಅವರಿಗೆ ಸಮಾಧಾನಪಡಿಸುತ್ತ ಹೇಳಿದರು, "ಚಿಂತಿಸಬೇಡಿ, ನಿಮ್ಮ ಮಕ್ಕಳು ಎಲ್ಲರಿಗಿಂತ ಉತ್ತಮ ಸ್ಥಾನದಲ್ಲಿರುತ್ತಾರೆ." ಅಷ್ಟರಲ್ಲಿ ಇದನ್ನು ಕೇಳಿದ ತಕ್ಷಣ ಅವರ ಕಣ್ಣುಗಳು ತೆರೆದವು. ಕನಸಿನ ನಂತರ ಅವರ ಮನಸ್ಸು ತೃಪ್ತಿಗೊಂಡಿತು. ಬೆಳಿಗ್ಗೆ, ಅವರು ನಮ್ಮ ಮಿಷನರಿಗೆ ಕನಸನ್ನು ವಿವರಿಸಿದರು ಮತ್ತು ಮಿಷನರಿ ಅವರಿಗೆ ನನ್ನ ಚಿತ್ರವನ್ನು ತೋರಿಸಿದಾಗ, ಅವರು ನನ್ನ ಕನಸಿನಲ್ಲಿ ಕಾಣಿಸಿಕೊಂಡ ವ್ಯಕ್ತಿ ಎಂದು ಹೇಳಿದರು ಮತ್ತು ಅವರು ನನ್ನನ್ನು ಸಮಾಧಾನಪಡಿಸಿದರು. ಈಗ, ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ಅವರು ತುಂಬಾ ಪ್ರಾಮಾಣಿಕ ಅಹ್ಮದಿಯರು ಮತ್ತು ಲಜ್ನಾದ ಪ್ರತಿಯೊಂದು ಕೆಲಸದಲ್ಲಿ ಮೊದಲ ಶ್ರೇಣಿಯನ್ನು ಸೇರುವವರಾಗಿದ್ದಾರೆ.

ಕೀನ್ಯಾದ ಒಂದು ಘಟನೆ ಇದೆ. ನಕುರು ಪ್ರದೇಶದ "ಭಾಟಿ" ಎಂಬ ಪ್ರದೇಶದಲ್ಲಿ ನಮ್ಮ ಜಮಾಅತ್ ಇದೆ ಮತ್ತು ಈ ಪ್ರದೇಶವು ಕ್ರಿಶ್ಚಿಯನ್ ಬಹುಸಂಖ್ಯಾತ ಪ್ರದೇಶವಾಗಿದೆ. ಇದು ಒಂದು ಸಣ್ಣ ಪಟ್ಟಣವಾಗಿದ್ದು, ಈ ಪಟ್ಟಣದಲ್ಲಿ ಸುಮಾರು ಐನೂರೈವತ್ತು ಚರ್ಚ್‌ಗಳಿವೆ ಮತ್ತು ಒಂದೇ ಒಂದು ಅಹ್ಮದಿ ಮುಸ್ಲಿಮರ ಕೇಂದ್ರವಿದೆ ಎಂದು ಹೇಳಲಾಗುತ್ತದೆ. ಒಂದು ದಿನ ನಮ್ಮ ಕೇಂದ್ರಕ್ಕೆ ಒಬ್ಬ ಮುಸಲ್ಮಾನನಾಗಿರುವ ವ್ಯಕ್ತಿ ಬಂದು ನಮಾಝ್‌ಗೆ ಸೇರಿದನು. ಅವನು ನಮಾಝನ್ನು ಮುಗಿಸಿದಾಗ, ಅವನು ತನ್ನ ಹೆಸರು ಮಹಮ್ಮದ್ ಅಬ್ದಿ ಮತ್ತು ಅವನು ಈ ಸ್ಥಳದವನೇ ಆಗಿದ್ದಾನೆ ಎಂದು ಹೇಳಿದನು. ಕೆಲ ದಿನಗಳ ಹಿಂದೆ ಇಲ್ಲಿ ನಮಾಝ್ ಕೇಂದ್ರ ಇರುವುದು ತಿಳಿದು ನಮಾಝ್‌ಗೆ ತೆರಳಿದ್ದೆ ಎಂದರು. ಜಮಾಅತ್‌ಗೆ ಪರಿಚಯವಾದ ಮೇಲೆ ಆತನು ಜಮಾಅತ್ ವಿರೋಧಿ ಧೋರಣೆ ಹೊಂದಿದ್ದಾನೆ ಎಂಬುದು ಅಪಷ್ಟವಾಯಿತು. ಒಂದು ದಿನ ಅವನು ದಾರಿಯಲ್ಲಿ ಮತ್ತೆ ಭೇಟಿಯಾದಾಗ, ನಮ್ಮ ಮುಅಲ್ಲಿಮ್ ಸಾಹಿಬ್ ಹೇಳಿದರು ನೀವು ಮುಸ್ಲಿಂ ಸಹೋದರನಾಗಿದ್ದೀರಿ, ನಮ್ಮಲ್ಲಿ ಭಿನ್ನಭಿಪ್ರಾಯವಿದೆ, ಆದರೆ ನೀವು ನಮಾಝ್ ನಿರ್ವಹಿಸಲು ನಮ್ಮ ಕೇಂದ್ರಕ್ಕೆ ಆಗಮಿಸಿರಿ. ನೀವು ಯಾವುದಾದರೂ ಭಿನ್ನಭಿಪ್ರಾಯ ಹೊಂದಿದರೆ ಅಥವಾ ಪ್ರಶ್ನೆಗಳನ್ನು ಹೊಂದಿದ್ದರೆ ಅದನ್ನು ನೀವು ಮುಕ್ತವಾಗಿ ಕೇಳಿರಿ, ನಾವು ಉತ್ತರಿಸುತ್ತೇವೆ. ಅವರು ಃಏಳುತ್ತಾರೆ ನಾನು ಅವರಿಗಾಗಿ ದುಆ ಸಹ ಮಾಡುತ್ತಿದ್ದೆ. ಕೆಲವು ದಿನಗಳ ನಂತರ ಮುಹಮ್ಮದ್ ಅಬ್ದಿ ಎಂಬ ಆ ವ್ಯಕ್ತಿ ನನ್ನ ನಿವಾಸಕ್ಕೆ ಬಂದರು. ಅವರು ಬಂದಾಗ, ಆ ಸಮಯದಲ್ಲಿ ನಮ್ಮ ಮನೆಯಲ್ಲಿ ಎಂಟಿಎ ನಡೆಯುತ್ತಿತ್ತು ಮತ್ತು ಎಂಟಿಎ ನಲ್ಲಿ ನನ್ನ ಖುತ್‌ಬ ಜುಮುಅ ಪ್ರಸಾರವಾಗುತ್ತಿತ್ತು. ಅವರು ಬಹಳ ಗಾಂಭೀರ್ಯದಿಂದ ಅದನ್ನು ಆಲಿಸಿದರು. ಖುತ್‌ಬ ಜುಮುಅ ಮುಗಿದ ನಂತರ, "ನಾನು ಬೈಅತ್ ಮಾಡಲು ಬಯಸುತ್ತೇನೆ" ಎಂದು ಹೇಳಿದರು. ಅವರು ಹೀಗೆ ಹೇಳಿದಾಗ ನನಗೆ ಬಹಳ ಆಶ್ಚರ್ಯವಾಯಿತು. ಈ ವ್ಯಕ್ತಿಯು ಬಾಹ್ಯವಾಗಿ ವಿರೋಧಿಯಾಗಿದ್ದನು, ಇವನಲ್ಲಿ ಇದ್ದಕ್ಕಿದ್ದಂತೆ ಏನು ಬದಲಾವಣೆ ಸಂಭವಿಸಿದೆ ಎಂದು. ತದನಂತರ ಬೈಅತ್ ತೆಗೆದುಕೊಂಡಾಗ. ನಾನು ಕಾರಣವನ್ನು ಕೇಳಿದೆ. ಅದಕ್ಕೆ ಅವರು ಹೇಳಿದರು: ನಿನ್ನೆ ರಾತ್ರಿ ನಾನು ಮಲಗಿದ್ದೆ ತಕ್ಷಣ ನನ್ನ ಕಣ್ಣು ತೆರೆದಾಗ, ನಾನು ಅಂಗಳಕ್ಕೆ ಹೋದೆ, ಮತ್ತು ಇದ್ದಕ್ಕಿದ್ದಂತೆ ನಾನು ಆಕಾಶದ ಕಡೆಗೆ ನೋಡಿದೆ, ಮತ್ತು ನನ್ನ ಹೃದಯದ ಮೇಲೆ ಆಳವಾದ ಮತ್ತು ಆಳವಾದ ಪರಿಣಾಮವನ್ನು ಬೀರುವ ಪ್ರಕಾಶಮಾನವಾದದ್ದನ್ನು ನಾನು ನೋಡಿದೆ, ಮತ್ತು ಈಗ ನಾನು ನಿಮ್ಮ ಬಳಿಗೆ ಬಂದಾಗ ಮತ್ತು ಇಲ್ಲಿ, ನಾನು ಖಲೀಫಾ ಅವರ ಖುತ್‌ಬ ಜುಮುಅವನ್ನು ನೋಡಿದಾಗ, ರಾತ್ರಿಯ ಚಿತ್ರವು ನನ್ನ ಮನಸ್ಸಿನಲ್ಲಿ ಸ್ಪಷ್ಟವಾಯಿತು. ಈಗ ಈ ಸಮಯದಲ್ಲಿ ನಾನು ಇಡೀ ಕುಟುಂಬದೊಂದಿಗೆ ಬೈಅತ್ ಮಾಡುತ್ತೇನೆ ಮತ್ತು ಜಮಾಅತ್ ಅನ್ನು ಸೇರುತ್ತೇನೆ.

ಈಗ, ಸರ್ವಶಕ್ತನಾದ ಅಲ್ಲಾಹನು ಅಹ್ಮದಿಯ್ಯತ್‌ನ ಸತ್ಯಾಂಶವನ್ನು ಎದುರಾಳಿಗೆ ಬಹಿರಂಗಪಡಿಸುತ್ತಾನೆ ಆದರೆ ಅವನ ಹೃದಯದಲ್ಲಿ ಖಿಲಾಫತ್‌ನೊಂದಿಗೆ ಸಂಬಂಧವನ್ನು ಹೇಗೆ ಸೃಷ್ಟಿಸುತ್ತಾನೆ. ಇದು ಯಾವುದೇ ಮಾನವ ಪ್ರಯತ್ನದಿಂದ ಸಾಧ್ಯವಿಲ್ಲ.

ಕ್ಯಾಮರೂನ್ ಮತ್ತೊಂದು ದೇಶವಿದೆ, ಅಲ್ಲಿ ಮರ್ವಾ ಎಂಬ ಒಂದು ನಗರವಿದೆ. ಸುಲೈಮಾನ್ ಸಾಹಿಬ್ ಎಂಬವರು ಅಲ್ಲಿ ಶಾಲಾ ಶಿಕ್ಷಕರಾಗಿದ್ದಾರೆ. ಅವರು ಹೇಳುತ್ತಾರೆ ನಾನು ಕೇಬಲ್‌ನಲ್ಲಿ MTA ಕಾರ್ಯಕ್ರಮವನ್ನು ನೋಡಿದೆ, ಅದರಲ್ಲಿ ಅಹ್ಮದಿಯಾ ಜಮಾಅತ್‌ನ ಖಲೀಫಾ ಮಕ್ಕಳ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದರು. ಯುಕ್ರೇನ್ ಮತ್ತು ರಷ್ಯಾ ನಡುವಿನ ಯುದ್ಧದ ಬಗ್ಗೆ ಮಗು ಕೇಳಿದಾಗ, ಅಹ್ಮದಿಯಾ ಜಮಾಅತ್‌ನ ಇಮಾಮ್ ತುಂಬಾ ಸರಳವಾಗಿ ಉತ್ತರಿಸಿದ್ದಾರೆ ಮತ್ತು ನಾನು ವಿಶ್ವದ ಅತ್ಯಂತ ಶಕ್ತಿಶಾಲಿ ರಾಷ್ಟ್ರಗಳ ಅಧ್ಯಕ್ಷರಿಗೆ ಪತ್ರಗಳನ್ನು ಬರೆದಿದ್ದೇನೆ ಎಂದು ಹೇಳಿದರು. ಈ ಸಮಯದಲ್ಲಿ ಅವರು ಜಗತ್ತಿನಲ್ಲಿ ಶಾಂತಿ ಮತ್ತು ಜಗತ್ತಿನಲ್ಲಿ ನ್ಯಾಯವನ್ನು ಸ್ಥಾಪಿಸದಿದ್ದರೆ, ಅತ್ಯಂತ ಅಪಾಯಕಾರಿ ಸನ್ನಿವೇಶಗಳು ಸಂಭವಿಸುತ್ತವೆ ಎಂದು ಎಚ್ಚರಿಸಿದ್ದಾರೆ. ಅವರು ಹೇಳುತ್ತಾರೆ ಈ ವಿಷಯಗಳನ್ನು ಕೇಳಿದ ನಂತರ ನಾನು ಜಮಾಅತ್‌ನ ಯಾರನ್ನಾದರೂ ಸಂಪರ್ಕಿಸಬೇಕು ಎಂದು ಯೋಚಿಸಿದೆ. ಅಷ್ಟರಲ್ಲಿ ಒಂದು ದಿನ ಮರ್ವಾ ನಗರದ ಸ್ಥಳೀಯ ಟಿವಿಯಲ್ಲಿ ಸ್ಥಳೀಯ ಭಾಷೆಯಲ್ಲಿ ಅಹ್ಮದಿಯಾ ಜಮಾಅತ್‌ನ ಇಮಾಮ್ ಅವರ ಖುತ್‌ಬ ಜುಮುಅದ ಅನುವಾದ ಪ್ರಸಾರವಾಗುತ್ತಿತ್ತು. ಟಿವಿ ಪರದೆಯಲ್ಲಿ ಜಮಾಅತ್‌ನ ಅಧ್ಯಕ್ಷರ ಫೋನ್ ಸಂಖ್ಯೆ ಕಾಣಿಸಿಕೊಂಡಾಗ, ನಾನು ಜಮಾಅತ್ ಅನ್ನು ಸಂಪರ್ಕಿಸಿದೆ. ಅದರ ನಂತರ ಅವರು ಜಮಾಅತ್‌ನ ಸಾಹಿತ್ಯವನ್ನು ಅಧ್ಯಾಯನ ಮಾಡಿದರು, ಖಲೀಫತುಲ್–ಮಸೀಹ್ ಅವರ ಜಾಗತೀಕ ಬಿಕ್ಕಟ್ಟಿನ ಪುಸ್ತಕವನ್ನು ಓದಿದರು. ಅದರ ನಂತರ, ನನ್ನ ಮನಸ್ಸಿಗೆ ತೃಪ್ತಿಯಾಯಿತು ಮತ್ತು ನಾನು ಬೈಅತ್ ಮಾಡಿದ ನಂತರ ಜಮಾಅತ್‌ಗೆ ಸೇರಿಕೊಂಡೆ. ಈಗ ಅವರು ಜಮಾಅತ್‌ನ ಸಕ್ರಿಯ ಸದಸ್ಯರಾಗಿದ್ದಾರೆ ಎಂದು ಮುಅಲ್ಲಿಮ್ ಸಾಹಿಬರು ಹೇಳುತ್ತಾರೆ.

ಸಿಯೆರಾಲಿಯೋನ್ ದೇಶದ ಇಬ್ರಾಹೀಂ ಎಂಬವರು ಎಂ.ಟಿ.ಎ.ದಲ್ಲಿ ನನ್ನ ಖುತ್ಬಗಳನ್ನು ಆಲಿಸಿದರು ಮತ್ತು ಮೌಲವಿಗಳು ಕಲಿಸುತ್ತಿರುವುದು ಸುಳ್ಳು ಎಂದು ಘೋಷಿಸುತ್ತಾ ಹೀಗೆ ಹೇಳಿದರು: ಅಹ್ಮದಿಯಾ ಜಮಾಅತಿನ ಇಮಾಮರು ತಮ್ಮ ಖುತ್ಬದಲ್ಲಿ ಪವಿತ್ರ ಖುರ್‌ಆನ್ ಮತ್ತು ಹದೀಸುಗಳನ್ನು ಉಲ್ಲೇಖಿಸುವುದನ್ನು ನಾನು ಸ್ವತಃ ಆಲಿಸಿದ್ದೇನೆ. ಅವರ ಕಲಿಮ ವಚನ ಕೂಡ ನಮ್ಮದೇ ಆಗಿದೆ. ಆದ್ದರಿಂದ ಅಹ್ಮದಿಯಾ ಜಮಾಅತ್ ಸುಳ್ಳಾಗಲು ಸಾಧ್ಯವಿಲ್ಲ. ಹೀಗೆ ಅವರು ಅಹ್ಮದಿಯಾ ಜಮಾಅತನ್ನು ಸ್ವೀಕಾರ ಮಾಡಿದರು.

ಟ್ರಿನಿಡಾಡ್‌ನ ಅಮೀರ್ ಸಾಹಿಬ್ ಬರೆಯುತ್ತಾರೆ ಓರ್ವ ನವ ಅಹ್ಮದಿ ಮಹಿಳೆ ಶೆರೀದಾ ಸಾಹಿಬ ಕಳೆದ ವರ್ಷ ತನ್ನ ಪತಿಯೊಂದಿಗೆ ಬೈಅತ್ ಮಾಡಿದರು. ಅವರು ತಮ್ಮ ಇಬ್ಬರು ಮುಸ್ಲಿಮೇತರ ಸಹೋದರಿಯರು ಮತ್ತು ನೆರೆಹೊರೆಯವರನ್ನು ತಮ್ಮ ಮನೆಯ ಟಿವಿಯಲ್ಲಿ ಜಲ್ಸಾ ಸಾಲಾನ (ವಾರ್ಷಿಕ ಸಮ್ಮೇಳನ) ಯುಕೆ ವೀಕ್ಷಿಸಲು ಆಹ್ವಾನಿಸಿದರು. ಈ ಜನರು ಜಲ್ಸಾದ ಎಲ್ಲಾ ವ್ಯವಸ್ಥೆಗಳಿಂದ ಬಹಳ ಪ್ರಭಾವಿತರಾಗಿದ್ದರು ಮತ್ತು ವಿಶೇಷವಾಗಿ ನನ್ನ ಭಾಷಣಗಳನ್ನು. ಇವುಗಳನ್ನು ನಮಗೆ ಬಹಳ ಇಷ್ಟವಾಯಿತು ಎಂದು ಅವರು ಹೇಳಿದರು. ಮತ್ತು ಅಹ್ಮದೀಯ ಜಮಾಅತ್ ನಿಜವಾದ ಇಸ್ಲಾಂ ಧರ್ಮವಾಗಿದೆ ಎಂದು ಅವರು ಹೇಳಲು ಪ್ರಾರಂಭಿಸಿದರು ಮತ್ತು ಎಲ್ಲಾ ಇಸ್ಲಾಮಿಕ್ ಪಂಗಡಗಳು ಹೀಗಾದರೆ, ಇಸ್ಲಾಂ ಜಗತ್ತಿನಲ್ಲಿ ಪ್ರಾಬಲ್ಯ ಸಾಧಿಸಬಹುದು. ಅವರು ಹೇಳುತ್ತಾರೆ ನಾನು ಖಲೀಫತುಲ್–ಮಸೀಹ್ ಅವರನ್ನು ನೋಡಿದಾಗ ಅಳಲು ಪ್ರಾರಂಭಿಸಿದೆ ಮತ್ತು ನಾನು ಅವರ ಪಾದದ ಬಳಿ ಕುಳಿತಿದ್ದೇನೆ ಎಂದು ನನಗೆ ಅನಿಸಿತು ಮತ್ತು ಸ್ವಲ್ಪ ಸಮಯದ ನಂತರ ಅವರ ಪತಿ ನಿಧನರಾದರು, ಆದರೆ ಅವರು ತಮ್ಮ ಮನೆಯನ್ನು ಜಮಾಅತ್‌ಗೆ ನೀಡಿದರು. ಜಮಾಅತ್‌ನ ಹೆಸರಿನಲ್ಲಿ ನೀಡಲಾಗಿದ್ದು, ನಂತರ ಅದರ ಬಗ್ಗೆ ಕ್ರಮವನ್ನೂ ಕೈಗೊಳ್ಳಲಾಗುತ್ತಿದೆ.

ಕಿರ್ಗಿಸ್ತಾನ್‌ನ ಸ್ಥಳೀಯ ಸುಲ್ತಾನ್, ಅತಾ ಖಾನು ಅವರು ಅಹ್ಮದಿಯಾದರು. ಅವರು ಹೇಳುತ್ತಾರೆ ನನ್ನ ಪುತ್ರ ಮತ್ತು ಪತ್ನಿಗೆ ಬೈಅತ್ ಮಾಡಲು ಅವಕಾಶ ಲಭಿಸಿದೆ. 2017 ರಲ್ಲಿ, ನಾನು ಪ್ರತಿ ಶುಕ್ರವಾರ ಜಮಾಅತ್‌ನ ಮಿಷನ್ ಹೌಸ್‌ಗೆ ಹೋಗಲು ಪ್ರಾರಂಭಿಸಿದೆ. ನಾನು ಮತ್ತು ನನ್ನ ಪತ್ನಿ ಶುಕ್ರವಾರದ ನಮಾಝ್‌ಗೆ ಕಾರಿನಲ್ಲಿ ನಮ್ಮ ಜಮಾಅತ್‌ನ ಮಿಷನ್‌ಗೆ ಹೋದಾಗ, ಸುಮಾರು ಹನ್ನೆರಡು ಕಿಲೋಮೀಟರ್ ಪ್ರಯಾಣದಲ್ಲಿ ನಾವು ಯಾವಾಗಲೂ ಖಲೀಫತುಲ್ ಮಸೀಹ್ ಅವರ ಖುತ್‌ಬದ ರಿಕಾರ್ಡಿಂಗನ್ನು ಕೇಳುತ್ತಿದ್ದೆವು. ಈ ಖುತ್‌ಬಗಳನ್ನು ಕೇಳಿದಾಗಲೆಲ್ಲ ನನ್ನ ಭಾವನೆಗಳು ಬಲವಾಗತೊಡಗಿದವು. ಹಾಗಾಗಿ ಈ ವರ್ಷ ಮೇ 2 ರಂದು, ಪವಿತ್ರ ರಂಜಾನ್ ತಿಂಗಳ ಕೊನೆಯಲ್ಲಿ ಈದ್ ದಿನದಂದು ನಾನು ಬೈಅತ್ ಮಾಡಿದ್ದೇನೆ. ಇದು ಕಳೆದ ವರ್ಷದ ವಿಷಯವಾಗಿದೆ. ನಾನು ಇದನ್ನು ಮೊದಲೇ ವಿವರಿಸಲು ಬಯಸಿದ್ದೆ ಆದರೆ ಅದು ಬಿಟ್ಟುಬಿಡಲಾಯಿತು ಎಂದು ಹೇಳಲಾಗುತ್ತದೆ. ನಾನು ಸಂಕ್ಷಿಪ್ತವಾಗಿ ಬರೆದಿದ್ದೇನೆ ಆದರೆ ನನ್ನ ಆತ್ಮದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಪದಗಳಲ್ಲಿ ವ್ಯಕ್ತಪಡಿಸಲು ಸಾಧ್ಯವಿಲ್ಲ. ಇಸ್ಲಾಂ ಬಗ್ಗೆ ನನ್ನ ಜ್ಞಾನವನ್ನು ಹೆಚ್ಚಿಸಲು ನಾನು ಪ್ರತಿ ಪ್ರಾರ್ಥನೆಯಲ್ಲಿ ಅಲ್ಲಾಹನನ್ನು ಪ್ರಾರ್ಥಿಸುತ್ತೇನೆ ಮತ್ತು ಪ್ರತಿ ಶುಕ್ರವಾರದ ಪ್ರಾರ್ಥನೆಯು ನನಗೆ

ನಿರಂತರವಾಗಿ ಹೊಸದನ್ನು ತೆರೆಯುತ್ತದೆ.

ಪೈರಾಗೋಯೆವಿನ ಓರ್ವ ಮಹಿಳೆ ಲೀರ್ಝಾ ಎಂಬವರು ಹೇಳುತ್ತಾರೆ ಸರ್ವಶಕ್ತನಾದ ಅಲ್ಲಾಹನು ಪ್ರತಿಯೊಬ್ಬರಿಗೂ ಮಾರ್ಗದರ್ಶನ ನೀಡಲು ವಿಭಿನ್ನ ಮಾರ್ಗಗಳನ್ನು ಮಾಡಿದ್ದಾನೆ. ಇಸ್ಲಾಮ್ ಅಹ್ಮದೀಯತ್‌ನ ಕಡೆಗೆ ನನ್ನ ಪ್ರಯಾಣವು ಕರೋನಾ ಸಾಂಕ್ರಾಮಿಕ ಸಮಯದಲ್ಲಿ ಪ್ರಾರಂಭವಾಯಿತು. ಬಿಡುವಿನ ವೇಳೆಯಲ್ಲಿ ಒಂದು ಭಾಷೆಯನ್ನು ಕಲಿಯಬೇಕು ಎಂದುಕೊಂಡೆ. ಹಾಗಾಗಿ ನಾನು ಆನ್‌ಲೈನ್‌ನಲ್ಲಿ ಅರೇಬಿಕ್ ಕಲಿಯಲು ಪ್ರಾರಂಭಿಸಿದೆ. ಅರೇಬಿಕ್ ಮೂಲಕ, ನಾನು ಇಸ್ಲಾಂ ಬಗ್ಗೆ ಸಾಕಷ್ಟು ತಿಳಿದುಕೊಂಡೆ ಮತ್ತು ಅಧ್ಯಯನ ಮಾಡಲು ಪ್ರಾರಂಭಿಸಿದೆ. ಒಂದು ದಿನ, ನಾನು ನನ್ನ ಫೇಸ್‌ಬುಕ್ ಖಾತೆಯನ್ನು ತೆರೆದಾಗ, ಮಸೀದಿಯಲ್ಲಿ "ಕಾಫಿ, ಕೇಕ್ ಮತ್ತು ಇಸ್ಲಾಂ" ಎಂಬ ಶೀರ್ಷಿಕೆಯ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಹ್ವಾನವಿತ್ತು. ನಾನೇ ನೋಂದಾಯಿಸಿಕೊಂಡೆ ಮತ್ತು ಸಮಯಕ್ಕೆ ಸರಿಯಾಗಿ ಆಗಮಿಸಿದೆ, ಅಲ್ಲಿ ನಾನು ಮುರಬ್ಬಿ ಸಾಹಿಬ್ ಮತ್ತು ಅವರ ಪತ್ನಿಯನ್ನು ಭೇಟಿಯಾದೆ. ಮೊದಮೊದಲು ಅರಬ್ಬರು ಮಾತ್ರ ಮಸೀದಿಯನ್ನು ಪ್ರವೇಶಿಸಬಹುದೇ ಎಂಬ ಅನುಮಾನ ನನ್ನ ಮನಸ್ಸಿನಲ್ಲಿ ಮೂಡಿತ್ತು, ಆದರೆ ಅಲ್ಲಿಗೆ ಹೋದ ನಂತರ ನಾನು ಇಸ್ಲಾಂ ಧರ್ಮದ ಬಗ್ಗೆ ತಿಳಿದುಕೊಂಡ ವಿಷಯಗಳು ನನಗೆ ಸಂಪೂರ್ಣವಾಗಿ ಹೊಸತು. ನಾನು ಇಸ್ಲಾಂನಲ್ಲಿ ಧರ್ಮದ ವಿಷಯದಲ್ಲಿ ಯಾವುದೇ ಬಲವಂತವಿಲ್ಲ ಮತ್ತು ಇಸ್ಲಾಂ ಶಾಂತಿ ಮತ್ತು ಭದ್ರತೆಯ ಧರ್ಮವಾಗಿದೆ ಎಂದು ಕಂಡುಕೊಂಡೆ. ಆ ರಾತ್ರಿ ನಾನು ಮಸೀದಿಯಿಂದ ಹೊರಗೆ ಬಂದಾಗ ನನ್ನ ಕೈಯಲ್ಲಿ ಪವಿತ್ರ ಖುರ್‌ಆನ್ ಇತ್ತು. ಅದರ ನಂತರ ನಾನು ಮುರಬ್ಬಿ ಸಾಹಿಬ್ ಅವರ ಪತ್ನಿಯೊಂದಿಗೆ ನಿರಂತರ ಸಂಪರ್ಕದಲ್ಲಿದ್ದೆ. ನಾನು ಅವರಿಗೆ ಅನೇಕ ಪ್ರಶ್ನೆಗಳನ್ನು ಕೇಳಿದೆ. ಅವರ ವಾರದ ತರಗತಿಗಳಿಗೆ ಹಾಜರಾಗಲು ಪ್ರಾರಂಭಿಸಿದರು. ನಾನು ಸಂಪೂರ್ಣ ನಮಾಝನ್ನು ನೆನಪಿಟ್ಟುಕೊಳ್ಳಬೇಕು ಮತ್ತು ಕಲಿಯಬೇಕು ಎಂಬ ಗುರಿಯನ್ನು ನನಗಾಗಿ ಹೊಂದಿಸಿಕೊಂಡೆ. ಹೀಗೆ ಎರಡು ತಿಂಗಳು ಕಳೆಯಿತು. ನಾನು ಪ್ರತಿದಿನ ಇಸ್ಲಾಮಿನ ಬಗ್ಗೆ ಯೋಚಿಸುತ್ತಿದ್ದೆ. ಒಂದು ದಿನ ನನ್ನ ಪತಿ ನನ್ನನ್ನು ಮಸೀದಿಯಿಂದ ಕರೆದೊಯ್ಯಲು ಬಂದರು ಮತ್ತು ಹಿಂದಿರುಗುವಾಗ ನಾನು ಅವರಿಗೆ ಹೇಳುತ್ತಿದ್ದೆ, ಇಂದು ನಾನು ಈ ವಿಷಯಗಳನ್ನು ಕಲಿತಿದ್ದೇನೆ. ತದನಂತರ ಅವರು (ಪತಿ) ಅವರಿಗೆ ಹೇಳಿದರು ನೀನೇಕೆ ಮುಸಲ್ಮಾನನಾಗಬಾರದು? ಇದನ್ನು ಕೇಳಿದ ತಕ್ಷಣ ನಾನು ಸಂಪೂರ್ಣವಾಗಿ ಮೌನವಾದೆ ಮತ್ತು ನನ್ನ ಕಣ್ಣಲ್ಲಿ ನೀರು ಬರಲಾರಂಭಿಸಿತು ಏಕೆಂದರೆ ಆ ಸಮಯದಲ್ಲಿ ನಾನು ನನ್ನ ಜೀವನದಲ್ಲಿ ಮುಸ್ಲಿಂ ಆಗಬೇಕೆಂದು ಬಯಸಿದ್ದೆ ಆದರೆ ಅದು ನನಗೆ ಬಹಳ ದೊಡ್ಡ ನಿರ್ಧಾರವಾಗಿತ್ತು. ಆದಾಗ್ಯೂ, ಅದರ ನಂತರ ನಾನು ಅಹ್ಮದಿ ಮುಸ್ಲಿಂ ಆಗಲು ನಿರ್ಧರಿಸಿದೆ. ನಾನು ಜಮಾಅತ್‌ನ ಕುರಿತು ಹೆಚ್ಚಿನ ಮಾಹಿತಿಯನ್ನು ಪಡೆದುಕೊಂಡೆ, ಸಂಶೋಧನೆ ಮತ್ತು ಪ್ರಶ್ನೆಗಳನ್ನು ಕೇಳಿದೆ. ನಾನು ನಿಯಮಿತವಾಗಿ ಖಲೀಫರ ಖುತ್‌ಬಗಳನ್ನು ಕೇಳುತ್ತಿದ್ದೆ ಮತ್ತು ನಂತರ ನಾನು ಸರಿಯಾದ ಹಾದಿಯಲ್ಲಿದ್ದೇನೆ ಎಂದು ನನಗೆ ಮನವರಿಕೆಯಾಯಿತು. ನಮ್ಮ ಬಳಿ ಮಾರ್ಗದರ್ಶನಗಳಿವೆ, ನಮ್ಮ ಬಗ್ಗೆ ಕಾಳಜಿ ವಹಿಸುವ, ನಮಗೆ ಮಾರ್ಗದರ್ಶನ ನೀಡುವ, ನಮಗಾಗಿ ಪ್ರಾರ್ಥಿಸುವ ಇಮಾಮ್ ನಮ್ಮಲ್ಲಿದ್ದಾರೆ. ನಾನು ಕಲಿಯಲು ಇನ್ನೂ ಸಾಕಷ್ಟು ಇದ್ದರೂ, ನನ್ನ ಹೃದಯವು ಅಹ್ಮದಿಯಾ ಜಮಾತ್‌ನಿಂದ ತೃಪ್ತವಾಗಿದೆ. ಬೈಅತ್‌ನ ಕೆಲವು ತಿಂಗಳ ನಂತರ, ಆಕೆಯ ಪತಿ ಕೂಡ ಬೈಅತ್ ಮಾಡಿದರು ಮತ್ತು ಈಗ ಅವರು ಅಲ್ಲಿ ಪರಾಗ್ವೆಯ ಜಮಾಅತ್‌ನ ಅತ್ಯಂತ ಪ್ರಾಮಾಣಿಕ ಮತ್ತು ಸಕ್ರಿಯ ಸದಸ್ಯರಾಗಿದ್ದಾರೆ.

ನಂತರ ಕಾಂಗೋ ಕಿನ್ಶಾಸಾ ಬುಕಾವು ನಗರದ ಬಳಿ ಒಂದು ಸಣ್ಣ ಪಟ್ಟಣ ಅಥವಾ ಗ್ರಾಮವಿದೆ. ಅಲ್ಲಿ ಒಬ್ಬ ವ್ಯಕ್ತಿ ಅಹ್ಮದ್ ಬಟಾಟೊ ಸಾಹಿಬ್ ಇದ್ದಾರೆ. ಅವರು ಎಂಟು ಜನರ ಕುಟುಂಬದೊಂದಿಗೆ ಬೈಅತ್ ಮಾಡಿದರು ಅದಲ್ಲದೆ ಅದರ ನಂತರ ಅವರು ತಬ್ಲೀಗ್ ಮಾಡಲು ಪ್ರಾರಂಭಿಸಿದರು ಮತ್ತು ಅವರ ತಬ್ಲೀಗ್‌ನ ಪರಿಣಾಮವಾಗಿ, ಇನ್ನೂ ಅರವತ್ತೆರಡು ಜನರು ಜಮಾಅತ್ ಅನ್ನು ಸೇರಿದರು. ನಾನು ಅಹ್ಮದಿಯಾ ಜಮಾಅತ್‌ಗೆ ಸೇರಲು ಮುಖ್ಯ ಕಾರಣ ಕಾಲಘಟ್ಟದ ಖಲೀಫರು ಮತ್ತು ಖಿಲಾಫತ್ ವ್ಯವಸ್ಥೆಯಾಗಿದೆ ಎಂದು ಈ ಸ್ನೇಹಿತರು ಹೇಳುತ್ತಾರೆ. ನಾನು ಅವರಿಗೆ ಆನ್‌ಲೈನ್‌ನಲ್ಲಿ ಪವಿತ್ರ ಖುರ್‌ಆನ್ ಕಲಿಸುತ್ತಿದ್ದೇನೆ ಎಂದು ಅಮೀರ್ ಸಾಹಿಬ್ ಹೇಳುತ್ತಾರೆ. ಅವರು ಅಹ್ಮದೀಯ ಸಮುದಾಯಕ್ಕೆ ಸೇರುವ ಮೊದಲು ಸುನ್ನಿ ಮುಸ್ಲಿಮ್ ಆಗಿದ್ದರು ಎಂದು ಹೇಳುತ್ತಾರೆ, ಆದರೆ ಆ ವರ್ಷಗಳಲ್ಲಿ ಸುನ್ನಿ ಮುಸ್ಲಿಮರು ಏಕೆ ದ್ವೇಷವನ್ನು ಹರಡುತ್ತಾರೆ ಎಂದು ಅವರು ಸ್ವತಃ ಕೇಳಿಕೊಳ್ಳುತ್ತಿದ್ದರು. ಎರಡನೆಯದಾಗಿ, ಅವರ ನಡುವೆ ಏಕೆ ತುಂಬಾ ವ್ಯತ್ಯಾಸವಿದೆ ಮತ್ತು ಅವರು ಬಲಭಾಗದಲ್ಲಿದ್ದರೆ ಅವರು ಅನುಸರಿಸುವ ಒಬ್ಬ ಇಮಾಮ್ ಅನ್ನು ಏಕೆ ಹೊಂದಿಲ್ಲ? ಈ ಎಲ್ಲಾ ಸಂಘರ್ಷದ ಸಮಯದಲ್ಲಿ, ನಾನು MTA ಕುರಿತು ಖಲೀಫತುಲ್ ಮಸೀಹ್ ಅವರ ಖುತ್‌ಬಗಳೊಂದಿಗೆ ಸಂಪರ್ಕ ಹೊಂದಿದ್ದೇನೆ. ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ (ಅ) ಎಂದು ನನ್ನೊಳಗಿನ ಒಂದು ಧ್ವನಿ ಹೇಳಿತು, ಆದರೆ ಇನ್ನೊಂದು ಧ್ವನಿಯು ಎಲ್ಲಾ ಮುಸ್ಲಿಮರು ಅಹ್ಮದೀಯರನ್ನು ಏಕೆ ನಾಸ್ತಿಕರು ಎಂದು ಕರೆಯುತ್ತಾರೆ? ಅಂತಿಮವಾಗಿ ನಾನು ತಾಂಜಾನಿಯಾದಲ್ಲಿ ಅಹ್ಮದಿ ಸ್ನೇಹಿತ ಮತ್ತು ನಂತರ ಫ್ರಾನ್ಸ್‌ನಲ್ಲಿರುವ ಅಹ್ಮದಿ ಸ್ನೇಹಿತನೊಂದಿಗೆ ಸಂಪರ್ಕಕ್ಕೆ ಬಂದೆ ಮತ್ತು ಅಂತಿಮವಾಗಿ ನಾನು ಆ ಪ್ರದೇಶದ ಮುಬಲ್ಲಿಗ್ ಮುಝಮ್ಮಿಲ್ ಸಾಹಿಬ್ ಅವರ ಸಂಪರ್ಕಕ್ಕೆ ಬಂದೆ. ಈ ಗೆಳೆಯರೆಲ್ಲರೂ ಜಮಾಅತ್‌ನ ಪುಸ್ತಕಗಳನ್ನು ನನಗೆ ಓದಲು ಕೊಟ್ಟರು ಮತ್ತು ಅವುಗಳನ್ನು ಓದಿದ ನಂತರ ಮತ್ತು ಸಂಶೋಧನೆಯ ನಂತರ ನಾನು ಬೈಅತ್ ಮಾಡಿದ್ದೇನೆ ಮತ್ತು ನಂತರ ಅವರು ತಮ್ಮ ಪ್ರದೇಶದಲ್ಲಿ ಪ್ರಚಾರ ಮಾಡಿದರು ಮತ್ತು ಅವರ ತಬ್ಲೀಗ್‌ದಿಂದ ಜಮಾಅತ್ ಅಲ್ಲಿಯೂ ಬೆಳೆಯಿತು.

ಕೋಂಗೋ ಕನ್ಸಾಸಾದ ಅಮೀರ್ ಸಾಃಇಬ್ ಹೇಳುತ್ತಾರೆ ಅಲ್ಲಿ ಮಾದಮ್ವಾನಿ ಟೀಬೋ ಸಾಹಿಬ ಎಂಬ ಮಹಿಳೆ ಇದ್ದಾರೆ. ಅವರು ಯುವಿರಾ ಜಮಾಅತ್‌ಗೆ ಸೇರಿದವರು. ಅವರಿಗೆ ಎಂಬತ್ತೆರಡು ವರ್ಷ. ನಾನು ಮುಸ್ಲಿಂ ಆಗಿದ್ದೆ ಆದರೆ ನನ್ನ ಮಗ ಚರ್ಚ್‌ನಲ್ಲಿ ಪಾದ್ರಿಯಾಗಿದ್ದ ಕಾರಣ 42 ನೇ ವಯಸ್ಸಿನಲ್ಲಿ ನಾನು ಕ್ರಿಶ್ಚಿಯನ್ ಆಗಿದ್ದೇನೆ ಎಂದು ಅವರು ಹೇಳುತ್ತಾರೆ. ಒಂದು ದಿನ ನಾನು ಖಲೀಫತುಲ್ ಮಸೀಹ್ ಅವರ ಪ್ರವಚನದ ಫ್ರೆಂಚ್ ಅನುವಾದವನ್ನು ರೇಡಿಯೊದಲ್ಲಿ ಕೇಳಿದ ತಕ್ಷಣ ಅವರು ಮಿಷನ್ ಹೌಸ್‌ಗೆ ಕರೆ ಮಾಡಿ ಹೇಳಿದರು: ನಾನು ಪ್ರಸ್ತುತ ಕಾಲಘಟ್ಟದ ಇಮಾಮ್‌ರಿಗೆ ಬೈಅತ್ ಮಾಡಬೇಕೆಂದು ಮಿಷನ್ ಹೌಸ್‌ಗೆ ಬರಲು ಬಯಸುತ್ತೇನೆ ಮತ್ತು ನಾನು ಸತ್ತಾಗ ಅಹ್ಮದಿಯಾ ಜಮಾಅತ್ ನನ್ನ ಅಂತ್ಯಕ್ರಿಯೆಯನ್ನು ನಡೆಸಬೇಕೆಂದು ಮಗನಿಗೆ ಹೇಳಿದರು.

ಕ್ಯಾಮರೂನ್‌ನ ಮುಬಲ್ಲಿಗ್ ಇಂಚಾರ್ಜ್ ಸಹಿಬ್ ಹೇಳುತ್ತಾರೆ: ಅಲ್ಲಿ ಮಾರೌವಾದಿಂದ ಸ್ನೇಹಿತ ಉಮರ್ ಜುಬೈರ್ ಸಾಹಿಬ್ ಎಂಬವರು ಇದ್ದಾರೆ. ಜಲ್ಸಾ ಸಾಲಾನ (ವಾರ್ಷಿಕ ಸಮ್ಮೇಳನ) ಕ್ಯಾಮರೂನ್ 2022 ರಲ್ಲಿ ಸೇರಲು ಬಂದರು. ಅವರು ಸ್ವತಃ ಅಹ್ಮದಿಯಾದ ಬಗ್ಗೆ ವಿವರವನ್ನು ಮುಅಲ್ಲಿಮ್ ಸಾಹಿಬರಿಗೆ  ತಿಳಿಸಿದರು. ಎಂಟಿಎ ಆಫ್ರಿಕಾದ ಮೂಲಕ ಜಮಾಅತ್‌ನ ಪರಿಚಯವಾಯಿತು ಮತ್ತು ಖಲೀಫತುಲ್–ಮಸೀಹ್ ಅವರ ಶುಕ್ರವಾರದ ಧರ್ಮೋಪದೇಶವನ್ನು ನಾನು ಬಹಳ ಆಸಕ್ತಿಯಿಂದ ಕೇಳುತ್ತಿದ್ದೆ ಮತ್ತು ಪ್ರತಿ ಧರ್ಮೋಪದೇಶದೊಂದಿಗೆ ಜಮಾಅತ್‌ನೊಂದಿಗೆ ನಾನು ಬೆಳೆದು ನನ್ನ ಜ್ಞಾನವೂ ಹೆಚ್ಚಾಯಿತು ಎಂದು ಉಮರ್ ಸಾಹಿಬ್ ಹೇಳಿದರು. ನವೆಂಬರ್ 2021 ರ ಮೊದಲ ಶುಕ್ರವಾರದ ಧರ್ಮೋಪದೇಶದಲ್ಲಿ, ಖಲೀಫತುಲ್–ಮಸೀಹ್ ಅವರು ತೆಹ್ರೀಕ್–ಎ–ಜದೀದ್‌ನ ಘಟನೆಗಳನ್ನು ಮತ್ತು ತ್ಯಾಗಗಳನ್ನು ಪ್ರಸ್ತಾಪಿಸಿದ್ದಾರೆ, ನಂತರ ಈ ಜಮಾಅತ್ ಸರ್ವಶಕ್ತನಾದ ಅಲ್ಲಾಹನಿಂದ ಬಂದಿದೆ ಎಂದು ನನಗೆ ಸ್ಪಷ್ಟಪಡಿಸಿದರು, ಅಲ್ಲಿ ಜನರು ಇಸ್ಲಾಂ ಧರ್ಮಕ್ಕಾಗಿ ತುಂಬಾ ತ್ಯಾಗ ಮಾಡುತ್ತಿದ್ದಾರೆ. ಇದು ನನ್ನ ಹೃದಯಕ್ಕೆ ಸಂಪೂರ್ಣ ತೃಪ್ತಿ ನೀಡಿತು ಮತ್ತು ನಾನು ಬೈಅತ್ ಮಾಡಿದ ನಂತರ ಜಮಾಅತ್‌ಗೆ ಸೇರಿಕೊಂಡೆ ಮತ್ತು ನನಗೆ ತುಂಬಾ ತೃಪ್ತಿ ಮತ್ತು ಸಂತೋಷವಾಗಿದೆ.

ವಾಟರ್ಲೂ. ಕಳೆದ ವರ್ಷ ಎಂಟಿಎ ಮೂಲಕ ನನ್ನ ಧರ್ಮೋಪದೇಶವನ್ನು ಕೇಳಲು ಅಲ್ಲಿನ ಆಲ್ಫಾ ಸಾಹಿಬ್ ಅವರನ್ನು ಆಹ್ವಾನಿಸಲಾಯಿತು ಎಂದು ಸೆರಾ ಲಿಯೋನ್‌ನಲ್ಲಿರುವ ಮುರಬ್ಬಿ ಸಾಹೀಬ್ ಹೇಳುತ್ತಾರೆ. ಅಲ್ಫಾ ಸಾಹಿಬ್ ತನ್ನ ಕುಟುಂಬದೊಂದಿಗೆ ಧರ್ಮೋಪದೇಶವನ್ನು ಕೇಳಲು ಬಂದರು. ಧರ್ಮೋಪದೇಶವನ್ನು ಕೇಳಿದ ನಂತರ, ಅವರು ತುಂಬಾ ಪ್ರಭಾವಿತರಾದರು ಮತ್ತು ಎಂಟು ಜನರನ್ನು ಒಳಗೊಂಡ ಇಡೀ ಕುಟುಂಬವು ಬೈಅತ್ ಮಾಡುವ ಮೂಲಕ ಜಮಾಅತ್‌ಗೆ ಸೇರಿತು. ಅಲ್ಲಾಹನ ಅನುಗ್ರಹದಿಂದ ಅಹ್ಮದಿಯತ್ ಅನ್ನು ಪ್ರವೇಶಿಸಿದ ನಂತರ, ಅವರು ಬಹಳ ಪ್ರಾಮಾಣಿಕವಾಗಿ ಜಮಾಅತ್‌ನ ಸೇವೆಗಳಲ್ಲಿ ಭಾಗವಹಿಸುತ್ತಾರೆ ಮತ್ತು ಅಲ್ಲಿ ಮಸೀದಿಯನ್ನು ನವೀಕರಿಸಿದಾಗ ಅವರು ವಖಾರೆ ಅಮಲ್ ಮಾಡಿದರು ಮತ್ತು ಕಾರ್ಮಿಕರಂತೆ ಕೆಲಸ ಮಾಡಿದರು. ಅವರು ನಫ್ಲಿ ಉಪವಾಸಗಳನ್ನು ಸಹ ನಿರ್ವಹಿಸುತ್ತಾರೆ ಮತ್ತು ಜನರಿಗೆ ಇಫ್ತಾರಿಯ ವ್ಯವಸ್ಥೆಯೂ ಮಾಡುತ್ತಾರೆ.

ಬಾಂಗ್ಲಾದೇಶದ ಅಮೀರ್ ಸಾಹಿಬ್ ಬರೆಯುತ್ತಾರೆ ಜಮಾಅತ್‌ನ ತಬ್ಲೀಗ್ ಸೆಕ್ರೇಟರಿ ಸಾಹೀಬರ ತನ್ನದೇ ಆದ ಮುದ್ರಣಾಲಯವನ್ನು ಹೊಂದಿದ್ದು, ಅದರಲ್ಲಿ ಬಿಲಾಲ್ ಎಂಬ ಹುಡುಗ ಕೆಲಸ ಮಾಡುತ್ತಿದ್ದಾನೆ.

ಈ ಹುಡುಗನನ್ನು ಜಮಾಅತ್ ಅನ್ನು ಪರಿಚಯಿಸಿದಾಗ, ಅವನು ನಮ್ಮ ಮುಖ್ಯ ಮಸೀದಿಗೆ ಬರಲು ಪ್ರಾರಂಭಿಸಿದನು, ಅಲ್ಲಿ ಅವನಿಗೆ ನನ್ನ ಭಾಷಣಗಳನ್ನು ಕೇಳಲು ಅವಕಾಶವಿತ್ತು. ಸ್ವಲ್ಪ ಸಮಯದ ನಂತರ, ಅವರು ಬೈಅತ್ ಮಾಡಿದರು, ಆದರೆ ಅವರ ಪತ್ನಿ ಬೈಅತ್ ಮಾಡಲಿಲ್ಲ. ಮದುವೆಯಾಗಿ ಏಳು ವರ್ಷಗಳಾದರೂ ಮಕ್ಕಳಾಗಿರಲಿಲ್ಲ. ಅಲ್ಲಾಹನು ನಮಗೆ ಮಕ್ಕಳನ್ನು ನೀಡಲಿ ಎಂದು ಪ್ರಾರ್ಥಿಸಲು ಅವರು ಖಲೀಫತುಲ್ ಮಸೀಹ್‌ಗೆ ಬರೆಯುತ್ತಾರೆ ಎಂದು ಅವರು ತಮ್ಮ ಪತ್ನಿಗೆ ಹೇಳಿದರು. ಅವರು ತಮ್ಮ ಪತ್ನಿಯನ್ನು ನಾವು ಸಹ ಈ ರೀತಿ ದುಆಗಾಗಿ ವಿನಂತಿಸೋಣ ಎಂದು ಒಪ್ಪಿಸಿದಾಗ. ದುಆಗಾಗಿ ಅವರು ಪತ್ರವನ್ನು ಬರೆದರು. ಕೆಲವು ತಿಂಗಳುಗಳ ನಂತರ, ಅವರ ಪತ್ನಿಯು ಗರ್ಭಧರಿಸಿದಳು ಮತ್ತು ಖಲೀಫತುಲ್ ಮಾಸೀಹ್ ಅವರ ಪ್ರಾರ್ಥನೆಯ ಮೂಲಕ ಅಲ್ಲಾಹನು ತನಗೆ ಒಲವು ತೋರಿದ್ದಾನೆ ಎಂಬ ಕಲ್ಪನೆಯನ್ನು ಅವರ ಪತ್ನಿ ಹೊಂದಿದ್ದರು, ಹೀಗೆ ಅವರು ಬೈಅತ್ ಮಾಡಿ ಜಮಾಅತ್‌ನಲ್ಲಿ ಸೇರ್ಪಡೆಯಾದರು.

ಬೆಲ್ಜಿಯಮ್‌ನ ಅಮೀರ್ ಸಾಹಿಬ್ ಹೇಳುತ್ತಾರೆ: ಮೊರಾಕಶ್‌ನ ಸ್ನೇಹಿತ ಅಲ್ಲಿ ವಾಸಿಸುತ್ತಾರೆ. ಅವರು ಅಹ್ಮದೀಯತ್ ಬಗ್ಗೆ ಬಹಳ ಕಾಲ ಸಂಶೋಧನೆ ಮಾಡಿದ ನಂತರ, ಅವರು ಬೈಅತ್ ಮಾಡಿದರು. ಅವರು ಹೇಳುತ್ತಾರೆ ಬಾಲ್ಯದಿಂದಲೂ ನಾನು ಅನೇಕ ವಿದ್ವಾಂಸರ ಸಹವಾಸದಲ್ಲಿ ಸಮಯ ಕಳೆದಿದ್ದೇನೆ, ಆದರೆ ಖಲೀಫತುಲ್-ಮಸೀಹ್ ಅವರ ಖುತ್ಬಾಗಳು ಪವಿತ್ರ ಖುರ್‌ಆನ್‌ನ ವ್ಯಾಖ್ಯಾನ ಮಾತ್ರವಲ್ಲ, ಬದಲಿಗೆ ಒಬ್ಬ ವ್ಯಕ್ತಿಯನ್ನು ಅಲ್ಲಾಹನಿಗೆ ಹತ್ತಿರವಾಗಿಸುತ್ತದೆ ಮತ್ತು ಅವರ ಖುತ್‌ಬಗಳನ್ನು ಆಲಿಸಿದ ನಂತರ ನನಗೆ ನಮಾಝ್‌ಗಳಲ್ಲಿ ಸ್ವಾದವನ್ನು ಅನುಭವಿಸುತ್ತೇನೆ. ಇದು ವಿನೋದಮಯವಾಗಿರಲು ಪ್ರಾರಂಭಿಸಿದೆ.

ಸರ್ವಶಕ್ತನಾದ ಅಲ್ಲಾಹನು ನನಗೆ ನಿಜವಾದ ಕನಸುಗಳನ್ನು ಸಹ ತೋರಿಸಿದ್ದಾನೆ. ಅಹ್ಮದಿಯತ್ ನನ್ನ ಜೀವನವನ್ನು ಬದಲಾಯಿಸಿದೆ ಮತ್ತು ಅವರು ಅದನ್ನು ಉಲ್ಲೇಖಿಸಿದಾಗ ಅವರ ಕಣ್ಣುಗಳಿಂದ ಕಂಬನಿ ಸುರಿಯುತ್ತದೆ.

ಕೆನೆಮಾ, ಸೆರಾ ಲಿಯೋನ್‌ನ ಮುರಬ್ಬಿ ಸಾಹಿಬ್ ಹೇಳುತ್ತಾರೆ: ಒಂದು ಸ್ಥಳದಲ್ಲಿ ಐನೂರಕ್ಕೂ ಹೆಚ್ಚು ಅಹಮದಿಯೇತರ ಸ್ನೇಹಿತರು ಒಗ್ಗೂಡಿದ್ದರು. ಒಬ್ಬ ವ್ಯಕ್ತಿ ಅಲ್ಲಿ ನಿಂತು ಅಹ್ಮದಿಯರು ಇಸ್ಲಾಮಿನ ನಿಜವಾದ ಹಾದಿಯಲ್ಲಿದ್ದಾರೆ ಎಂದು ಹೇಳಿದರು. ನಾವು ಅವರನ್ನು ದ್ವೇಷಿಸುತ್ತೇವೆ ಏಕೆಂದರೆ ಅವರು ಯಾವಾಗಲೂ ಸತ್ಯವನ್ನು ಹೇಳುತ್ತಾರೆ. ಬಿಳಿಯಾಗಿದ್ದರೆ ಅದನ್ನು ಬಿಳಿ ಎಂದು ಕರೆಯುತ್ತಾರೆ, ಆದರೆ ಯಾವುದಾದರೂ ವಸ್ತು ಕಪ್ಪು ಇದ್ದಾಗ ನಾವು ಅದನ್ನು ಬಿಳಿ ಎಂದು ಕರೆಯುತ್ತೇವೆ, ಅದು ನಮ್ಮಲ್ಲಿ ಸತ್ಯ ಮತ್ತು ಏಕತೆ ಇಲ್ಲದಿರಲು ಕಾರಣವಾಗಿದೆ. ಅದೇ ಪ್ರದೇಶದ ಇಮಾಮ್ ಕೂಡ ಎದ್ದು ನಿಂತರು. ಅಹ್ಮದೀಯರ ಖಲೀಫರ ಧರ್ಮೋಪದೇಶಗಳನ್ನು ಕೇಳಿದರೆ ಇಸ್ಲಾಮಿನ ಸರಿಯಾದ ಬೋಧನೆಗಳು ನಿಮಗೆ ತಿಳಿಯುತ್ತವೆ ಎಂದರು.

ನಾನು ಅಹ್ಮದೀಯತ್ ಅನ್ನು ಸ್ವೀಕರಿಸಿಲ್ಲ, ಆದರೆ ಪ್ರತಿ ಶುಕ್ರವಾರ ನಾನು ಅವರ ಖಲೀಫರ ಧರ್ಮೋಪದೇಶವನ್ನು ಕೇಳುತ್ತೇನೆ. ನೀವು ಕೇಳಿದರೆ, ನೀವು ಇಸ್ಲಾಮಿಕ್ ಬೋಧನೆಗಳನ್ನು ತಿಳಿಯುವಿರಿ ಮತ್ತು ನಿಮ್ಮ ಮನಸ್ಸು ಧರ್ಮೋಪದೇಶವನ್ನು ಕೊನೆಗೊಳಿಸಲು ಬಯಸುವುದಿಲ್ಲ.

ಮತ್ತೆ ಮಿಶಾಕ ಪ್ರದೇಶದ ಮುಬಲ್ಲಿಗ್ ಸಾಹಿಬರು ಹೇಳುತ್ತಾರೆ: ನಾನು ಯಾವುದೋ ಕೆಲಸಕ್ಕಾಗಿ ಬ್ಯಾಂಕಿಗೆ ಹೋಗಿದ್ದೆ. ಕೆಲಸ ಮುಗಿಸಿ ಹಸಿವಾದಾಗ ಹೋಟೆಲ್‌ಗೆ ಊಟ ಮಾಡಲು ಹೋದೆ. ಹೋಟೆಲ್‌ನಲ್ಲಿ ಹಾಕಿದ್ದ ಟಿವಿಯಲ್ಲಿ ಎಂಟಿಎ ಪ್ರಸಾರವಾಗುವುದನ್ನು ನಾನು ನೋಡಿದೆ ಮತ್ತು ಆ ಜನರು, ನನ್ನ ರೆಕಾರ್ಸ್ ಆದ ಧರ್ಮೋಪದೇಶವನ್ನು ಅದರಲ್ಲಿ ವೀಕ್ಷಿಸುತ್ತಿದ್ದರು. ಅದರ ಬಗ್ಗೆ ನಾನು ಅಲ್ಲಿನ ಮ್ಯಾನೇಜ್‌ಮೆಂಟ್‌ಗೆ ಕೇಳಿದಾಗ ಅವರು ಈ ಚಾನಲ್ ಅನ್ನು ನಾವು ಆಗಾಗ್ಗೆ ನೋಡುತ್ತೇವೆ ಮತ್ತು ಈ ಚಾನಲ್‌ನಲ್ಲಿ ಬಹಳ ಉತ್ತಮವಾದ ಕಾರ್ಯಕ್ರಮಗಳು ಪ್ರಸಾರವಾಗುತ್ತವೆ ಇದು ನಮಗೆ ಬಹಳ ಪ್ರಯೋಜನಕಾರಿಯಾಗಿದೆ ಮತ್ತು ನಾವು ಈ ಚಾನಲ್ ಅನ್ನು ವೀಕ್ಷಿಸಲು ಇಷ್ಟಪಡುತ್ತೇವೆ ಎಂದು ಹೇಳಿದರು. ಆದ್ದರಿಂದ, ಹೀಗೆ ಸರ್ವಶಕ್ತನಾದ ಅಲ್ಲಾಹನು ಜಮಾಅತ್‌ನ ತಬ್ಲೀಗ್‌ಗೆ ಸಿದ್ಧತೆಗಳನ್ನು ಮಾಡುತ್ತಿದ್ದಾನೆ ಮತ್ತು ಇತರರಿಗೆ ಖಿಲಾಫತ್‌ನ ಮಹತ್ವವನ್ನು ಸ್ಪಷ್ಟಪಡಿಸುತ್ತಿದ್ದಾನೆ.

ಮಾಲಿಯ ಮುಬಲ್ಲಿಗ್‌ರಾದ ಉಮರ್ ಮುಆಝ್ ಸಾಹಿಬ್ ಬರೆಯುತ್ತಾರೆ: ಇಲ್ಲಿನ ಜಿಜಿನಿ ಪ್ರದೇಶದ ಸದಸ್ಯ ಜಾಲಾ ಸಾಹಿಬ್ ಎಂಬವರಿದ್ದಾರೆ ಅವರು ಹೇಳುತ್ತಾರೆ: ಒಂದು ಎಕ್ಸಿಡೆಂಟ್‌ನ ಕಾರಣದಿಂದ ಅವರ ಕಾಲಿನ ಮೂಳೆಗಳು ಮುರಿದು ಹೋಗಿದ್ದವು. ಅವರು ಅವರಿಗೆ ಸಾಕಷ್ಟು ಚಿಕಿತ್ಸೆ ನೀಡಿದರು. ದೇಸೀಯ ಚಿಕಿತ್ಸೆಯ ಜೊತೆಗೆ, ವೈದ್ಯರು ಸಹ ಪರಿಶೀಲಿಸಿದರು. ಹಲವಾರು ತಿಂಗಳುಗಳ ನಂತರವೂ, ಮೂಳೆಗಳು ಜೋಡಣೆಯಾಗಲಿಲ್ಲ, ಆದ್ದರಿಂದ ಅವರು ಮತ್ತು ಅವರ ಸಂಬಂಧಿಕರು ತಮ್ಮ ಮೂಳೆಗಳು ಇನ್ನು ಮುಂದೆ ಜೋಡಣೆಗೊಳ್ಳುವುದಿಲ್ಲ ಎಂದು ತುಂಬಾ ನಿರಾಶೆಗೊಂಡರು. ಒಂದು ದಿನ ಅವರು ತಮ್ಮ ಕನಸ್ಸಿನಲ್ಲಿ ಖಲೀಫತುಲ್-ಮಸೀಹ್ ಅವರಿಗಾಗಿ ಪ್ರಾರ್ಥಿಸಿದರು ಎಂದು ನೋಡಿದರು ಮತ್ತು ನಾನು ಕನಸಿನಲ್ಲಿ ಅವರ ಪ್ರಾರ್ಥನೆಯ ಜೊತೆಗೆ ಆಮೀನ್ ಎಂದು ಹೇಳುತ್ತಿದ್ದೆ ಎಂದು ಅವರು ಹೇಳುತ್ತಾರೆ. ಅದರ ನಂತರ, ನನಗೆ ಪ್ರಜ್ಞೆ ಬಂದಾಗ, ನಾನು ಆಮೀನ್ ಎಂದು ನನ್ನ ಕೈಗಳನ್ನು ನನ್ನ ಕಾಲುಗಳ ಮೇಲೆ ದಾಟಿದೆ. ಆ ನಂತರ ಸರ್ವಶಕ್ತನಾದ ಅಲ್ಲಾಹನು ನನ್ನನ್ನು ಅನುಗ್ರಹಿಸಿದನೆಂದು ಅವರು ಹೇಳುತ್ತಾರೆ ಮತ್ತು ಮೂಳೆಗಳು ಸಂಪರ್ಕಗೊಳ್ಳುತ್ತಿಲ್ಲ ಎಂಬ ಹತಾಶೆ ನಿಧಾನವಾಗಿ ಹಾದುಹೋಯಿತು ಮತ್ತು ನನ್ನ ಮೂಳೆಗಳು ಸಂಪರ್ಕಗೊಳ್ಳಲು ಪ್ರಾರಂಭಿಸಿತು ಮತ್ತು ಈಗ ಅಲ್ಲಾಹನ ಅನುಗ್ರಹದಿಂದ ನಾನು ಸಂಪೂರ್ಣವಾಗಿ ಆರೋಗ್ಯವಾಗಿದ್ದೇನೆ ಹೀಗೆ ಈ ರೀತಿಯಲ್ಲೂ ಅಲ್ಲಾಹನು ಖಿಲಾಫತ್ ಜೊತೆಗಿನ ಸಂಬಂಧವನ್ನು ಬಲಪಡಿಸುವ ಮಾರ್ಗವನ್ನು ಸೃಷ್ಟಿಸುತ್ತಾನೆ.

ಅನ್ಯರ ಮೇಲೆ ಏನು ಪರಿಣಾಮ ಬೀರುತ್ತದೆ? ಕಾಂಗೋಕನ್ಶಾಸದ ಅಮೀರ್ ಸಾಹಿಬ್ ಬರೆಯುತ್ತಾರೆ: ಕಾಂಗೋದಲ್ಲಿ ಜಮಾಅತಿನ ರೇಡಿಯೋ ಸ್ಟೇಶನ್ ಅಲ್ಲದೇ 23 ವಿವಿಧ ರೇಡಿಯೋ ಸ್ಟೇಶನ್‌ಗಳಲ್ಲಿ ತರ್‌ಬಿಯತ್, ತಬ್ಲೀಗ್ ಕಾರ್ಯಕ್ರಮಗಳು ಮತ್ತು ಜುಮಾ ಖುತ್ಬಗಳು ಪ್ರಸಾರ ಮಾಡಲಾಗುತ್ತವೆ. ಒಬ್ಬ ಪ್ರಾದೇಶಿಕ ಕ್ರೈಸ್ತ ಡಾಕ್ಟರ್ ಹೇಳುತ್ತಾರೆ: ನಾನು ಖುತ್ಬಗಳನ್ನು ನಿಯತವಾಗಿ ಆಲಿಸುತ್ತೇನೆ. ಹೆಚ್ಚಿನ ಜನರು ಪ್ರಯೋಜನ ಪಡೆಯುವಂತಾಗಲು ಪ್ರಾದೇಶಿಕ ಭಾಷೆಯಲ್ಲಿ ಇದನ್ನು ಅನುವಾದಿಸಿರಿ ಎಂದು ನಾನು ವಿನಂತಿಸುತ್ತೇನೆ. ಅಲ್ಲಾಹನು ಈ ರೀತಿಯಾಗಿ ಇಸ್ಲಾಂ ಮತ್ತು ಅಹ್ಮದಿಯ್ಯತ್ತಿನ ಸಂದೇಶವನ್ನು ತಲುಪಿಸಲಿಕ್ಕಾಗಿ ಏರ್ಪಾಡು ಮಾಡುತ್ತಿದ್ದಾನೆ.

ಹೀಗೆ ಸರ್ವಶಕ್ತನಾದ ಅಲ್ಲಾಹನು ಈ ರೀತಿ ಇಸ್ಲಾಮ್ ಅಹ್ಮದೀಯತ್‌ನ ಸಂದೇಶವನ್ನು ತಿಳಿಸಲು ಸಾಧನಗಳನ್ನು ರಚಿಸುತ್ತಿದ್ದಾನೆ. ಒಂದು ಸಮಯದಲ್ಲಿ ಅವರ ಹೃದಯಗಳು ಕೂಡ ತೆರೆಯಲ್ಪಡುವುವು ಮತ್ತು ಅವರು ಅಹ್ಮದಿಯ್ಯತ್ತನ್ನು ಅರಿಯುವಂತಾಗುವರು ಹಾಗೂ ಖಿಲಾಫತಿನ ವರದಾನಗಳು ಮುಂದುವರೆಯುವುವು.

ಅಹ್ಮದಿಯಾ ಖಿಲಾಫತಿನ ಮೇಲೆ ಅಲ್ಲಾಹನ ಸಹಾಯಗಳಿಗೆ ಮತ್ತು ಹಝ್ರತ್ ಪೈಗಂಬರ್(ಸ)ರ ದಾಸ್ಯದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಆಗಮಿಸಿ ಲೋಕವನ್ನು ಒಂದು ಸಮುದಾಯವನ್ನಾಗಿ ಮಾಡಿದ್ದನ್ನು ಈ ಘಟನೆಗಳು ಸತ್ಯಪಡಿಸುತ್ತವೆ. ಪ್ರತಿಕೂಲ ಅವಸ್ಥೆಗಳು ಇದ್ದೂ ಕೇವಲ ಅಹ್ಮದಿಯಾ ಖಿಲಾಫತ್ ಲೋಕದಲ್ಲಿ ಇಸ್ಲಾಮಿನ ಪ್ರಗತಿಯ ಮತ್ತು ತಬ್ಲೀಗಿನ ಕೆಲಸವನ್ನು ಮಾಡುತ್ತದೆ. ಇದು ಅಲ್ಲಾಹನ ಕೃತಿರೂಪದ ಸಾಕ್ಷ್ಯಕ್ಕಿರುವ ಪುರಾವೆಯಾಗಿದೆ.

ಅಲ್ಲಾಹನ ವಾಗ್ದಾನಗಳು ಮತ್ತು ಹಝ್ರತ್ ಪೈಗಂಬರ್(ಸ)ರ ಭವಿಷ್ಯವಾಣಿಯ ಪ್ರಕಾರ **ಖಿಲಾಫತ್ ಅಲಾ ಮಿನ್‌ಹಾಜುನ್ನುಬುವ್ವತ್** ಖಿಯಾಮತ್ ತನಕ ಜಾರಿಯಲ್ಲಿರುವುದು. ಅದು ಸದಾ ನೆಲೆನಿಲ್ಲುವುದು. ಯಾವನೇ ಶತ್ರುವಿಗೆ ಅದಕ್ಕೆ ಕಿಂಚಿತ್ತೂ ಹಾನಿಯನ್ನು ಉಂಟುಮಾಡಲು ಸಾಧ್ಯವಲ್ಲ. ಆದ್ದರಿಂದ ತಮ್ಮ ವಿಶ್ವಾಸಗಳಲ್ಲಿ ಹೊಳಪು ಉಂಟುಮಾಡಿರಿ, ತಮ್ಮನ್ನು ಸ್ವತಃ ಖಿಲಾಫತಿನೊಂದಿಗೆ ಜೋಡಿಸಿಡಿರಿ ಮತ್ತು ಅದಕ್ಕಾಗಿ ಯಾವುದೇ ತ್ಯಾಗವನ್ನು ಮಾಡಲು ಹಿಂಜರಿಯಬೇಡಿರಿ. ಅಲ್ಲಾಹನು ಅದರ ಸೌಭಾಗ್ಯವನ್ನು ನೀಡಲಿ. ಆಮೀನ್.

***128 ನೇ ಜಲ್ಸಾ ಸಾಲಾನ ಖಾದಿಯಾನ್ 29, 30, 31 ಡಿಸೆಂಬರ್ 2023ರಂದು ಆಯೋಜಿಸಲಾಗುವುದು***

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 128ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 29, 30 ಮತ್ತು 31ನೇ ಡಿಸೆಂಬರ್ 2023 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

(ಪುಟ ಸಂಖ್ಯೆ 01ರ ಉಳಿದ ಭಾಗ)

ಬೋಧನೆಗಳನ್ನು ಸಾರಾಂಶವಾಗಿ ಹೇಳುತ್ತಾ ತಿಳಿಸುವುದೇನೆಂದರೆ ಮಾರ್ಗದರ್ಶನದ ದಿನಗಳಲ್ಲಿ ಈ ನಿಯಮಗಳನ್ನು ಪಾಲಿಸಿ ಮತ್ತು ಅವುಗಳ ಬಗ್ಗೆ ಗಮನಹರಿಸಿದಾಗ ಮಾತ್ರ ನೀವು ಅವನತಿಯನ್ನು ತಪ್ಪಿಸಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಪ್ರಗತಿಯು ಉಳಿಯುವುದಿಲ್ಲ.

ಏಕದೇವೋಪಾಸನೆಯನ್ನು ಸ್ಥಾಪಿಸಲು ಮತ್ತು ಬಹುದೇವತಾವಾದವನ್ನು ತಿರಸ್ಕರಿಸಲು ಪವಿತ್ರ ಖುರ್‌ಆನ್‌ನ ಮುಖಾಂತರ ಬಹಳ ಮುಖ್ಯವಾಗಿ ಮೊದಲು ಆಜ್ಞೆಯನ್ನು ನೀಡಿದನು. ಜಗತ್ತಿನಲ್ಲಿ ಸರ್ಕಾರಗಳಿರುವಾಗ, ಅದೇ ಸಮಯದಲ್ಲಿ, ಬಹುದೇವತಾವಾದವೂ ಉದ್ಭವಿಸುತ್ತದೆ. ಆದ್ದರಿಂದ, ಅಲ್ಲಾಹನು ಅಭಿವೃದ್ಧಿಯ ಭವಿಷ್ಯವಾಣಿ ನುಡಿದಿರುವಾಗ ಅದೇ ಸ್ಥಳದಲ್ಲಿ ಭವಿಷ್ಯದ ಅಪಾಯಗಳನ್ನು ತಪ್ಪಿಸಲು ಆದೇಶಿಸಿದನು ಮತ್ತು ಅವರಿಗೆ ಎಚ್ಚರಿಕೆ ನೀಡಿದನು. ತೌಹೀದ್ (ಏಕದೇವೋಪಾಸ) ಗೆ ಆದ್ಯತೆ ನೀಡಿರುವ ಕಾರಣವೇನೆಂದರೆ ಯಾವುದೇ ಪಾಪವೂ ಶಿರ್ಕ್ (ಬಹುದೇವತಾವಾದ) ಇಲ್ಲದೆ ಹುಟ್ಟುವುದಿಲ್ಲ.

ನನ್ನ ಪ್ರಕಾರ, ಎಲ್ಲಾ ಪಾಪಗಳು ವಾಸ್ತವವಾಗಿ ಶಿರ್ಕ್‌ನ ಶಾಖೆಗಳಾಗಿವೆ. ತಪ್ಪಿತಸ್ಥ ವ್ಯಕ್ತಿಯು ಸರ್ವಶಕ್ತನಾದ ಅಲ್ಲಾಹನಲ್ಲಿ ಸಂಪೂರ್ಣ ನಂಬಿಕೆ ಮತ್ತು ವಿಶ್ವಾಸವನ್ನು ಹೊಂದಿರದ ಕಾರಣ ಪಾಪದಿಂದ ಬಳಲುತ್ತಾನೆ. ಏಕದೇವೋಪಾಸನೆಯ ಸಮಸ್ಯೆಯು ಒಳ್ಳೆಯತನದ ಬೀಜವಾಗಿದೆ. ಎಲ್ಲಾ ಧರ್ಮಗಳು ಮತ್ತು ಎಲ್ಲಾ ನೈತಿಕತೆಗಳು ಈ ಕೇಂದ್ರದ ಸುತ್ತ ಸುತ್ತುತ್ತವೆ. ಏಕದೇವೋಪಾಸನೆಯ ನಂಬಿಕೆಯನ್ನು ಅಳವಡಿಸಿಕೊಳ್ಳದಿದ್ದರೆ, ಪ್ರಕೃತಿಯ ನಿಯಮ ಮತ್ತು ಷರಿಯಾ ಕಾನೂನು ಎರಡರ ಅಡಿಪಾಯ ಅಲುಗಾಡುತ್ತದೆ. ಷರಿಯಾ ಕಾನೂನಿನ ನಡುವಿನ ಸಂಬಂಧವು ಸ್ಪಷ್ಟವಾಗಿದೆ. ಆದರೆ ನೈಸರ್ಗಿಕ ಕಾನೂನಿನ ಎಲ್ಲಾ ಬೆಳವಣಿಗೆಗಳು ಮತ್ತು ವಿಜ್ಞಾನದ ಎಲ್ಲಾ ಅಡಿಪಾಯಗಳು ಸಹ ಏಕದೇವೋಪಾಸನೆಯನ್ನು ಆಧರಿಸಿವೆ. ಏಕೆಂದರೆ ವಿಭಿನ್ನ ದೇವರುಗಳನ್ನು ನಂಬಿದರೆ, ಅವರು ವಿಭಿನ್ನ ಕಾನೂನುಗಳನ್ನು ಹೊಂದಿರಬೇಕು ಅಥವಾ ಅದರಲ್ಲಿ ಕನಿಷ್ಠ ವಿಭಿನ್ನ ಬದಲಾವಣೆಗಳನ್ನು ಹೊಂದಿರಬೇಕು ಮತ್ತು ಈ ಸಂದರ್ಭದಲ್ಲಿ, ಅಂದರೆ ಬದಲಾಗದ ಕಾನೂನು ಮತ್ತು ಸ್ಥಾಪಿತವಾದ ಪ್ರಕೃತಿಯ ನಿಯಮವು ಜಗತ್ತಿನಲ್ಲಿ ಮುಂದುವರಿಯದಿದ್ದರೆ, ಎಲ್ಲಾ ವೈಜ್ಞಾನಿಕ ಬೆಳವಣಿಗೆಗಳು ನಿಲ್ಲುತ್ತವೆ. ವಿಜ್ಞಾನದ ಪ್ರಗತಿ ಮತ್ತು ಆವಿಷ್ಕಾರಗಳ ವಿಸ್ತರಣೆಯು ಜಗತ್ತಿನಲ್ಲಿ ಕ್ರಮಬದ್ಧವಾದ ಮತ್ತು ಬದಲಾಗದ ಕಾನೂನಿನ ಮುಂದುವರಿಕೆಯನ್ನು ಆಧರಿಸಿರುವುದರಿಂದ ಅದು ಮುಚ್ಚಲ್ಪಡುತ್ತದೆ. ಜಗತ್ತಿನಲ್ಲಿ ಯಾವುದೇ ವ್ಯವಸ್ಥೆ ಇಲ್ಲ ಅಥವಾ ವ್ಯವಸ್ಥೆಯು ಬದಲಾಗುತ್ತಲೇ ಇರುತ್ತದೆ ಎಂಬ ಕಲ್ಪನೆಯನ್ನು ವ್ಯಕ್ತಿಯು ಹೊಂದಿದ್ದರೆ, ಅವನು ಪ್ರಕೃತಿಯ ನಿಯಮಗಳ ಸೂಕ್ಷ್ಮತೆಗಳನ್ನು ಕಂಡುಹಿಡಿಯಲು ಎಂದಿಗೂ ಗಮನ ಹರಿಸುವುದಿಲ್ಲ. **(ತಫ್ಸೀರ್ ಕಬೀರ್, ಸಂಪುಟ-4, ಪುಟ-320, ಪ್ರಕಟಿತ ಖಾದಿಯಾನ್ 2010)**

(ಪುಟ ಸಂಖ್ಯೆ 02ರ ಉಳಿದ ಭಾಗ)

ಎಂಬ ನೆನಪು ಮೂಡಿ ಬರುತ್ತದೆ. ಆದ್ದರಿಂದ ಈ ವಚನ ನೆನಪಿಸಲು ಈ ಪದಗಳು ಮನೆಯ ಬಾಗಿಲ ಮೇಲೆ ಬರೆಯುವುದು ಮತ್ತಮವಾಗಿದೆ.

ಇದರ ಜೊತೆಯಲ್ಲೇ ನಾನು ಹಝ್ರತ್ ಮಸೀಹ್ ಮೌಊದ್(ಅ) ರವರ ಅದ್ದಾರ್ ಮತ್ತು ಅದರ ವಿಭಿನ್ನ ಭಾಗಗಳ ಹೆಸರುಗಳ ಬಗ್ಗೆ ಒಂದಿಷ್ಟು ಉಲ್ಲೇಖ ಮಾಡ ಬಯಸುತ್ತೇನೆ. ಅದೇನೆಂದರೆ ಅರಬಿಯಲ್ಲಿ ಎಲ್ಲ ನಗರಗಳಿಗೂ ಮದೀನ ಎನ್ನುತ್ತಾರೆ. ಆದರೆ ಹಜ್‌ರತ್ ಪೈಗಂಬರ್ (ಸ) ರವರು ಒಂದು ವಿಶೇಷ ನಗರಕ್ಕೆ ಆಗಮಿಸಿದ ಕಾರಣ "ಅಲ್ ಮದೀನ ಎಂದೇ ಅವರ ಹೆಸರಾಯಿತು ಅದೇ ರೀತಿಯಲ್ಲಿ ಅರೆಬಿಯಲ್ಲಿ ಸಣ್ಣದಾದ ಒಂದು ಮನೆಯನ್ನು ಸಹ ಬೈತ್ ಎನ್ನುತ್ತಾರೆ. ಆದರೆ ಲೋಕ ಪ್ರಾರಂಭ ಆದಾಗಿನಿಂದ ಅಲ್ಲಾಹನು ಮಕ್ಕದಲ್ಲಿ ಒಂದು ಮನೆಯನ್ನು ನಿರ್ಮಿಸಿ ಅದರ ಹೆಸರು **"ಅಲ್‌ಬೈತ್"** ಎಂದು ಹೆಸರಿಸಿ ಹೇಳಿದನು. "ಏ ಇಝು ಯರ್‌ಫು ಇಬ್ರಾಹೀಮಲ್ ಖವಾಯಿದ ಮಿನಲ್ ಬೈತಿ." ಅದೇ ರೀತಿ ಅರೆಬಿಯಲ್ಲಿ ಎಲ್ ದೊಡ್ಡ ಮನೆಗಳನ್ನು **"ದಾರ್"** ಎನ್ನುತ್ತಾರೆ. ಆದರೆ ಅಲ್ಲಾಹನು **"ಇನ್ನಿ ಉಹಾಫಿಝು ಕುಲ್ಲ ಮನ್‌ಫಿದ್ದಾರ್"** ಎಂದು ಹೇಳಿ ಹಝುರತ್ ಮಸೀಹ್ ಮೌಊದ್(ಅ) ಅವರ ಮನೆಯ ಹೆಸರನ್ನು **"ಅದ್ದಾರ್"** ಎಂದು ಕರೆದನು ಇಲ್ಲಿ ವ್ಯಕ್ತಿಯೊಬ್ಬನು ಕೇಳಿದರೆ, ಹುಝೂರ್ ರಸೂಲುಲ್ಲಾಹ್ (ಸ) ಅವರ ಮನೆಯ ಹೆಸರು ಏನಿತ್ತು? ಇಲ್ಲಿ ನೆನಪಿಡಬೇಕಾದುದೇನೆಂದರೆ ಹುಝೂರ್(ಸ) ರ ಎಲ್ಲ ಮನೆಗಳು ಖಲೀಫರ ಕಾಲಗಳಲ್ಲಿ ಮಸೀದಿಯ ಭಾಗವಾಗಿ ಬಿಟ್ಟಿವೆ. ಇದೀಗ ರಸೂಲುಲ್ಲಾಹ್ (ಸ) ರವರ ಮನೆ ಎಂದು ಹೇಳುವಂತಹದ್ದಲ್ಲ. ಆದ್ದರಿಂದ ಯಾವ ಅಹ್ಮದಿಗೂ ತನ್ನ ಮನೆಯ ಹೆಸರು ಕೇವಲ **"ಅದ್ದಾರ್"** ಎಂದು ಹೆಸರಿಸಲು ಅರಮನೆ ಇಲ್ಲ. ಇದು ಲೋಕದಲ್ಲಿ ಕೇವಲ ಒಂದು ಮನೆಯ ಹೆಸರಾಗಿದೆ. ಉದಾಹರಣೆಗೆ ಯಾವ ನಗರದ ಹೆಸರು ಈಗ ಅಲ್ ಮದೀನಾ ಎಂದು ಹೆಸರಿಸಲು ಅರಮನೆ ಇಲ್ಲ. ಅದು ನಿಷಿದ್ಧವಾಗಿದೆ. ಇದು ಕೇವಲ ನಬಿವರ್ಯರ ನಗದ ಹೆಸರಾಗಿದೆ. ಹಾಗೆಯೇ ಯಾವ ಮನೆಗೂ ಅಲಬೈತ್ ಎಂದು ಹೆಸರಿಸುವ ಹಾಗಿಲ್ಲ. ಈ ವೈಶಿಷ್ಟ್ಯತೆ ಕೇವಲ **"ಇನ್ನ ಅವ್ವಲ ಬೈತಿ ವುಝಿಅ ಲಿನ್ನಾಸಿ ಅಲ್ಲಝಿ ಬಿಬಕ್ಕತ್"** ಪಡೆದಿದೆ. ಅದೇ ರೀತಿ ಲೋಕದ ಯಾವ ಗ್ರಂಥವು 'ಅಲ್-ಕಿತಾಬ್' ಎಂದು ಕರೆಯಲ್ಪಡುವ ಹಾಗಿಲ್ಲ. ಏಕೆಂದರೆ ಆ ವೈಶಿಷ್ಟ್ಯತೆ ಅಲಾಹನ ಈ ಅಂತಿಮ ಹಾಗೂ ಪರಿಪೂರ್ಣ ಗ್ರಂಥಕ್ಕೆ ಸಲ್ಲುತ್ತದೆ. ಆದ್ದರಿಮದ ಹಜ್‌ರತ್ ಮಸೀಹ್ ಮೌಊದ್ (ಅ) ಅವರ ಮನೆಯ ಹೆಸರು **"ಅದ್ದಾರ್"** ಆಗಿದೆ. ಬೇರೆ ಎಲ್ಲ ಅಹ್ಮದಿಗಳ ಮನೆಗಳು 'ಅದ್ದಾರ್' ಅಲ್ಲ ಹೌದು ದಾರುಲ್ ಹಮ್ದು, ದಾರುಶ್ ಶುಕುರ್, ದಾರುಲ್ ಫಝುಲ್, ದಾರುಲ್ ಅನ್ವಾರ್, ಇತ್ಯಾದಿ ಇತ್ಯಾದಿ ಹೆಚ್ಚಳದೊಂದಿಗೆ ಹೆಸರಿಸಬಹುದಾಗಿದೆ.

ಇದಾದ ನಂತರ ನಾನು ತಿಳಿಯಬಯಸುವುದೇನೆಂದರೆ ಹಝುರತ್ ಮಸೀಹ್ ಮೌಊದ್ (ಅ) ರು ಅದ್ದಾರ್‌ನ ವಿಭಿನ್ನ ಭಾಗಗಳ ವಭಿನ್ನ ಹೆಸರುಗಳನ್ನು ಏಕೆ ಇಟ್ಟರು ಇದರ ಕಾರಣವೇನೆಂದರೆ ಅಲ್ಲಹನು **"ವಸ್ಸಿಅ್ ಮಕಾನಕ"** ಆದೇಶ ನೀಡಿದ ನಂತರ ಹಝ್‌ರತ್ ಮಸೀಹ್ ಮೌಊದ್ (ಅ) ತಮ್ಮ ಮನೆಯಲ್ಲಿ ತಮ್ಮ ಅನುಯಾಯಿಗಳಿಗೆ ವಾಸಿಸಲು ಹಲವು ಕೊಠಡಿಗಳನ್ನು ನಿರ್ಮಿಸಿದರು. ಹೀಗೆ ಅನುಯಾಯಿಗಳಿಗೆ ಕೊಠಡಿಗಳ ಗುರುತು ಕಷ್ಟಕರವಾಯಿತು. ಆದ್ದರಿಂದ ಹುಝೂರ್ (ಅ) ಒಂದು ಕೊಠಡಿಯ ಹೆಸರು **"ಬೈತುಝ್-ಝಿಕ್ರ್"** ಎಂದು ಹೆಸರಿಸಿದರೆ ಇನ್ನೊಂದು ಕೊಠಡಿಯ ಹೆಸರು **"ಬೈತುಲ್ ಫಿಕ್ರ್,** ಎಂದು ಹೆಸರಿಸಿದರೆ ಇನ್ನೊಂದು ಕೊಠಡಿಯ ಹೆಸರು **"ಬೈತುಲ್ ಫಿಕ್ರ್" ಬೈತುದ್ದುಆ"** ದಾರುಲ್ ಬರಕಾತ್, ಬೈತುನ್ನೂರ್ ಎಂದು ಹೆಸರಿಸಿದರು. ಇದರಿಂದ ಮನೆಯಲ್ಲಿರುವ ವಿವಿಧ ಕುಟುಂಬಗಳನ್ನು ಗುರುತಿಸಲು ಸುಲಭವಾಯಿತು. ಈ ಹೆಸರುಗಳಲ್ಲದೇ ಹುಝೂರ್ ಒಂದು ಚೌಕಟ್ಟು ಮನೆಯ ಮಾಡಿಗೆಯ ಮೇಲೆ ನಿರ್ಮಿಸಿದರು. ಅಲ್ಲಿ ಮನೆಯ ಮಹಿಳೆಯರು ಸೆಖೆಗಾಲದಲಿ ಮಗ್ರಿಬ್, ಇಶಾ ಮತ್ತು ಫಜರ್ ನಮಾಝ್ ನಿರ್ವಹಿಸುತ್ತಿದ್ದರು. ಅದರ ಮೇಲೆ ಮಸ್ಜಿದುಲ್ ಬೈತ್ ಎಂದು ಹೆಸರು ಬರೆದರು ಎಂದರೆ ಮನೆಯ ಮಸೀದಿ ಎಂದು ಹೆಸರು ಬರೆದರು ಅದಲ್ಲೇ ಅರೆಬಿ ಹೆಸರಿನ ಹುಝೂರ್(ಅ) ರ ಮನೆಯ ಕೆಲವು ಭಾಗಗಳು-ಗೋಲ್‌ಕಮ್ರಾ, ಗುಲಾಬಿ ಕಮ್ರಾ, ಸರ್ದ್ ಖಾನ, ದೋಂಗ ದಾಲಾನ್, ಹೆಸರುಗಳು ಅದರ ಆಕಾರ, ಬಣ್ಣಗಳ ನಿಮಿತ್ತ ಹೆಸರಿಸಲಾಗಿತ್ತು. ಹುಝೂರ್ ಸ್ವಯಂ ಇವುಗಳ ಹೆಸರಿಟ್ಟಿದ್ದರು ಎಂಬುದು ನನ್ನ ಅಭಿಪ್ರಾಯವಲ್ಲ. ಬದಲು ಖುದ್ದಾಮ್ (ಸ್ವಯಂ ಸೇವಕರು) ಮತ್ತು ಮನೆಯಲ್ಲಿ ವಾಸಿಸುವವರು ಹೀಗೆ ಹೇಳುತ್ತಿದ್ದರು. ಅರೆಬಿ ಹೆಸರುಗಳಲ್ಲಿ ಬೈತುನ್ನೂರ್ ಹೆಸರು ಮಾತ್ರ ಹುಝೂರ್(ಅ) ಹೆಸರಿಸಿದ್ದರು. ಆ ಕೋಣೆಯು ಬಾಹ್ಯರೂಪದಲ್ಲಿ ಕತ್ತಲೆಯಿಂದ ಕೂಡಿತ್ತಾದರೂ ಅದರ ಹೆಸರು ಬೈತುನ್ನೂರ್ ಸರಿಯಾದುದು ಮತ್ತು ಸಮಂಜಸಕರವಾಗಿತ್ತು. ಏಕೆಂದರೆ ಅದು ಬಾಹ್ಯ ರೂಪದಲ್ಲಿ ಕತ್ತಲೆಯಿಂದ ಕೂಡಿತ್ತು. ಆದರೆ ಅದರಲ್ಲಿ ಪ್ರಕಾಶಮಯ ವ್ಯಕ್ತಿಯ ಹೆಜ್ಜೆಯಿಂದಾಗಿ ಅದು ಪ್ರಕಾಶಿತಗೊಂಡಿತು. ಕಾರಣ ಅದನ್ನು ಕತ್ತಲೆಯ ಕೋಣೆ ಎನ್ನಬೇಡಿರಿ. ಅದರ ಮೇಲೆ ನೂರು ಪ್ರಕಾಶಗಳು ಬಲಿಗೊಳ್ಳಲಿ, ಈಗಂತೂ ಅದು ಸಾಕ್ಷಾತ್ ಪ್ರಕಾಶಮಾನವಾಗಿದೆ. ಉದಾಹರಣೆಗೆ ಮೃತಪಟ್ಟರೂ ಅದನ್ನು ಮೃತ ಎಂದು ಹೇಳಬೇಡಿರಿ ಎಂದರೆ ಅಲ್ಲಾಹನ ಮಾರ್ಗದಲ್ಲಿ ಮೃತಪಟ್ಟವರ ಬಗ್ಗೆ ಅಲ್ಲಾಹನು ಹೇಳಿದನು. **ವಲಾ ತಖೂಲು ಲಿಮನ್ ಯುಖ್‌ತಲು ಫೀ ಸಬೀಲಿಲ್ಲಾಹಿ ಅಮ್‌ವಾತುನ್.** ಎಂದರೆ ನನ್ನ ಮಾರ್ಗದಲ್ಲಿ ಬಲಿಯಾದವರನ್ನು ಮೃತರು ಎನ್ನಬೇಡಿರಿ. ಬದಲು ಅವರನ್ನು ಜೀವಂತರು ಎನ್ನಿರಿ.

**(ಪ್ರಕಾಶಿತ ಅಖ್‌ಬಾರ್ ಅಲ್-ಫಝುಲ್ ಖಾದಿಯಾನ್ 27 ಆಗಸ್ಟ್ 1936)**

**ಹಝ್‌ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್**

**ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:**

"ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್‌ರತ್ ಮುಹಮ್ಮದ್(ಸ) ಆಗಿರುವರು ಎಂದು ನನಗೆ ಮನವರಿಕೆ ಮಾಡಿಕೊಡಲಾಗಿದೆ." *(ಅರ್‌ಬಈನ್ ಸಂಪುಟ-1 ರೂಹಾನಿ ಖಝಾಇನ್ ಸಂಪುಟ 17, ಪುಟ 345)*

## ರಾಷ್ಟ್ರೀಯ ವರದಿಗಳು

### ಖಾದಿಯಾನ್ ದಾರುಲ್ ಅಮಾನ್‌ನಲ್ಲಿ "ಮಖ್‌ಝುನೆ ತಸಾವೀರ್" ಪ್ರದರ್ಶನದ ನವೀಕರಣ ಮತ್ತು ಉದ್ಘಾಟನೆ

ಅಲ್ಲಾಹನ ಅನುಗ್ರಹದಿಂದ, ಸಯ್ಯಿದುನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಅವರ ಅನುಮೋದನೆಯೊಂದಿಗೆ ಖಾದಿಯಾನ್ ದಾರುಲ್-ಅಮಾನ್‌ನಲ್ಲಿರುವ ಅಲ್ ಬಲಾಗ್ ಕಟ್ಟಡದಲ್ಲಿರುವ "ಮಖ್‌ಝುನೆ ತಸಾವೀರ್ ಖಾದಿಯಾನ್" ನ ಹೊಸ ಪ್ರದರ್ಶನವನ್ನು ಉದ್ಘಾಟಿಸಲಾಯಿತು. ಮಖ್‌ಝುನೆ ತಸಾವೀರ್‌ನ ಉದ್ಘಾಟನಾ ಸಮಾರಂಭವು 17 ಡಿಸೆಂಬರ್ 2022 ರಂದು ಸಂಜೆ 4 ಗಂಟೆಗೆ ನಡೆಯಿತು. ಅಂಜುಮನ್ ತೆಹ್ರೀಕ್ ಜದೀದ್ ಖಾದಿಯಾನ್‌ನ ಅಧ್ಯಕ್ಷರಾದ ಗೌರವಾನ್ವಿತ ಮೌಲಾನಾ ಜಲಾಲುದ್ದೀನ್ ನೈಯರ್ ಸಾಹಿಬ್ ಅವರು ಸಾಮೂಹಿಕ ದುಆನೊಂದಿಗೆ ಉದ್ಘಾಟಿಸಿದರು. ಹುದ್ದೆದಾರರು ಹಾಗೂ ಜಲ್ಸ ಸಾಲಾನ ಖಾದಿಯಾನ್ 2022ಕ್ಕೆ ಸೇರುವ ಉದ್ದೇಶದಿಂದ ಬಂದ ಜಮಾಅತ್‌ನ ಕೆಲವು ವಿದೇಶಿ ಅತಿಥಿಗಳು ಈ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದರು. ಪವಿತ್ರ ಖುರ್‌ಆನ್ ಪಠಣದೊಂದಿಗೆ ಸಮಾರಂಭವು ಪ್ರಾರಂಭವಾಯಿತು, ನಂತರ ಮಖ್‌ಝುನೆ ತಸಾವೀರ್ ಖಾದಿಯಾನ್ ವಿಭಾಗದ ಗೌರವಾನ್ವಿತ ಉಸ್ತುವಾರಿಯುವರು ಖಾದಿಯಾನ್‌ನಲ್ಲಿ ಮಖ್‌ಝುನೆ ತಸಾವೀರ್ ವಿಭಾಗದ ಸ್ಥಾಪನೆ ಮತ್ತು ನವೀಕರಣದ ಕುರಿತು ಸಭಿಕರಿಗೆ ತಿಳಿಸಿದರು. ನಂತರ ಅಂಜುಮನ್ ತೆಹ್ರೀಕ್-ಎ-ಜದೀದ್‌ನ ಅಧ್ಯಕ್ಷರಾದ ಗೌರವಾನ್ವಿತ ಮೌಲಾನಾ ಜಲಾಲುದ್ದೀನ್ ನೈಯರ್ ಸಾಹಿಬ್ ಅವರು ಸಾಮೂಹಿಕ ದುಆ ನಡೆಸಿದರು. ಅದರ ನಂತರ, ಗಣ್ಯರು ಮಖ್‌ಝುನೆ ತಸಾವೀರ್ ಪ್ರದರ್ಶನಕ್ಕೆ ಭೇಟಿ ನೀಡಿದರು. ಜಮಾಅತ್‌ನ ಫೋಟೋಗಳು, ಜಮಾಅತ್‌ನ ಇತಿಹಾಸದ ಪ್ರಮುಖ ಮೂಲಗಳಾಗಿವೆ ಮತ್ತು ಈ ಐತಿಹಾಸಿಕ ಮತ್ತು ಅಪರೂಪದ ಜಮಾಅತ್ ಫೋಟೋಗಳನ್ನು ನೋಡುವ ಮೂಲಕ, ಅಹ್ಮದಿಯಾ ಜಮಾಅತ್ ಅನ್ನು ಪ್ರತಿ ಯುಗದಲ್ಲೂ ಖಲೀಫರ ಮಹಾನ್ ಆಧ್ಯಾತ್ಮಿಕ ನಾಯಕತ್ವದ ಅಡಿಯಲ್ಲಿ ಸರ್ವಶಕ್ತನಾದ ಅಲ್ಲಾಹನು ಹೇಗೆ ಅನುಗ್ರಹಿಸಿದ್ದಾನೆ ಎಂಬ ವಿಶ್ವಾಸ ದೃಢಗೊಳ್ಳುತ್ತದೆ. ಈ ಉದ್ದೇಶಕ್ಕಾಗಿ, ಪಂಚಮ ಖಲೀಫರ ಅನುಗ್ರಹದಾಯಕ ಅವಧಿಯಲ್ಲಿ, ಹುಝೂರ್ ಅನ್ವರ್(ಅತಬಿಅ) ಅವರ ಮಾರ್ಗದರ್ಶನ ಮತ್ತು ಅನುಮೋದನೆಯ ಅಡಿಯಲ್ಲಿ, "ಮಖ್‌ಝುನೆ ತಸಾವೀರ್" ನ ಮೊದಲ ಪ್ರದರ್ಶನವನ್ನು 2012 ರಲ್ಲಿ "ಅಲ್-ಬಲಾಗ್" ಕಟ್ಟಡದಲ್ಲಿ ಸ್ಥಾಪಿಸಲಾಯಿತು. ಖಾದಿಯಾನ್ ದಾರುಲ್ ಅಮಾನ್ ನಲ್ಲಿ. ಪ್ರದರ್ಶನಕ್ಕೆ ಹೊಸ ಫೋಟೋಗಳನ್ನು ಸೇರಿಸುವುದರ ಜೊತೆಗೆ ಕಳಪೆ ಸ್ಥಿತಿಯಲ್ಲಿದ್ದ ಹಳೆಯ ಫ್ರೇಮ್ಸ್‌ಗಳನ್ನು ಬದಲಾಯಿಸುವ ಅಗತ್ಯವಿತ್ತು. ಆದ್ದರಿಂದ, ಸಯ್ಯುದುನಾ ಹುಝೂರ್ ಅನ್ವರ್(ಅತಬಿಅ) ಅವರ ಅನುಮೋದನೆಯೊಂದಿಗೆ, ಮಖ್‌ಝುನೆ ತಸಾವೀರ್ ಪ್ರದರ್ಶನವನ್ನು ನವೀಕರಿಸುವ ಮೂಲಕ ಹೊಸ ಪ್ರದರ್ಶನವನ್ನು ಸಿದ್ಧಪಡಿಸಲಾಗಿದೆ ಮತ್ತು ಈ ಹೊಸ ಪ್ರದರ್ಶನವನ್ನು ಡಿಸೆಂಬರ್ 17, 2022 ರಂದು ಉದ್ಘಾಟಿಸಲಾಯಿತು. ಮಖ್‌ಝುನೆ ತಸಾವೀರ್ ಖಾದಿಯಾನ್ ಅವರ ಈ ಹೊಸ ಪ್ರದರ್ಶನದಲ್ಲಿ, ಜಮಾಅತ್‌ನ ಐತಿಹಾಸಿಕ ಫೋಟೊಗಳನ್ನು ಕ್ರಮಬದ್ಧವಾದ ಶೈಲಿಯಲ್ಲಿ ಪ್ರದರ್ಶಿಸಲಾಗುತ್ತದೆ. ಈ ಪ್ರದರ್ಶನದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತು ಅವರ ಸುವಾರ್ತಾಬೋಧಕ ಮಕ್ಕಳ (ಮುಬಶ್ಶಿರ್ ಔಲಾದ್) ಫೋಟೋಗಳು, ಹಾಗೆಯೇ ಖಲೀಫರು ಮತ್ತು ಅವರ ಅನುಗ್ರಹದಾಯಕ ಖಿಲಾಫತ್ ಅವಧಿಯಲ್ಲಿ ನಡೆದ ಪ್ರಮುಖ ಘಟನೆಗಳ ಮತ್ತು ಐತಿಹಾಸಿಕ ಸಂದರ್ಭಗಳ ಫೋಟೊಗಳನ್ನು ಒಳಗೊಂಡಂತೆ ವಿವಿಧ ವಿಭಾಗಗಳನ್ನು ಸ್ಥಾಪಿಸಲಾಗಿದೆ. ಪಂಚಮ ಖಲೀಫರ ಅನುಗ್ರಹದಾಯಕ ಅವದಿ ಪ್ರಮುಖ ಫೋಟೊಗಳು ವಿಶೇಷವಾಗಿ ಹುಝೂರ್ ಅನ್ವರ್(ಅತಬಿಅ) ರವರ ಇತ್ತೀಚಿನ ಪ್ರವಾಸಗಳು ಮತ್ತು ಮುಂತಾದ ಫೋಟೊಗಳು ಸಹ ಈ ಹೊಸ ಪ್ರದರ್ಶನದ ಪ್ರಮುಖ ಅಂಶಗಳಾಗಿವೆ. ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ, ಈ ಪ್ರದರ್ಶನವು ಸ್ಥಳೀಯ ಸ್ನೇಹಿತರು ಮತ್ತು ಅತಿಥಿಗಳ ವಿಶೇಷ ಗಮನದ ಕೇಂದ್ರವಾಯಿತು ಮತ್ತು ಜಲ್ಸಾ ಸಾಲಾನ ಖಾದಿಯಾನ್ 2022 ರ ಸಂದರ್ಭದಲ್ಲಿ, ಅತಿಥಿಗಳು ಸಹ ಈ ಪ್ರದರ್ಶನದ ಪ್ರಯೋಜನವನ್ನು ಪಡೆದರು ಮತ್ತು ತಮ್ಮ ಇಷ್ಟವನ್ನು ವ್ಯಕ್ತಪಡಿಸಿದರು. ಅಲ್ಹಮ್ದುಲಿಲ್ಲಾಹ್ ಅಲಾ ಝಾಲಿಕ್. ಈ ಹೊಸ ಪ್ರದರ್ಶನವನ್ನು ಎಲ್ಲಾ ರೀತಿಯಲ್ಲೂ ಸ್ಥಾಪಿಸಲು ಅಲ್ಲಾಹನು ಅನುಗ್ರಹಿಸಲಿ ಮತ್ತು ಇದನ್ನು ಜಮಾಅತ್ ಮತ್ತು ವಿದೇಶೀಯ ಸ್ನೇಹಿತರು ಸಹ ಬಳಸುವಂತೆ ಮಾಡಲಿ. ಆಮೀನ್.

(ಅತಾಉಲ್ ಮುಜೀಬ್ ಲೋನ್, ಕಾಯಿಮ್ ಮಖಾಮ್ ಇಂಚಾರ್ಜ್ ಪ್ರೆಸ್ ಎಂಡ್ ಮೀಡಿಯಾ, ಭಾರತ)

### ಲಜ್ನಾ ಇಮಾಅಲ್ಲಾಹ್ ಭಾರತದವತಿಯಿಂದ WOMEN IN ISLAM ಎಂಬ ವಿಷಯದ ಕುರಿತು ಜಲ್ಸವನ್ನು ಆಯೋಜಿಸಲಾಯಿತು

ಡಿಸೆಂಬರ್ 4, 2022 ರಂದು, ಸರಾ ಎ ಖಿದ್ಮತ್ ಖಾದಿಯಾನ್‌ನಲ್ಲಿ ಹುಝೂರ್ ಅನ್ವರ್(ಅತಬಿಅ) ಅವರ ಅನುಮೋದನೆಯೊಂದಿಗೆ ಲಜ್ನಾ ಇಮಾಅಲ್ಲಾಹ್ ಭಾರತದ ವತಿಯಿಂದ WOMEN IN ISLAM (ಮಹಿಳೆ ಇಸ್ಲಾಂನಲ್ಲಿ) ಎಂಬ ವಿಷಯದ ಕುರಿತು ಜಲ್ಸವನ್ನು ಆಯೋಜಿಸಲಾಯಿತು. ಲಜ್ನಾ ಇಮಾಅಲ್ಲಾಹ್ ಭಾರತ ತನ್ನ ಮಜ್ಲಿಸ್ ಸ್ಥಾಪನೆಯ ಶತಮಾನೋತ್ಸವವನ್ನು ಈ ವರ್ಷ ಶತಮಾನೋತ್ಸವದ ಮಹೋತ್ಸವವನ್ನಾಗಿ ಆಚರಿಸುತ್ತಿದ್ದು, ವಿವಿಧ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಈ ಜಲ್ಸವು ಶತಮಾನೋತ್ಸವದ ಅನುಮೋದಿತ ಕಾರ್ಯಕ್ರಮಗಳ ಭಾಗವಾಗಿತ್ತು. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಪಂಜಾಬ್ ಪ್ರಾಂತ್ಯದ ಹೆಚ್ಚಿನ ಸಂಖ್ಯೆಯಲ್ಲಿ ಅಹ್ಮದೀಯೇತರ ಮಹಿಳೆಯರನ್ನು ಆಹ್ವಾನಿಸಲಾಯಿತು. ಇಸ್ಲಾಂನಲ್ಲಿ ಮಹಿಳೆಯರ ಸ್ಥಾನ ಮತ್ತು ಮಹಿಳೆಯರು ಅನುಭವಿಸುವ ಹಕ್ಕುಗಳ ಬಗ್ಗೆ ಅನ್ಯರಿಗೆ ಪರಿಚಯಿಸುವುದು ಈ ಕಾರ್ಯಕ್ರಮದ ಮೂಲ ಉದ್ದೇಶವಾಗಿತ್ತು. ಪವಿತ್ರ ಖುರ್‌ಆನ್‌ನ ಪಠಣದೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಕಾರ್ಯಕ್ರಮದಲ್ಲಿ ಭಾರತದ ರಾಷ್ಟ್ರಗೀತೆಯನ್ನೂ ಪ್ರದರ್ಶಿಸಲಾಯಿತು. ಸ್ವಾಗತ ಭಾಷಣದ ನಂತರ 5 ಅತಿಥಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಈ ಗೌರವಾನ್ವಿತ ಅತಿಥಿಯರು ಇಸ್ಲಾಂ ಧರ್ಮವು ಮಗಳನ್ನು ಹೊರೆಯಾಗಿ ಪರಿಗಣಿಸದೆ ಅವಳ ಜನ್ಮವನ್ನು ಆಚರಿಸುವ ಧರ್ಮವಾಗಿದೆ ಎಂದು ಹೇಳಿದರು. ಪವಿತ್ರ ಖುರ್‌ಆನ್‌ನಲ್ಲಿ ಪುರುಷರು ಮತ್ತು ಮಹಿಳೆಯರಿಗೆ ಸಮಾನ ಸ್ಥಾನಮಾನವನ್ನು ನೀಡಲಾಗಿದೆ. ಇಸ್ಲಾಂನಲ್ಲಿ ಪರದೆಯ ಕಲ್ಪನೆಯು ಮಹಿಳೆಯರ ಶಿಸ್ತು ಮತ್ತು ರಕ್ಷಣೆಗಾಗಿ ಆಗಿದೆ. ಅಲ್ಲದೆ, ಈ ಅತಿಥಿ ಮಹಿಳೇಯರು ಕೂಡ ಲಜ್ನಾ ಇಮಾಅಲ್ಲಾಹ್ ಭಾರತದ ಶತಮಾನೋತ್ಸವ ಆಚರಣೆಯ ಬಗ್ಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅಹ್ಮದೀಯೇತರ ಅತಿಥಿ ಮಹಿಳೆಯರಿಗೆ ಮೊಮೆಂಟೋಗಳನ್ನು ವಿತರಿಸಲಾಯಿತು ಮತ್ತು ಮಹಿಳೆ ಇಸ್ಲಾಮಿನಲ್ಲಿ ಎಂಬ ಪುಸ್ತಕವನ್ನು ಸಹ ನೀಡಲಾಯಿತು. ಕಾರ್ಯಕ್ರಮದ ಕೊನೆಯಲ್ಲಿ ಲಜ್ನಾ ಇಮಾಅಲ್ಲಾಹ್ ಭಾರತದ ಅಧ್ಯಕ್ಷೆಯು ಭಾಗವಹಿಸಿದ ಎಲ್ಲಾ ಅತಿಥಿಗಳಿಗೆ ಮಹಿಳೆ ಇಸ್ಲಾಮಿನಲ್ಲಿ ಮತ್ತು ಮಹಿಳೆಯ ಸ್ಥಾನ ಹಾಗೂ ಅವರ ಹಕ್ಕುಗಳ ಕುರಿತು ಮಾತನಾಡಿದರು. ಮತ್ತು ಭಾಗವಹಿಸಿದ ಎಲ್ಲಾ ಅತಿಥಿಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಪ್ರಾರ್ಥನೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು. ಭಾಗವಿಸಿದವರೆಲ್ಲರೂ ಬಹಳ ಸಂತೋಷವನ್ನು ವ್ಯಕ್ತಪಡಿಸಿದರು ಮತ್ತು ಜಮಾಅತ್‌ನ ಕಲ್ಯಾಣ ಮತ್ತು ಶಾಂತಿ ಸ್ಥಾಪನೆಯ ಪ್ರಯತ್ನಗಳನ್ನು ಶ್ಲಾಘಿಸಿದರು. ಅಲ್ಲಾಹನ ಅನುಗ್ರಹದಿಂದ ಈ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಯಿತು. ಈ ಕಾರ್ಯಕ್ರಮದ ಉತ್ತಮ ಮತ್ತು ಫಲಪ್ರದ ಫಲಿತಾಂಶಗಳನ್ನು ಅಲ್ಲಾಹನು ಬಹಿರಂಗಪಡಿಸಲಿ. ಆಮೀನ್

### ಕೋಲ್ಕತ್ತ ನಗರದಲ್ಲಿ ಅಹ್ಮದಿಯಾ ಜಮಾಅತ್ ಆಯೋಜಿಸಿದ್ದ ಶಾಂತಿ ವಿಚಾರ ಸಂಕಿರಣ

ಡಿಸೆಂಬರ್ 3, 2022 ರಂದು, ಬಂಗಾಳದ ಕಲ್ಕತ್ತಾದಲ್ಲಿ ಅಹ್ಮದಿಯಾ ಜಮಾಅತ್ ಶಾಂತಿ ವಿಚಾರ ಸಂಕಿರಣವನ್ನು ಆಯೋಜಿಸಿತು. ಕಲ್ಕತ್ತಾ ನಗರವು ಭಾರತದ ಪ್ರಮುಖ ಮತ್ತು ಮೆಟ್ರೋಪಾಲಿಟನ್ ನಗರವಾಗಿದೆ. ಈ ನಗರದ ದಿ ಪಾರ್ಕ್ ಹೋಟೆಲ್‌ನಲ್ಲಿ ಶಾಂತಿ ವಿಚಾರ ಸಂಕಿರಣ ನಡೆಯಿತು. ಈ ವರ್ಷದ ಶಾಂತಿ ವಿಚಾರ ಸಂಕಿರಣದ ಶೀರ್ಷಿಕೆಯು "Fundamentals of Establishing Lasting Peace" ಎಂದು ನೇಮಿಸಲಾಯಿತು. ರಾಜಕೀಯ ಮತ್ತು ಸರ್ಕಾರಿ ಅಧಿಕಾರಿಗಳು, ಪ್ರಾಧ್ಯಾಪಕರು ಮತ್ತು ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು, ವಿವಿಧ ಧರ್ಮಗಳ ಮುಖಂಡರು ಮತ್ತು ವಿವಿಧ ಕಲ್ಯಾಣ ಸಂಸ್ಥೆಗಳೊಂದಿಗೆ ಸಂಬಂಧ ಹೊಂದಿರುವ ಸ್ನೇಹಿತರು ಸೇರಿದಂತೆ ವಿವಿಧ ಚಿಂತನಾಲಯಗಳಿಗೆ ಸೇರಿದ ನೂರಕ್ಕೂ ಹೆಚ್ಚು ಗಣ್ಯರು ಈ ಶಾಂತಿ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದರು. ಈ ಶಾಂತಿ ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ಅಹ್ಮದಿಯಾ ಜಮಾಅತ್ ಕಲ್ಕತ್ತಾದ ಮಾನ್ಯ ಅಮೀರ್ ಸಾಹೇಬ್ ವಹಿಸಿದ್ದರು. ಭಾರತದ ರಾಷ್ಟ್ರಗೀತೆಯನ್ನು ಪ್ರಸ್ತುತಪಡಿಸಲಾಯಿತು. ಪವಿತ್ರ ಖುರ್‌ಆನ್‌ನ ಪಠಣದೊಂದಿಗೆ ಶಾಂತಿ ವಿಚಾರ ಸಂಕಿರಣ ಆರಂಭವಾಯಿತು. ಅಹ್ಮದೀಯ ಜಮಾಅತ್ ಕಲ್ಕತ್ತಾದ ಗೌರವಾನ್ವಿತ ಮುಬಲ್ಲಿಹ್ ಸಾಹೇಬರು ಅತಿಥಿಗಳನ್ನು ಸ್ವಾಗತಿಸಿ ಬಾಂಗ್ಲಾ ಭಾಷೆಯಲ್ಲಿ ಪರಿಚಯಿಸಿದರು. ಇದರಲ್ಲಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಆಗಮನದ ಉದ್ದೇಶವನ್ನು

ವಿವರಿಸುವಾಗ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಹೇಳಿದಂತೆ ಮಾನವ ಸಹಾನುಭೂತಿ ಮತ್ತು ಸಾರ್ವಜನಿಕ ಶಾಂತಿಯ ಬೋಧನೆಗಳನ್ನು ಪ್ರಸ್ತುತಪಡಿಸಿದರು. ಈ ಶಾಂತಿ ವಿಚಾರ ಸಂಕಿರಣದಲ್ಲಿ, ಸಯ್ಯದುನಾ ಹುಝೂರ್ ಅನ್ವರ್(ಅತಬಿಅ) ಅವರ ಶಾಂತಿ ಸ್ಥಾಪನೆಯ ಪ್ರಯತ್ನಗಳು ಮತ್ತು ಶಾಂತಿ ಸ್ಥಾಪನೆಯ ಮೂಲ ತತ್ವಗಳನ್ನು ಉಲ್ಲೇಖಿಸಿ ಡಾಕ್ಯುಮಡಂಟರಿಯನ್ನು ಪ್ರದರ್ಶಿಸಲಾಯಿತು. ಭಾರತದಾದ್ಯಂತ ಅಹ್ಮದೀಯ ಜಮಾಅತ್ ಮಾಡಿದ ಮಾವನ ಸೇವೆಯ ಕಾರ್ಯಗಳನ್ನು ಡಾಕ್ಯುಮೆಂಟರಿಯು ಒಳಗೊಂಡಿತ್ತು. ಈ ಶಾಂತಿ ವಿಚಾರ ಸಂಕಿರಣದಲ್ಲಿ, ಮಿನೀತನು ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತದ ಅಧ್ಯಕ್ಷನಾಗಿ ಕೇಂದ್ರ ಪ್ರತಿನಿಧಿಯಾಗಿ ಭಾಗವಹಿಸಿದನು ಮತ್ತು "Fundamentals of Establishing Lasting Peace" ಎಂಬ ವಿಷಯದ ಕುರಿತು ಸಯ್ಯದುನಾ ಹುಝೂರ್ ಅನ್ವರ್(ಅತಬಿಅ) ಅವರು ಯುಕೆ 2018 ರ ಶಾಂತಿ ಸಿಂಪೋಸಿಯುವ್ ಸಂದರ್ಭದಲ್ಲಿ ನೀಡಿದ ಭಾಷಣವನ್ನು ಬಳಸಿಕೊಂಡು ಅದರು ಉಲ್ಲೇಖಗಳನ್ನು ಒಳಗೊಂಡಿರುವ ಭಾಷಣವನ್ನು ಪ್ರೇಕ್ಷಕರ ಮುಂದೆ ಪ್ರಸ್ತುತಪಡಿಸಲಾಯಿತು. ಅದೇ ರೀತಿ, ಮೂರನೇ ಮಹಾಯುದ್ಧದ ಅಪಾಯಗಳ ಬಗ್ಗೆ ಹಾಜರಿದ್ದವರಿಗೆ ಎಚ್ಚರಿಕೆ ನೀಡಿ, ಅವರು ಸರ್ವಶಕ್ತನಾದ ಅಲ್ಲಹನ ಕಡೆಗೆ ತಿರುಗಿ, ಎಲ್ಲಾ ಹಂತಗಳಲ್ಲಿ ನ್ಯಾಯವನ್ನು ಸ್ಥಾಪಿಸಲು ಮತ್ತು ದೇವರ ಜೀವಿಗಳ ಬಗ್ಗೆ ಸಹಾನುಭೂತಿ ತೋರಿಸಲು ಗಮನ ಸೆಳೆದರು. ಈ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ ಗೌರವಾನ್ವಿತ ಅತಿಥಿಗಳಿಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶವನ್ನು ನೀಡಲಾಯಿತು. ಹೀಗೆ ಅವರು ತಮ್ಮ ಒಳ್ಳೆಯ ಆಲೋಚನೆಗಳನ್ನು ವ್ಯಕ್ತಪಡಿಸಿದ್ದಾರೆ ಮತ್ತು ಶಾಂತಿ ಸ್ಥಾಪಿಸಲು ಜಮಾಅತ್‌ನ ಪ್ರಯತ್ನಗಳನ್ನು ಶ್ಲಾಘಿಸಿದರು. ಕೊನೆಯಲ್ಲಿ ಕಲ್ಕತ್ತಾದ ಗೌರವಾನ್ವಿತ ನಾಯೆಬ್ ಅಮೀರ್ ಸಾಹಿಬ್ ಗೆಳೆಯರಿಗೆ ಧನ್ಯವಾದವನ್ನು ಅರ್ಪಿಸಿದರು. ನಂತರ ಗೌರವಾನ್ವಿತ ಅಮೀರ್ ಸಾಹಿಬ್ ಅಹ್ಮದಿಯ ಜಮಾಅತ್ ಕಲ್ಕತ್ತಾ ಅವರು ಅಧ್ಯಕ್ಷೀಯ ಭಾಷಣ ಮತ್ತು ಸಭೆಯನ್ನು ದುಆದೊಂದಿಗೆ ಮುಕ್ತಾಯಗೊಳಿಸಿದರು. ಬಳಿಕ ಅತಿಥಿಗಳಿಗೆ ಔತಣ ಕೂಟ ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ ಸಭಾಂಗಣದ ಒಂದು ಬದಿಯಲ್ಲಿ ಜಮಾಅತ್‌ನ ಬುಕ್ ಸ್ಟಾಲ್ ಕೂಡ ಹಾಕಲಾಗಿದ್ದು, ಭಾಗವತರು ಇದರ ಸದುಪಯೋಗ ಪಡೆದುಕೊಂಡರು. ಗಣ್ಯರಿಗೆ ಜಮಾಅತ್‌ನ ಸಾಹಿತ್ಯವನ್ನು ನೀಡಲಾಯಿತು. ಶಾಂತಿ ವಿಚಾರ ಸಂಕಿರಣದ ಸುದ್ದಿಯನ್ನು 6 ವಿವಿಧ ಪತ್ರಿಕೆಗಳು ಮತ್ತು 3 ಪ್ರಾದೇಶಿಕ ಸುದ್ದಿ ವಾಹಿನಿಗಳಲ್ಲಿ ಪ್ರಸಾರ ಮಾಡಲಾಯಿತು. ಈ ಶಾಂತಿ ವಿಚಾರ ಸಂಕಿರಣದ ಉತ್ತಮ ಮತ್ತು ಫಲಪ್ರದ ಫಲಿತಾಂಶಗಳನ್ನು ಅಲ್ಲಾಹನು ಬಹಿರಂಗಪಡಿಸಲಿ. ಆಮೀನ್.

## ಭಾರತದ ರಾಜಧಾನಿ ನವದೆಹಲಿಯಲ್ಲಿ ಶಾಂತಿ ವಿಚಾರ ಸಂಕಿರಣ
## Peace Symposium

ಡಿಸೆಂಬರ್ 10, 2022 ರಂದು, ಭಾರತದ ರಾಜಧಾನಿಯಾದ ನವದೆಹಲಿಯಲ್ಲಿ ಅಹ್ಮದೀಯ ಜಮಾಅತ್ ವತಿಯಿಂದ ಭವ್ಯವಾದ ಶಾಂತಿ ವಿಚಾರ ಸಂಕಿರಣವನ್ನು ಆಯೋಜಿಸಲಾಯಿತು. ಕಾನ್ಸ್ಟಿಟ್ಯೂಶನಲ್ ಕ್ಲಬ್ ಆಫ್ ಇಂಡಿಯಾದಲ್ಲಿ ಶಾಂತಿ ವಿಚಾರ ಸಂಕಿರಣ ನಡೆಯಿತು. ಈ ವರ್ಷದ ಶಾಂತಿ ವಿಚಾರ ಸಂಕಿರಣವನ್ನು True and Sustainable Peace ಎಂಬ ಶೀರ್ಷಿಕೆಯಲ್ಲಿ ನಡೆಯಿತು. ಈ ಶಾಂತಿ ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ಮಾನ್ಯ ನಾಝಿರ್ ನಷರ್ ವ ಇಶಾಅತ್ ಖಾದಿಯಾನ್ ವಹಿಸಿದ್ದರು. ಈ ಶಾಂತಿ ವಿಚಾರ ಸಂಕಿರಣದಲ್ಲಿ ಮುಖ್ಯ ಅತಿಥಿಯಾಗಿ ಭಾರತ ಸರ್ಕಾರದ ಅಲ್ಪಸಂಖ್ಯಾತ ವ್ಯವಹಾರಗಳ ರಾಜ್ಯ ಸಚಿವರಾದ ಶ್ರೀ ಜಾನ್ ಬಾರ್ಲಾ ಸಾಹಿಬ್ ಅವರು ಭಾಗವಹಿಸಿದ್ದರು. ಅದೇ ರೀತಿ, ಹೈಕೋರ್ಟ್ ವಕೀಲರು, ವಿಶ್ವವಿದ್ಯಾಲಯಗಳ ಉಪಕುಲಪತಿಗಳು, ಧಾರ್ಮಿಕ ಮುಖಂಡರು ಮತ್ತು ವಿವಿಧ ದತ್ತಿ ಮತ್ತು ಕಲ್ಯಾಣ ಸಂಸ್ಥೆಗಳ ಅಧ್ಯಕ್ಷರು ಭಾಗವಹಿಸಿದ್ದರು. ಪವಿತ್ರ ಖುರ್‌ಆನ್‌ನ ಪಠಣದೊಂದಿಗೆ ಕಾರ್ಯಕ್ರಮ ಆರಂಭವಾಯಿತು. ದೆಹಲಿಯ ಗೌರವಾನ್ವಿತ ಉಪ ಜಿಲ್ಲಾ ಅಮೀರ್ ಸಾಹೇಬರು ಅತಿಥಿಗಳನ್ನು ಸ್ವಾಗತಿಸಿದರು ಮತ್ತು ಅಹ್ಮದಿಯಾ ಜಮಾಅತ್ ಅನ್ನು ಪರಿಚಯಿಸಿದರು. ಜಮಾಅತ್‌ನ ಪರಿಚಯದ ಜೊತೆಗೆ, ಅವರು Power point Presentation ಅನ್ನು ಸಹ ಆಯೋಜಿಸಿದರು, ಅದರಲ್ಲಿ ಚಿತ್ರಗಳನ್ನು ಸಹ ಪ್ರಸ್ತುತಪಡಿಸಿದರು. ಈ ಶಾಂತಿ ವಿಚಾರ ಸಂಕಿರಣದಲ್ಲಿ, ಸಯ್ಯಿದುನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲ ಬಿನಸ್ರಿಹಿಲ್ ಅಝೀಝ್ ಅವರ ಶಾಂತಿ ಸ್ಥಾಪನೆಗೆ ಪ್ರಯತ್ನಗಳು ಮತ್ತು ಸಾರ್ವತ್ರಿಕ ಶಾಂತಿ ಸ್ಥಾಪನೆಗೆ ಸುವರ್ಣ ತತ್ವಗಳನ್ನು ಉಲ್ಲೇಖಿಸಿ Documentary ಸಾಕ್ಷ್ಯಚಿತ್ರವನ್ನು ತೋರಿಸಲಾಯಿತು. ಈ ಡಾಕ್ಯುಮೆಂಟರಿಯಲ್ಲಿ ಅಹ್ಮದೀಯ ಜಮಾಅತ್ ನಡೆಸಿದ ಖಿದ್ಮತೆ ಖಲ್‌ಖ್ (ಮಾನವ ಸೇವೆ) ಕಾರ್ಯಗಳನ್ನು ಸಹ ಪ್ರಸ್ತುತಪಡಿಸಲಾಯಿತು. ಅದೇ ರೀತಿ, ಈ ಡಾಕ್ಯುಮೆಂಟರಿನಲ್ಲಿ ಎಂಟಿಎ ನ್ಯೂಸ್‌ನಲ್ಲಿ ಪ್ರಸಾರವಾದ ಇಸ್ಲಾಮಾಬಾದ್‌ನಲ್ಲಿ ಹುಝೂರ್ ಅನ್ವರ್(ಅತಬಿಅ) ಅವರೊಂದಿಗೆ ನವದೆಹಲಿಯ ಸ್ವಾಮಿ ಸುಶೀಲ್ಜಿ ಅವರ ಭಾವನಾತ್ಮಕ ಸಂದರ್ಶನವನ್ನೂ ತೋರಿಸಲಾಯಿತು. ಅಂತೆಯೇ, ಹುಝೂರ್ ಅನ್ವರ್(ಅತಬಿಅ) ಅವರ 2022 ರ ಅಮೇರಿಕಾ ಪ್ರವಾಸದ ಮುಖ್ಯಾಂಶಗಳು ಮತ್ತು ಹುಝೂರ್ ಅನ್ವರ್(ಅತಬಿಅ) ಅವರ ಈ ಪ್ರವಾಸದ ವಿವಿಧ ಖುತ್‌ಬಗಳ ಪ್ರಮುಖ ಭಾಗಗಳನ್ನು ಸಹ ಈ ಡಾಕ್ಯುಮೆಂಟರಿಯಲ್ಲಿ ಸೇರಿಸಲಾಗಿದೆ. ಈ ಶಾಂತಿ ವಿಚಾರ ಸಂಕಿರಣದಲ್ಲಿ, ಜಮಾಅತ್ ಅಹ್ಮದಿಯಾ ಪ್ರತಿನಿಧಿಸುವ ಮಾನ್ಯ ಖಾಯೆಮ್ ಮಖಾಮ್ ನಾಝಿರ್ ಸಾಹಿಬ್ ಉಮೂರೆ ಖಾರಿಜ (ವಿದೇಶಾಂಗ ಸಚಿವರು) ಅವರು ಆಂಗ್ಲ ಭಾಷೆಯಲ್ಲಿ ಸಭಿಕರನ್ನು ಉದ್ದೇಶಿಸಿ ಮಾತನಾಡಿದರು. ಇದನ್ನು ಮಾಡುತ್ತಾ ಸಭಿಕರ ಗಮನವನ್ನು ಜಗತ್ತಿನ ಪ್ರಸ್ತುತ ಪರಿಸ್ಥಿತಿಯತ್ತ ಸೆಳೆದರು. ನಂತರ, ಹುಝೂರ್ ಅನ್ವರ್(ಅತಬಿಅ) ಅವರ ವಿವಿಧ ಭಾಷಣಗಳಿಂದ ತೆಗೆದುಕೊಂಡ ಉಲ್ಲೇಖಗಳ ಬೆಳಕಿನಲ್ಲಿ, ಅವರು ಸಾಮಾಜಿಕ ಮಟ್ಟದಲ್ಲಿ ಮತ್ತು ಜಾಗತಿಕ ಮಟ್ಟದಲ್ಲಿ ಶಾಂತಿಗಾಗಿ ಇಸ್ಲಾಂನ ಬೋಧನೆಗಳನ್ನು ವಿವರವಾಗಿ ಪ್ರಸ್ತಾಪಿಸಿದರು. ಅದೇ ರೀತಿ ಜಾಗತಿಕ ಬಿಕ್ಕಟ್ಟು ಮತ್ತು ಶಾಂತಿಯ ಮಾರ್ಗ ಎಂಬ ಪುಸ್ತಕವನ್ನು ಪರಿಚಯಿಸುವಾಗ ಸಭಿಕರಿಗೆ ಅದನ್ನು ಓದಿ ಅದಕ್ಕೆ ತಕ್ಕಂತೆ ತಮ್ಮ ಸ್ವಂತ ಜೀವನದ ನೀತಿ ಸಂಹಿತೆಯನ್ನು ಸೂಚಿಸುವಂತೆ ಸಲಹೆ ನೀಡಿದರು. ಈ ಶಾಂತಿ ವಿಚಾರ ಸಂಕಿರಣಕ್ಕೆ ಭೇಟಿ ನೀಡಿದ ಗಣ್ಯ ಅತಿಥಿಗಳು ನೀಡಿದ ವಿಷಯದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ನೀಡಲಾಯಿತು. ಹಾಗಾಗಿ ತಮ್ಮ ಒಳ್ಳೆಯ ವಿಚಾರಗಳನ್ನು ತಿಳಿಸುತ್ತಾ ಜಮಾಅತ್ ನವರು ಶಾಂತಿ ಸ್ಥಾಪನೆ ಮಾಡುತ್ತಿರುವುದಕ್ಕೆ ಶ್ಲಾಘಿಸಿ ಶುಭ ಹಾರೈಸಿದರು. ಅಧ್ಯಕ್ಷರ ಭಾಷಣ ಮತ್ತು ಸಾಮೂಹಿಕ ದುಆದೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡ ನಂತರ ಅತಿಥಿಗಳಿಗೆ ಔತಣ ಕೂಟ ಏರ್ಪಡಿಸಲಾಯಿತು. ಈ ಸಂದರ್ಭದಲ್ಲಿ ಸಭಾಂಗಣದ ಒಂದು ಬದಿಯಲ್ಲಿ ಜಮಾಅತ್‌ನ ಬುಕ್ ಸ್ಟಾಲ್ ಕೂಡ ಹಾಕಲಾಗಿದ್ದು, ಭಾಗವತರು ಇದರ ಸದುಪಯೋಗ ಪಡೆದುಕೊಂಡರು. ಗಣ್ಯರಿಗೆ ಜಮಾಅತ್‌ನ ಸಾಹಿತ್ಯ ಮತ್ತು ಮೊಮೆಂಟೋಗಳನ್ನು ನೀಡಲಾಯಿತು. ಈ ಶಾಂತಿ ವಿಚಾರ ಸಂಕಿರಣದಲ್ಲಿ ಪಾಲ್ಗೊಂಡವರು ಹರ್ಷ ವ್ಯಕ್ತಪಡಿಸಿ, ಇಂತಹ ಕಾರ್ಯಕ್ರಮಗಳ ಆಯೋಜನೆಯ ಮಹತ್ವ ಮತ್ತು ಅಗತ್ಯವನ್ನು ವಿವರಿಸಿ ಜಮಾಅತ್‌ನ ಪ್ರಯತ್ನವನ್ನು ಶ್ಲಾಘಿಸಿದರು. ಶಾಂತಿ ವಿಚಾರ ಸಂಕಿರಣದ ಸುದ್ದಿಯನ್ನು ನವದೆಹಲಿಯ ವಿವಿಧ ಪತ್ರಿಕೆಗಳು ಮತ್ತು ಸುದ್ದಿ ವಾಹಿನಿಗಳಲ್ಲಿ ಬಿತ್ತರಿಸಲಾಗಿದೆ. ಸರ್ವಶಕ್ತನಾದ ಅಲ್ಲಾಹನು ಈ ಶಾಂತಿ ವಿಚಾರ ಸಂಕಿರಣದ ಉತ್ತಮ ಮತ್ತು ದೂರಗಾಮಿ ಫಲಿತಾಂಶಗಳನ್ನು ಬಹಿರಂಗಪಡಿಸಲಿ. ಆಮೀನ್. **(ಕೆ. ತಾರಿಕ್ ಅಹ್ಮದ್‌ದ್, ಇಂಚಾರ್ಜ್ ಪ್ರೆಸ್ ಎಂಡ್ ಮೀಡಿಯಾ ಭಾರತ)**

## ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್(ಅ)ರ ಮಲ್‌ಫೂಝಾತ್ ಮತ್ತು ಬರವಣಿಗೆಗಳಲ್ಲದೆ ಹುಝೂರ್ ಅನ್ವರ್(ಅತಬಿಅ)ರವರ ಹೊಸ ಖುತ್‌ಬ ಜುಮುಆ, ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಆ ಪ್ರಶ್ನೋತ್ತರದ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ. **(ಸಂಪಾದಕರು)**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.04, Thursday, 29 June 2023, Issue No. 26

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

# ಇಸ್ಲಾಂ ಮತ್ತು ಸೈಯ್ಯದ್‌ನಾ ಹಝ್ರತ್ ಮಸಿಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕಟು ವಿರೋಧಿಯಾದ ಅಲೆಕ್ಸಾಂಡರ್ ಡೂಯಿಯ ಝಿಯಾನ್ ನಗರದಿಂದ ಪ್ರಾರಂಭವಾದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಅಸಾಧಾರಣ ಅನುಗ್ರಹದಾಯಕ ಅಮೇರಿಕದ ಐತಿಹಾಸಿಕ ಪ್ರವಾಸ ಸೆಪ್ಟೆಂಬರ್, ಅಕ್ಟೋಬರ್ 2022

*(ಬದರ್ ಸಂಚಿಕೆ-25ರ ಉಳಿದ ಭಾಗ ಮುಂದುವರಿಸಲಾಗಿದೆ)*

**ಕುಟುಂಬ ಭೇಟಿಗಳು ಮತ್ತು ಅನಿಸಿಕೆಗಳು**

ಕಾರ್ಯಕ್ರಮದನ್ವಯ 6 ಗಂಟೆಗೆ ಹುಝೂರೆ ಅನ್ವರ್ ತಮ್ಮ ಕಚೇರಿಗೆ ಆಗಮಿಸಿದರು ಮತ್ತು ಕುಟುಂಬ ಭೇಟಿಗಳ ಕಾರ್ಯಕ್ರಮ ಪ್ರಾರಂಭವಾಯಿತು. ಸಂಜೆಯ ಅದಿವೇಶನದಲ್ಲಿ 32 ಕುಟುಂಬಗಳ 156 ಜನರು ತಮ್ಮ ಪ್ರೀತಿಯ ಇಮಾಮರ ಜೊತೆ ಭೇಟಿಯ ಭಾಗ್ಯ ಪಡೆದರು. ಇವೆಲ್ಲ ಕುಟುಂಬ ಸದಸ್ಯರು ಹುಝೂರೆ ಅನ್ವರ್(ಅತಬಿಅ) ಅವರ ಜೊತೆಯಲ್ಲಿ ಭಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು. ನಂತರ ಅವರು ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಲೇಖನಿ (Pen) ನೀಡಿದರು. ಸಣ್ಣ ವಯಸ್ಸಿನ ಮಕ್ಕಳಿಗೆ ಚಾಕ್ಲೇಟ್ ನೀಡಿದರು.

ಭೇಟಿ ಮಾಡಲು ಬಂದ ಈ ಕುಟುಂಬಗಳಲ್ಲಿ Zion ನ ಸ್ಥಳೀಯ ಜಮಾಅತಿನವರಲ್ಲದೇ ಕೆಳಗೆ ನಮೂದಿತ 8 ಜಮಾಅತುಗಳಿಂದ ಬಂದಿದ್ದರು.

St. Louis, Chicago,
Oshkosh, Detroit,
Miami, Milwaukee,
Bay Point, Los Angeles,

ಮಿಯಾಮಿನಿಂದ ಬಂದ ಕುಟುಂಬಗಳು 1404 ಮೈಲು, ಲಾಸ್ ಏಂಜಲಿಸ್‌ನಿಂದ ಬಂದವರು 2046 ಮೈಲು ಮತ್ತು Boy point ನಿಂದ ಬಂದ ಕುಟುಂಬಗಳು 2142 ಮೈಲಿನ ದೂರ ಕ್ರಮಿಸಿ ಇಲ್ಲಿ ತಲುಪಿದ್ದರು.

ಇಂದು ಹೆಚ್ಚಿನ ಪುರುಷ ಹಾಗೂ ಮಹಿಳೆಯರು ಹುಝೂರೆ ಅನ್ವರ್(ಅತಬಿಅ) ಅವರನ್ನು ಮೊದಲ ಸಲ ಭೇಟಿಯಾಗುತ್ತಿದ್ದರು. ಇದರಿಂದ ಅವರಲ್ಲಿ ಒಂದು ಅಸಾಮಾನ್ಯ ರೀತಿಯ ಸಂತೋಷ ಎದ್ದು ಕಾಣುತ್ತಿತ್ತು. ಒಬ್ಬೊಬ್ಬರು ಒಂದೊಂದು ರೀತಿಯ ಭಾವನೆಗಳನ್ನು ಹೊಂದಿದ್ದರು. ಭೇಟಿ ಮಾಡಿ ಹೊರಗೆ ಬಂದ ಮೇಲೆ ಪರಸ್ಪರ ಸಂತಸದ ಭಾಷ್ಪಗಳೊಂದಿಗೆ ಶುಭ ಕೋರುತ್ತಿದ್ದರು. ಅಲ್ಲಾಹನು ಅವರ ಈ ಸಂತೋಷವನ್ನು ಶಾಶ್ವತಗೊಳಿಸುವಂತಾಗಲಿ ಮತ್ತು ಈ ಪವಿತ್ರ ಕ್ಷಣಗಳನ್ನು ಯಾವಾಗಲೂ ಕಾಪಾಡಿಕೊಳ್ಳುವವರಾಗಲಿ.

* ಭೇಟಿ ಮಾಡುವವರಲ್ಲಿ ಮಿತ್ರರೊಬ್ಬರಾದ ಶಬ್ಬೀರ್ ಅಹ್ಮದ್ ಸಾಹಿಬ್ ಶಿಕಾಗೋದಿಂದ ಬಂದಿದ್ದರು. ಅವರು ಹೇಳಿದರು 'ಇಂದು ನಾವು ಎಷ್ಟು ಭಾಗ್ಯವಂತರಾಗಿದ್ದೇವೆ ಹುಝೂರೆ ಅನ್ವರ್(ಅತಬಿಅ) ಅವರ ಜೊತೆ ಭೇಟಿ ಮಾಡುವ ಅವಕಾಶ ದೊರೆತಿದೆ.'

* ಇನ್ನೋರ್ವ ಮಿತ್ರರಾದ ಅದೀಲ್ ಅಹ್ಮದ್ ಸಾಹಿಬ್ ಡೆಟ್ರಾಯಿಟ್‌ನಿಂದ ಬಂದಿದ್ದರು. ಅವರು ಹೇಳಿದರು 'ಇಂದು ನಾನು ತುಂಬಾ ಸಂತುಷ್ಟನಾಗಿದ್ದೇನೆ. ಮತ್ತು ಅದೃಷ್ಟವಂತನಾಗಿದ್ದೇನೆ. ನಮಗೆ ಅಲ್ಲಾಹನು ನಿಯುಕ್ತಗೊಳಿಸಿದ ಖಲೀಫರನ್ನು ಭೇಟಿ ಮಾಡುವ ಅವಕಾಶ ದೊರೆತಿದೆ.'

* ಅನ್ವರ್ ಹಸನ್ ಸಾಹಿಬ್ ಲಾಸ್‌ಏಂಜಲೀಸ್‌ನಿಂದ 2046 ಕಿ.ಮೀ ಮೈಲು ದೂರದ ಪ್ರವಾಸ ಮಾಡಿ ಭೇಟಿಗೋಸ್ಕರ ಬಂದಿದ್ದರು. ಭೇಟಿಯ ನಂತರ ಅವರು ಹೇಳಿದರು. 2013 ರಲ್ಲಿ ನಾನು ಒಂದು ಸ್ವಪ್ನವನ್ನು ಕಂಡಿದ್ದೆ. ನಾನು ಹುಝೂರೆ ಅನ್ವರ್ ಅವರ ಜೊತೆ ಒಂದು ಕಡಲ ತೀರದ ಸಮೀಪ ಭೇಟಿಯಾಗುತ್ತಿದ್ದೆ. ನಾನು ಈ ಸ್ವಪ್ನ ಪಾಕಿಸ್ತಾನದಲ್ಲಿದ್ದಾಗ ಕಂಡಿದ್ದೆ. ಆಗ ನಾನು ಅಮೇರಿಕಾಕ್ಕೆ ಬರುವ ಯಾವ ಭರವಸೆಯೂ ಇರಲಿಲ್ಲ. ಆದರೆ ಅಲ್ಲಾಹನು ನನಗೆ ಅಮೇರಿಕಾ ತಲುಪಿಸಿದ್ದಾನೆ. ಇದೀಗ ಒಂದು ಕಡಲ ತೀರದ ಸಮೀಪವೇ ನಾನು ಹುಝೂರರ ಜೊತೆ ಭೇಟಿಯಾಗುತ್ತಿದ್ದೇನೆ. ಇದು ನನ್ನ ಮೇಲೆ ಅಲ್ಲಾಹನ ಅನುಪಮ ಅನುಗ್ರಹವಾಗಿದೆ. ಅದಕ್ಕಾಗಿ ನಾನು ಅಲ್ಲಾಹನಿಗೆ ಎಷ್ಟು ಕೃತಜ್ಞನಾದರೂ ಕಡಿಮೆಯೇ.

* ಶಿಕಾಗೋ ಜಮಾಅತ್‌ನಿಂದ ಭೇಟಿ ಮಾಡಲು ಬಂದ ವಖಾಸ್‌ರವರಿಗೆ ತಾವು ಯಾರ ಪುತ್ರನೆಂಬುದು ಹುಝೂರರಿಗೆ ತಿಳಿದಿರುವ ವಿಷಯ ತಿಳಿದು ಅಪರಿಮಿತ ಸಂತೋಷವಾಯಿತು. ಏಕೆಂದರೆ ಅದು ನನ್ನ ಜೀವನದ ಪ್ರಥಮ ಭೇಟಿಯಾಗಿತ್ತು.

* ಉಸ್ಮಾನ್ ಝಿಂಞಾ ಸಾಹಿಬ್ St. Louis ಜಮಾಅತ್‌ನಿಂದ ಬಂದಿದ್ದರು. ಭೇಟಿಯ ನಂತರ ಹೇಳೀದರು ನಾನು ಸ್ವಯಂ ನನ್ನ ಕಣ್ಣುಗಳಿಂದ ಕಂಡಿದ್ದೇನೆ. ಹುಝೂರೆ ಅನ್ವರ್(ಅತಬಿಅ) ರ ಅನುಗ್ರಹಿತ ವ್ಯಕ್ತಿತ್ವದಲ್ಲಿ ಪ್ರತಾಪವಿದೆ. ನಾನು ಪ್ರಕಾಶವೇ ಕಂಡಿದ್ದೇನೆ.

* ಶಿಕಾಗೊದ ಸಲ್ಮಾನ್ ಅಹ್ಮದ್ ಸಾಹಿಬ್ ಅವರು ಹೇಳುತ್ತಾರೆ ನನಗೆ ವಿವರಿಸಲು ಶಬ್ದಗಳೆ ಸಿಗುತ್ತಿಲ್ಲ ಇಷ್ಟು ಹೇಳಬಲ್ಲೆ. ಅಲ್ಲಾಹನ ವಿಶೇಷವಾದ ಅನುಗ್ರಹ ನನ್ನ ಮೇಲಿರುವುದರಿಂದ ನನಗೆ ಭೇಟಿ ಮಾಡುವ ಭಾಗ್ಯ ದೊರೆತಿದೆ. ಮತ್ತು ನಾನು ಹುಝೂರೆ ಅನ್ವರ್ ಅವರಿಂದ ಆಶೀರ್ವಾದವನ್ನು ಪಡೆದುಕೊಂಡಿದ್ದೇನೆ. ಹುಝೂರ್ ನನಗೋಸ್ಕರ ಬಹಳಷ್ಟು ಪ್ರಾರ್ಥನೆಗಳನ್ನು (ದುಆ) ಮಾಡಿರುತ್ತಾರೆ.

ಭೇಟಿಯ ಈ ಕಾರ್ಯಕ್ರಮ 8:20 ಗಂಟೆಯವರೆಗೆ ನಡೆಯಿತು. ನಂತರ ಹುಝೂರೆ ಅನ್ವರ್ ಮಸ್ಜಿದ್ ಫತಹ ಅಝೀಮ್‌ಗೆ ಆಗಮಿಸಿ ಮಗ್ರಿಬ್ ಇಶಾ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ತಮ್ಮ ವಸತಿಯತ್ತ ತೆರಳಿದರು

**01 ಅಕ್ಟೋಬರ್ ಶನಿವಾರ**

ಹುಝೂರೆ ಅನ್ವರ್(ಅತಬಿಅ) ಮುಂಜಾನೆ 5:50 ಗಂಟೆಗೆ ಮಸ್ಜಿದ್ ಫತಹ್ ಅಝೀಮ್‌ಗೆ ಆಗಮಿಸಿ ನಮಾಝ್ ಫಜರ್ ನಿರ್ವಹಿಸಿಕೊಟ್ಟು ತನ್ನ ವಸತಿಗೆ ತೆರಳಿದರು. ಮುಂಜಾನೆ ಅಂಚೆಗಳನ್ನು ಪರಿಶೀಲಿಸಿದರು. ಇಲ್ಲಿ ಅಮೇರಿಕಾದ ಪ್ರವಾಸದ ವೇಳೆ ಲೋಕದ ವಿವಿಧ ದೇಶಗಳಿಂದ ದಿನಾಲೂ Fax ಇಮೇಲ್, ಪತ್ರಗಳು ಹಾಗೂ ವರದಿಗಳು ಕೈಸೇರುತ್ತಿದ್ದವು. ಇಲ್ಲಿ ಅಮೇರಿಕಾದವರಿಂದಲೂ ಪತ್ರಗಳು ಮತ್ತು ವಿವಿಧ ವಿಭಾಗಗಳ ವರದಿಗಳನ್ನು ಸಹ ಹುಝೂರರ ಸಮ್ಮುಖದಲ್ಲಿ ಪ್ರಸ್ತುತಪಡಿಸಲಾಗುತ್ತದೆ. ಅವರು ಆ ಪತ್ರಗಳನ್ನು ಮತ್ತು ವರದಿಗಳನ್ನು ಪರಿಶೀಲಿಸುತ್ತಾರೆ. ಮತ್ತು ಬೇಕಾದ ಸಲಹೆಗಳನ್ನು ನೀಡುತ್ತಾರೆ. ನಂತರ 1:30 ಗಂಟೆಗೆ ಮಸ್ಜಿದ್‌ಗೆ ಆಗಮಿಸಿ ಝುಹರ್ ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟು ತಮ್ಮ ವಸತಿಗೆ ತೆರಳಿದರು.

**ಓರ್ವ ಮಹಿಳೆ ಪತ್ರಕರ್ತರೊಂದಿಗಿನ ಸಂದರ್ಶನ**

ಕಾರ್ಯಕ್ರಮದ ಪ್ರಕಾರ ಐದು ಗಂಟೆಗೆ ಹುಝೂರೆ ಅನ್ವರ್(ಅತಬಿಅ) ಲೇಕ್ ಕೌಂಟಿ ಪತ್ರಿಕೆಯ ಪತ್ರಕರ್ತೆ ಯಾದಿರಾ ನ್ಯಾಂಚೆಜ್ ಓಲ್ಸನ್‌ರವರಿಗೆ ಸಂಧರ್ಶನ ನೀಡಲು ಪ್ರದರ್ಶನ ಸಭಾಂಗಣಕ್ಕೆ ಬಂದರು. ಆ ಪತ್ರಕರ್ತೆ ಮೊದಲು ಮಾಡಿದ ಪ್ರಶ್ನೆಯು– ಈ ಕಾಲದಲ್ಲಿ ಎಲ್ಲ ಕಡೆ ಅತ್ಯಂತ ಭಯ, ಅಪರಾಧಗಳು, ವಲಸೆ ಹೋಗುವಿಕೆ, ಆಹಾರದ ಕೊರತೆ ಮತ್ತು ಅಸುರಕ್ಷ ಭಾವನೆಗಳು ಇವೆ ಆದರೆ ಈ ಭಯ ದೂರ ಮಾಡಲು ನಿಮ್ಮ ಸಂದೇಶವೇನು? **(ಮುಂದುವರಿಯುವುದು)**

**ಪ್ರೀತಿ ಎಲ್ಲರಲ್ಲೂ, ದ್ವೇಶವಿಲ್ಲ ಯಾರಲ್ಲೂ**

**Love for All, Hatred for None**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800-103-2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ (ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.